ಶ್ರೀಮನ್ಮಹಾಮಾಹೇಶ್ವರಾಚಾರ್ಯ ಶ್ರೀಮದಭಿನವಗುಪ್ತಾಚಾರ್ಯ

ವಿರಚಿತ

ಪರಮಾರ್ಥಸಾರ

ಕನ್ನಡ ಅನುವಾದ ಸಹಿತ

ಎಸ್. ಎಸ್. ರಾಘವಾಚಾರ್ಯ
ಮೈಸೂರು ವಿಶ್ವವಿದ್ಯಾನಿಲಯ.

ಶ್ರೀಮನ್ಮಹಾಮಾಹೇಶ್ವರಾಚಾರ್ಯ ಶ್ರೀಮದಭಿನವಗುಪ್ತಾಚಾರ್ಯ

ವಿರಚಿತ

ಪರಮಾರ್ಥಸಾರ

ಕನ್ನಡ ಅನುವಾದ ಸಹಿತ

ಎಸ್. ಎಸ್. ರಾಘವಾಚಾರ್ಯ
ಮೈಸೂರು ವಿಶ್ವವಿದ್ಯಾನಿಲಯ.

ಮೊದಲನೆಯ ಮುದ್ರಣ—1960.

ಬೆಲೆ: ಒಂದು ರೂಪಾಯಿ

ಮುದ್ರಕರು :
ಶ್ರೀ ರಾಮ ಪ್ರೆಸ್
ರಂಗರಾವ್ ರೋಡ್, ಶಂಕರಪುರಂ, ಬೆಂಗಳೂರು-4.

ಮೊದಲ ಮಾತು

ಅಭಿನವ ಗುಪ್ತಾಚಾರ್ಯರ ಪ್ರಸನ್ನವೂ ಗಂಭೀರವೂ ಆದ "ಪರಮಾರ್ಥ ಸಾರ"ವನ್ನು ಸುಲಭರೀತಿಯಲ್ಲಿ ಕನ್ನಡ ಜನತೆಗೆ ಒದಗಿಸಬೇಕೆಂಬ ಬಯಕೆ ಈಗ ಪೂರ್ತಿಯಾಗುತ್ತಿದೆ. ಮೂಲ ಕೃತಿಯೊಡನೆ, ಅನುವಾದ, ಟಿಪ್ಪಣಿ ಮತ್ತು ಮುನ್ನುಡಿಗಳನ್ನು ಪ್ರಕಟಿಸುವುದರಿಂದ, ಪ್ರತಿಪಾದ್ಯ ದರ್ಶನದ ಸ್ವರೂಪ ಮತ್ತು ಆಚಾರ್ಯರ ನಿರೂಪಣೆಯ ಮಾರ್ಗ ಇವು ಪರಿಚಿತವಾಗುವು ವೆಂದು ನಂಬಿಕೆ.

ಇಲ್ಲಿ ಪ್ರಕಟಿಸಿರುವ ಮೂಲಕ್ಕೆ ಕಾಶ್ಮೀರ ಸರ್ಕಾರದಿಂದ ಮುದ್ರಿತವಾದ "ಪರಮಾರ್ಥಸಾರ"ವೇ ಆಧಾರ. ಯೋಗರಾಜನ ವ್ಯಾಖ್ಯಾನದಿಂದ ಒದಗಿ ರುವ ಸಹಾಯವನ್ನು ತೆಗೆದುಕೊಂಡು, ಮೂಲಕ್ಕೆ ಸಮೀಪವೂ ಸರಳವೂ ಆದ ಅನುವಾದವನ್ನು ಒದಗಿಸಲು ಪ್ರಯತ್ನಿಸಲಾಗಿದೆ. ಟಿಪ್ಪಣಿಗಳು ಉಪಯು ಕ್ತವೂ ಅಗತ್ಯವೂ ಆದ ಅಂಶಗಳನ್ನು ಪುಷ್ಟೀಕರಿಸಿ ಕ್ಲಿಷ್ಟವಾದ ವಾಕ್ಯ ಮತ್ತು ಭಾವಗಳನ್ನು ಸುಲಭಗೊಳಿಸಲು ಪ್ರಯತ್ನಿಸುತ್ತಿವೆ. ಮುನ್ನುಡಿಯಲ್ಲಿ ಕಾಶ್ಮೀರ ಶೈವದರ್ಶನದ ಮೂಲ ತತ್ತ್ವಗಳನ್ನು ಸ್ಥೂಲವಾಗಿ ಪ್ರತಿಪಾದನೆ ಮಾಡಲಾಗಿದೆ. ಅಮೂಲ್ಯವಾದ ಮೂಲಕೃತಿಯ ಅಧ್ಯಯನವು ಸಪ್ರಯೋಜ ನವೂ, ಸುಖಕರವೂ ಆಗಲೆಂದು ಈ ಸಹಾಯಕ ಸಾಮಗ್ರಿಗಳನ್ನು ಒದಗಿಸ ಲಾಗಿದೆ.

ಈ ಉದ್ಯಮದಲ್ಲಿ ಮೊದಲಿನಿಂದ ಕೊನೆಯವರೆಗೆ, ಸ್ಫೂರ್ತಿ ಕೊಡುವುದ ರಿಂದ ಹಿಡಿದು ಮುದ್ರಣದ ಮೇಲ್ವಿಚಾರಣೆಯವರೆಗೆ, ಶ್ರೀ ಹೆಮ್ಮಿಗೆ ದೇಶಿಕಾ ಚಾರ್ಯರು ಕಾರ್ಯನಿರ್ವಾಹಮಾಡಿದ್ದಾರೆ. ಅವರಿಗೆ ನಾನು 'ಚಿರಋಣಿ' ಎಂದರೂ ಕರ್ತೃತ್ವಾಭಿಮಾನವಾಗುವುದು. ಒಳ್ಳೆಯಕೃತಿ ಪ್ರಕಟವಾಯಿತೆಂದು ಧನ್ಯತೆ. ಇದನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ರಾಮ ಪ್ರೆಸ್ ಅವರಿಗೆ ನನ್ನ ಧನ್ಯವಾದಗಳು,

ರಥಸಪ್ತಮಿ, ವಿಕಾರಿಸಂವತ್ಸರ
4 - 2 - 1960

S. S. ರಾಘವಾಚಾರ್ಯ.

ಮುನ್ನುಡಿ

ವಿಶ್ವದ ರಹಸ್ಯವನ್ನು ಸಮಗ್ರದೃಷ್ಟಿಯಿಂದ ಅನ್ವೇಷಣೆ ಮಾಡುವುದು ದರ್ಶನದ ಮುಖ್ಯ ಗುರಿ. ಈ ಉದ್ಯಮದಲ್ಲಿ ತೀವ್ರನಿಷ್ಠೆ ಮತ್ತು ಬಹುಮುಖವಾದ ಪರಿಶೀಲನೆ ಇವುಗಳ ಮೂಲಕ ಪ್ರವೃತ್ತರಾಗಿ ತತ್ತ್ವನಿರ್ಣಯವನ್ನು ಮುಟ್ಟಿದ ಮಹಾ ದಾರ್ಶನಿಕರ ಪಂಙ್ಕ್ತಿಯಲ್ಲಿ ಸೇರುವವರು ಅಭಿನವಗುಪ್ತಾಚಾರ್ಯರು. ಇವರ ಕಾಲ ಸುಮಾರು ಹತ್ತನೆಯ ಶತಮಾನ. ದೇಶ ಕಾಶ್ಮೀರ. ಇವರು 'ಶಿವಾದ್ವೈತ', 'ಪ್ರತ್ಯಭಿಜ್ಞಾದರ್ಶನ' ಎಂದು ಪ್ರಸಿದ್ಧವಾದ ಸಂಪ್ರದಾಯಕ್ಕೆ ಸೇರಿದವರು. ಅದರ ಸರ್ವತೋಮುಖವಾದ ಪುಷ್ಟಿಗೆ ಇವರು ಕಾರಣರಾದರು. ಇವರ ಅನೇಕ ಗ್ರಂಥಗಳಲ್ಲಿ 'ಪರಮಾರ್ಥಸಾರ'ವೆಂಬ ಕೃತಿಗೆ ಒಂದು ವಿಶಿಷ್ಟ ಸ್ಥಾನವಿದೆ. ನೂರು ಕಾರಿಕೆಗಳಲ್ಲಿ ಬೃಹದ್ದರ್ಶನದ ಸಾರವನ್ನು ಗ್ರಂಥಕಾರರು ಇದರಲ್ಲಿ ನಿರೂಪಿಸಿದ್ದಾರೆ. ಹಿಂದಿನ 'ಆಧಾರಕಾರಿಕೆ' ಎಂಬ ಗ್ರಂಥದ ಆಧಾರದಿಂದ ಇದು ನಿರ್ಮಿತವಾಯಿತೆಂದು ಅವರೇ ಹೇಳಿರುವರು. ಸಾಂಪ್ರದಾಯಿಕತೆ ಮತ್ತು ಸಾರನಿರ್ವಚನ ಈ ಎರಡು ದೃಷ್ಟಿಯಿಂದಲೂ ಇದು ಉತ್ತಮ ಗ್ರಂಥವಾಗಿದೆ. ಅಭಿನವಗುಪ್ತರು ತಮ್ಮ ಚೇತಸ್ಸು ಶಿವಚರಣ-ಸ್ಮರಣ ದೀಪ್ತವಾದಾಗ ಈ ಕೃತಿ ಹೊರಹೊಮ್ಮಿತೆಂದು ಹೇಳುತ್ತಾರೆ. ಆದುದರಿಂದಲೇ ಇದರಲ್ಲಿ ಸಾಕ್ಷಾತ್ಕಾರಜನ್ಯವಾದ ಸ್ಫೂರ್ತಿಯನ್ನು ಕಾಣಬಹುದು.

ದರ್ಶನ ಪ್ರಪಂಚದಲ್ಲಿ ಪ್ರಸಿದ್ಧರಾದ ಪಾರ್ಮೆನಿಡಸ್, ಪ್ಲೋಟಿನಸ್, ಲಾವುಟ್ಸೆ, ಸ್ಪಿನೋಜ, ಹೇಗಲ್ ಇವರ ಮತದಂತೆ ಈ ದರ್ಶನದ ಪ್ರಕ್ರಿಯೆಯಲ್ಲಿಯೂ ಪರಮಾರ್ಥ ತತ್ತ್ವ ನಿತ್ಯವೂ ಏಕವೂ ಅದ್ವಿತೀಯವೂ ಅಖಂಡವೂ ಆಗಿದೆ. ಈ ಮೂಲತತ್ತ್ವ ಚೈತನ್ಯ ಸ್ವರೂಪ. ಹೀಗೆ ಈ ದರ್ಶನವು "ಆತ್ಮಾದ್ವೈತ" (Idealistic Monism) ವಾಗಿದೆ. ಈ ವಾದದ ಪರಿಭಾಷೆಯಲ್ಲಿ ಪರತತ್ತ್ವಕ್ಕೆ "ಶಿವ'ನೆಂದು ನಿರ್ದೇಶ.

ತರ್ಕ, ಯೋಗಿಪ್ರತ್ಯಕ್ಷ, ಉಪನಿಷತ್ತುಗಳು, ಗೀತೆ, ಶಿವಾಗಮಗಳು ಇವುಗಳ ಪ್ರಮಾಣದಮೇಲೆ ಈ ಸಿದ್ಧಾಂತ ಕಟ್ಟಲ್ಪಟ್ಟಿದೆ. ಪರಮಾತ್ಮ

ವಸ್ತು ಸ್ವರೂಪತಃ ಅನಂತಶಕ್ತಿಪರಿಪೂರ್ಣ. 'ಪರಮಾತ್ಮ ನಿರ್ಗುಣ ನಿಷ್ಕ್ರಿಯ ನಿಷ್ಪ್ರಪಂಚ' ಎಂದು ಹೇಳುವ ಅದ್ವೈತವಾದವಲ್ಲ ಇದು. ಹಾಗೆಯೇ 'ವಿಜ್ಞಾನಗಳ ಪ್ರವಾಹವೇ' ಪರಮಾರ್ಥವೆಂದು ಹೇಳುವ ವಿಜ್ಞಾನಾದ್ವೈತವೂ ಅಲ್ಲ. ಆತ್ಮನ ಅಖಂಡತ್ತ್ವ ನಿತ್ಯತ್ವ ಇವನ್ನು ಸಮರ್ಥಿಸಿ ಅವನು ಶಕ್ತಿ ಪರಿಪೂರ್ಣ, ಸಕ್ರಿಯ ಎಂದು ಹೇಳುವ ಮಧ್ಯಸ್ಥವಾದವಾಗಿದೆ ಇದು ! 'ಬಾಹ್ಯ ಜಡವಸ್ತು ಪರಮಾರ್ಥವಲ್ಲ; ಏಕೈಕ ತತ್ತ್ವವಾದ ಪರಮಾತ್ಮನು ಮೂಲ ಭೂತವಾದ ಚಿತ್, ಆನಂದ, ಇಚ್ಛೆ, ಜ್ಞಾನ, ಕ್ರಿಯೆ ಎಂಬ ಪಂಚ ಶಕ್ತಿಗಳಿಂದ ಪೂರ್ಣನಾಗಿದ್ದಾನೆ' ಎಂದು ಈ ವಾದದ ಪ್ರತಿಪಾದನೆ. ಈ ಶಕ್ತಿಗಳ ಸ್ವತಂತ ವಾದ ವಿಕಾಸ, ಅಭಿವ್ಯಕ್ತಿ ಇದೇ ಜಗನ್ನಿರ್ಮಾಣ.

ಈ ನಿರ್ಮಾಣದಲ್ಲಿ ನಾಲ್ಕು ಭೂಮಿಕೆಗಳನ್ನು ನಿರೂಪಿಸಲಾಗಿದೆ, ಮೊದಲನೆಯ ಭೂಮಿಕೆಯಲ್ಲಿ ಶಿವನು ಶಿವ, ಶಕ್ತಿ, ಸದಾಶಿವ, ಈಶ್ವರ, ವಿದ್ಯಾ, ಎಂಬ ಐದು ಶುದ್ಧ ತತ್ತ್ವಗಳಾಗಿ ಆವಿಷ್ಕಾರ ಹೊಂದುವನು. ಶಿವತತ್ತ್ವವು ಚಿತ್ಪ್ರಧಾನವಾದದ್ದು. ಶಕ್ತಿತತ್ತ್ವ ಆನಂದ ಪ್ರಧಾನವಾಗಿ, ಸೃಷ್ಟಿ ರೂಪ ವಿಕಾಸಕ್ಕೆ ಕಾರಣವಾದದ್ದು. ಸದಾಶಿವತತ್ತ್ವದಲ್ಲಿ 'ನಾನು' ಎಂದು ಆತ್ಮನೂ 'ಇದು' ಎಂದು ವಿಷಯ ಪ್ರಪಂಚವೂ, ಸ್ಫುರಿಸುತ್ತವೆ. ಆದರೂ ಆತ್ಮಾಂಶವೇ ಪ್ರಧಾನವಾಗಿದೆ. ಈಶ್ವರ ತತ್ತ್ವದಲ್ಲಿ 'ನಾನು', 'ಇದು' ಎಂಬ ಇವೆರಡೂ ಸಮಪ್ರಧಾನವಾಗಿ ಸ್ಫುರಿಸುತ್ತವೆ. 'ನಾನು' ಎಂಬ ಗ್ರಾಹಕಾಂಶವು ಅಪ್ರಧಾನ ವಾಗಿ 'ಇದು'ಎಂಬ ಗ್ರಾಹ್ಯಾಂಶವು ಪ್ರಧಾನವಾದ ಅವಸ್ಥೆಗೆ ಶುದ್ಧವಿದ್ಯಾತತ್ತ್ವ ವೆಂದು ಹೆಸರು. ಈ ಐದು ತತ್ತ್ವಗಳ ಅಭಿವ್ಯಕ್ತಿಗೆ ಶಕ್ತ್ಯಂಡವೆಂದು ಹೆಸರು.

ಎರಡನೆಯ ಭೂಮಿಕೆಗೆ ಮಾಯಾಂಡವೆಂದು ಹೆಸರು. ಇಲ್ಲಿ ಮೊದಲನೇ ತತ್ತ್ವ ಮಾಯೆ. ಇದು ಶಿವನ ಅಘಟಿತಘಟನಾ ಸಾಮರ್ಥ್ಯ. ಮಾಯೆಯಿಂದ ಶಿವನು ತನ್ನನ್ನು ಮುಚ್ಚಿಕೊಳ್ಳುತ್ತಾನೆ. ಇದರಿಂದ ಮುಂದೆ ಕಾಲ, ಕಲಾ, ನಿಯತಿ, ರಾಗ, ಅವಿದ್ಯಾ ಎಂಬ ಐದು ತತ್ತ್ವಗಳು ಕ್ರಮವಾಗಿ ಉದ್ಭವಿಸುವುವು. ಆತ್ಮನು ಸರ್ವ ಕರ್ತೃತ್ವವು ಸಂಕುಚಿತವಾಗಿ ಅಲ್ಪ ಕರ್ತೃತ್ವವಾಗುವಿಕೆಗೆ 'ಕಲಾ' ಎಂದು ಹೆಸರು. ಪೂರ್ವಾಪರ ವ್ಯವಹಾರಕ್ಕೆ ಮತ್ತು ತನ್ಮೂಲಕವಾದ ಪರಿಮಿತಿಗಳಿಗೆ ಹೇತುವಾಗಿರುವುದು ಕಾಲತತ್ತ್ವ. ನಿಯತವಾದ ಕಾರ್ಯಕಾರಣ ಸಂಬಂಧವೇ 'ನಿಯತಿ' ತತ್ತ್ವ. ಹಾಗೆಯೇ ರಾಗ, ಅಲ್ಪಜ್ಞತೆ ಬರುವುವು. ಮಾಯೆ, ಕಲಾ,

ಕಾಲ, ನಿಯತಿ, ರಾಗ, ಅವಿದ್ಯೆ ಎಂಬ ಈ 'ಕಂಚುಕಷಟ್ಕ'ದಿಂದ ಆಚ್ಛಾದಿತನಾದ ಶಿವನೇ 'ಅಣು' 'ಪಶು' ಎನ್ನಿಸಿಕೊಳ್ಳುವ ಜೀವ.

ಮೂರನೆಯ ಭೂಮಿಕೆ ಪ್ರಕೃತ್ಯಂಡ. ಇದರಲ್ಲಿ ಪ್ರಕೃತಿ ಮೊದಲನೆಯ ತತ್ತ್ವ. ಅದು ಸತ್ವ, ರಜಸ್ಸು, ತಮಸ್ಸು, ಇವುಗಳ ಸಮಾಹಾರವಾಗಿದೆ. ನಿಶ್ಚಯಾತ್ಮಕವಾದದ್ದು ಬುದ್ಧಿ. ಅಭಿಮಾನಾತ್ಮಕವಾದದ್ದು ಅಹಂಕಾರ. ಸಂಕಲ ಮನಸ್ಸಿನ ವೃತ್ತಿ. ಬುದ್ಧಿ ಅಹಂಕಾರ ಮನಸ್ಸು ಇವು ಮೂರು ಸೇರಿ ಅಂತಃಕರಣವೆನಿಸಿಕೊಳ್ಳುತ್ತವೆ. ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ತನ್ಮಾತ್ರಗಳು, ಇವೂ ಈ ಅಂಡಕ್ಕೆ ಸೇರಿರುವುವು. ತನ್ಮಾತ್ರಗಳು, ಎರಡು ಇಂದ್ರಿಯ ವರ್ಗಗಳು, ಅಂತಃಕರಣ, ಇವೆಂಟೂ "ಪುರ್ಯಷ್ಟಕ"ವೆನಿಸಿಕೊಂಡಿವೆ.

ನಾಲ್ಕನೆಯ ಭೂಮಿಕೆಗೆ ಪೃಥಿವ್ಯಂಡವೆಂದು ಹೆಸರು. ಇಲ್ಲಿ ಐದು ಮಹಾಭೂತಗಳು ಅವುಗಳ ಕಾರ್ಯವರ್ಗ ಇವೆಲ್ಲಾ ಸೃಷ್ಟಿ ಹೊಂದುತ್ತವೆ. ಶಿವನು ಹೀಗೆ ಮೂಲತಃ ತನ್ನನ್ನು ಆವರಣಮಾಡಿಕೊಂಡು ಮಾಯಾಂಡ, ಪ್ರಕೃತ್ಯಂಡ, ಪೃಥಿವ್ಯಂಡ ಇವುಗಳಿಂದ ಆಚ್ಛಾದಿತನಾಗಿ ಜೀವನಾಗುತ್ತಾನೆ.

ಈ ಪ್ರಕ್ರಿಯೆಯಲ್ಲಿ ಗುರುತಿಸಬೇಕಾದ ಅಂಶಗಳು ಇವು. (1) ಶಿವನ ಶಕ್ತಿಯ ಪರಿಣಾಮವೇ ಸೃಷ್ಟಿ (2) ಸೃಷ್ಟಿಯ ಒಳಗೆ ಬಂಧ ಹೊಂದಿದ ಪಶುವೂ ಶಿವನೇ (3) ತತ್ತ್ವ ನಿರೂಪಣೆಯಲ್ಲಿ ಸಾಂಖ್ಯರ ಇಪ್ಪತ್ತೈದು ತತ್ತ್ವಗಳಿಗೆ ಶಕ್ತ್ಯಂಡ ಮತ್ತು ಮಾಯಾಂಡ ಸೇರಿರುವುದರಿಂದ ತತ್ತ್ವ ಸಂಖ್ಯೆ ಮೂವತ್ತಾರಾಗುತ್ತದೆ.

ಪರಶಿವ

ಶಕ್ತ್ಯಂಡ: ಶಿವ. ಶಕ್ತಿ, ಸದಾಶಿವ, ಈಶ್ವರ, ವಿದ್ಯಾ.

ಮಾಯಾಂಡ : ಮಾಯಾ, ಕಾಲ, ಕಲಾ, ನಿಯತಿ, ರಾಗ, ಅವಿದ್ಯಾ.

ಪ್ರಕೃತ್ಯಂಡ : ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್ಸು, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ತನ್ಮಾತ್ರೆಗಳು.

ಪೃಥಿವ್ಯಂಡ: ಪೃಥ್ವೀ, ಅಪ್, ತೇಜಸ್ಸು, ವಾಯು, ಆಕಾಶ.

ಜೀವ

ಸೃಷ್ಟಿಯಲ್ಲಿ ಅಭಿವ್ಯಕ್ತವಾಗಿರುವ ತತ್ತ್ವಗಳಿಗೂ ಮೂಲ ವಸ್ತುವಾದ ಪರಶಿವನಿಗೂ ಇರುವ ಸಂಬಂಧವೇನು? ಇದು ಬಹು ಮುಖ್ಯ ಪ್ರಶ್ನೆ. ಈ ಸಿದ್ಧಾಂತದಲ್ಲಿ ಅಭೇದವೇ ಪರಮಾರ್ಥವಾಗಿರುವುದರಿಂದ ಅವು ಮೂಲವಸ್ತು ವಿಗಿಂತ ಬೇರೆಯಲ್ಲ. ಆದರೆ ಅವು ಮೂಲವಸ್ತುವಿನ ಅಸತ್ಯವಾದ ತೋರು ವಿಕೆಯೇ? ವಿವರ್ತವೇ? ತತ್ತ್ವ ವೈವಿಧ್ಯ, ಕಾರ್ಯ ಪ್ರಪಂಚ ಇವು ಮಿಥ್ಯೆ ಎಂದು ಈ ದರ್ಶನ ಹೇಳುವುದಿಲ್ಲ. ದರ್ಶನಕಾರರು "ಆಭಾಸವಾದ"ವೆನ್ನುವ ವಿಶಿಷ್ಟದೃಷ್ಟಿಯನ್ನು ಮುಂದಿಡುತ್ತಾರೆ. ವೈವಿಧ್ಯ ಪೂರ್ಣವಾದ ಪ್ರಪಂಚ ಪರಮಾತ್ಮನಲ್ಲಿಯೇ ಇದೆ. ಅವನಿಗಿಂತ ಭಿನ್ನವಾಗಿಯೂ ತೋರುವುದು. ಬ್ರಹ್ಮ ಮತ್ತು ಪ್ರಪಂಚಕ್ಕೆ ಭೇದಾಭೇದ ಸಂಬಂಧವನ್ನು ಸಮರ್ಥನೆಮಾಡಿ ಬ್ರಹ್ಮನ ಅದ್ವಿತೀಯತ್ವ ಮತ್ತು ಪ್ರಪಂಚದ ಸತ್ಯತ್ವ ಎರಡನ್ನು ರಕ್ಷಿಸಲು ಈ ದರ್ಶನದಲ್ಲಿ ಪ್ರಯತ್ನಿಸಲಾಗಿದೆ.

ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬ ಕನ್ನಡಿಗಿಂತ ಬೇರೆ ಅಲ್ಲ. ಅದು ಕೇವಲ ಕನ್ನಡಿಯೂ ಅಲ್ಲ. ಕನ್ನಡಿಯ ಪ್ರತಿಬಿಂಬಕ್ಕೆ ಮೂಲವಾಗಿ ಬೇರೆ ಬಿಂಬವಿರಬೇಕು. ಆದರೆ ಪ್ರಪಂಚರೂಪವಾದ ಪ್ರತಿಬಿಂಬವನ್ನು ಶಿವನು ತನ್ನಲ್ಲಿ ತನ್ನ ಸ್ವಾತಂತ್ರ್ಯ ಮಹಿಮೆಯಿಂದ ಬಿಂಬವಿಲ್ಲದೆಯೇ ಸೃಷ್ಟಿಸುತ್ತಾನೆ. ತಾನೂ ಅಖಂಡವಾಗಿದ್ದುಕೊಂಡು ತನ್ನಲ್ಲಿಯೇ ನಾನಾಭಾವವನ್ನು ನಿರ್ಮಾಣ ಮಾಡಿಕೊಂಡು ಅವನ್ನು ಅನುಭವ ಮಾಡುವುದು ಆತ್ಮನ ನೈಜಶಕ್ತಿ.

ಈ ಸಿದ್ಧಾಂತಕ್ಕೆ ಅತ್ಯಂತ ಸಮೀಪವಾದ ಕಲ್ಪನೆಯನ್ನು ಆಂಗ್ಲದಾರ್ಶನಿಕ ಬೊಸಾಂಕ್ವೆಟ್ (Bosanquet) ಮತದಲ್ಲಿ ಕಾಣುತ್ತೇವೆ. ಆತನು ಕವಿಚಿತ್ತಕ್ಕೂ ಕವಿಕೃತಿಯ ಪ್ರಪಂಚಕ್ಕೂ ಇರುವ ಸಂಬಂಧದ ಮೂಲಕ ಭೇದಾಭೇದ ತತ್ತ್ವದ ವಿವರಣೆಯನ್ನು ಮಾಡಲು ಯತ್ನಿಸುತ್ತಾನೆ. ಡಾಂಟೆಯಂತಹ ಮಹಾಕವಿಯ ಪ್ರತಿಭೆಗೂ ತನ್ನಿರ್ಮಿತವಾದ ಕಾವ್ಯಗತ ಪ್ರಪಂಚಕ್ಕೂ ಕೇವಲ ಭೇದವನ್ನಾಗಲೀ ಕೇವಲ ಅಭೇದವನ್ನಾಗಲೀ ಹೇಳಲಾಗುವುದಿಲ್ಲ. ಹಾಗೆಯೇ ಪೂರ್ಣವಾದ ಪರಮಾರ್ಥವಸ್ತುವಿಗೂ, ಅದರಲ್ಲಿ ರೂಪಗೊಂಡ

ವಿಶ್ವಕ್ಕೂ ಭೇದಾಭೇದವನ್ನು ಹೇಳಬೇಕೆಂದು ಬೊಸಾಂಕ್ವೆಟ್ ಸಮರ್ಥಿಸುತ್ತಾನೆ. ಇದೇ ಆಭಾಸವಾದದ ತಿರುಳು.[1]

ವೇದಾಂತ ಪ್ರಸಿದ್ಧವಾದ ಏಕತತ್ತ್ವವಾದವನ್ನು ಪ್ರತಿಷ್ಠೆ ಮಾಡಿಕೊಂಡು ಶೈವಾಗಮಗಳಲ್ಲಿ ಪ್ರತಿಪಾದಿತವಾದ ಮೂವತ್ತಾರು ತತ್ತ್ವಗಳನ್ನೂ ಆ ಏಕತತ್ತ್ವದ ಶಕ್ತಿಸ್ಫುರಣ ರೂಪವಾದ ಆಭಾಸವೆಂದು ಹೇಳುವುದು ಈ ದರ್ಶನದ ವೈಶಿಷ್ಟ್ಯ.

ಇಷ್ಟು ತತ್ತ್ವಚಿಂತನೆಯಾಯಿತು. ಇಷ್ಟರಿಂದಲೇ ಪುರುಷಾರ್ಥ ಸ್ವರೂಪವೂ ನಿರ್ಣೀತವಾಗುವುದು. "ಪಶು"ವಾದ ಜೀವನು ಸ್ವಕಲ್ಪಿತ ಜಾಲಾವೃತನಾದ ಶಿವನೇ ಅಲ್ಲದೆ ಬೇರೆ ವ್ಯಕ್ತಿಯಲ್ಲ. ಆ ಆವರಣವನ್ನು ಕಿತ್ತೊಗೆದು ಜೀವನು ತನ್ನ ಸ್ವರೂಪಸಿದ್ಧವಾದ ಶಿವತ್ವವನ್ನು ಸಾಧಿಸುವುದೇ ಪುರುಷಾರ್ಥ. ಸಲಿಲದಲ್ಲಿ ಸಲಿಲದಂತೆ, ಕ್ಷೀರದಲ್ಲಿ ಕ್ಷೀರದಂತೆ, ಸ್ವರೂಪವನ್ನು 'ಪ್ರತ್ಯಭಿಜ್ಞೆ' ಮಾಡಿಕೊಂಡ ಜೀವನು ಶಿವನಲ್ಲಿ ಬ್ರಹ್ಮನಿರ್ವಾಣವನ್ನು ಹೊಂದುವನು.

ಈ ಶಿವಾದ್ವೈತ ಸಂಪಾದನೆಯೇ ಮುಕ್ತಿ. ಗುರುಸೇವಾ ಸಮಧಿಗತವಾದ ಶಾಸ್ತ್ರೋಪದೇಶದಿಂದ, ಮನನದಿಂದ ಸಮ್ಯಕ್ ಯೋಗದಿಂದ ಈ ಅನುಪಮವಾದ ಶಿವೈಕ್ಯವು ಸಿದ್ಧಿಸುವುದು. ಇದರ ಪ್ರಾಪ್ತಿಗೆ ಕೊನೆಯ ಮತ್ತು ಅತ್ಯಂತ ಮುಖ್ಯವಾದ ಸಾಧನವೆಂದರೆ ಶಿವಾನುಗ್ರಹ. ಈ ಅನುಗ್ರಹಕ್ಕೆ 'ಶಿವಶಕ್ತಿಪಾತ'ವೆಂದು ಸಂಪ್ರದಾಯದ ಪರಿಭಾಷೆ.

ಶಿವನೇ ಆತ್ಮನನ್ನು ಆವರಣಾಂತರ್ಗತ ಮಾಡಿಕೊಂಡು ಬದ್ಧನಾಗುವನು; ಅವನೇ ಆವರಣದಿಂದ ಮುಕ್ತಿಯನ್ನು ಸಾಧಿಸುವನು. ಇದು ಅವನ ಕ್ರೀಡೆ. ಸ್ವಾತ್ಮವಿಸ್ಮರಣೆ, ಸ್ವಾತ್ಮಪ್ರತ್ಯಭಿಜ್ಞೆ ಆ ಕ್ರೀಡೆಯ ಎರಡು ಅಂಕಗಳು.[2]

ಆತ್ಮನ ಸಹಜ ಭಾವದ ಪ್ರಾಪ್ತಿಯೇ ಮುಕ್ತಿಯಾದುದರಿಂದ ಅದು ದೇಹಪಾತಾನಂತರ ಬರುವ ಯಾವುದೋ ಅಪೂರ್ವ ಆಮುಷ್ಮಿಕ ಅವಸ್ಥೆಯಲ್ಲ.

---

1 "Principle of Individuality and Value"
PP. 379-386. "An audacious illustration"

2 The Absolute goes out of itself in order to return to itself.

ಅವಿದ್ಯೆಯೇ ಬಂಧ, ತತ್ತ್ವಸಾಕ್ಷಾತ್ಕಾರವೇ ಮೋಕ್ಷ. ಈ ಕಾರಣದಿಂದ ಜೀವನಿಗೆ ತನ್ನ ಬ್ರಹ್ಮತ್ವವು ಅನುಭವಾರೂಢವಾದೊಡನೆ ಅವನು ಮುಕ್ತ. ಅವನು ಸದೇಹನಾಗಿದ್ದರೂ ಶೋಕ, ಮೋಹ, ಕರ್ಮಬಂಧ, ಭೀತಿ ಇವನ್ನು ಮೀರಿರುವನು. ಇದು ಜೀವನ್ಮುಕ್ತಿ. ಅಭಿನವಗುಪ್ತರ ಜೀವನ್ಮುಕ್ತಿವರ್ಣನೆ ಅತ್ಯಂತ ಹೃದಯಂಗಮವಾಗಿದೆ. ಅಣುತ್ವ, ಮಾಯೆ, ಕರ್ಮ ಎಂಬ ಕೋಶ ತ್ರಯದಿಂದ ಪ್ರತ್ಯಕ್ಷತಃ ಉತ್ತೀರ್ಣವಾಗುವುದು ಸಾಧ್ಯ. ಅದೇ ಪರಮ ಮುಕ್ತಿ. ಈ ಸರ್ವಾತ್ಮಭಾವವನ್ನು ಗಳಿಸಿದವನ ಶರೀರಪಾತ ಹೇಗಾದರೂ ಆಗಬಹುದು. ಅದರ ರೀತಿ, ಕಾಲ, ಸ್ಥಾನ, ಇವು ಅವನ ಸಿದ್ಧಿಯಮೇಲೆ ಯಾವ ಪರಿಣಾಮವನ್ನೂ ಹೊಂದಿಲ್ಲ. ಕಾರಣವೇನೆಂದರೆ ಅವನು "ಜ್ಞಾನ ಸಮಕಾಲ ಮುಕ್ತ."

ಶಿವಮಾರ್ಗದಲ್ಲಿ ಔನ್ಮುಖ್ಯ ಬಂದು ಅನಂತರ ಸಮ್ಯಕ್ ಮಾರ್ಗದಿಂದ ಭ್ರಷ್ಟನಾದವನ ಗತಿಯೇನು? ಇದು ಅರ್ಜುನನನ್ನೂ ಅಭಿನವಗುಪ್ತಾ ಚಾರ್ಯರನ್ನೂ ಎದುರಿಸಿದ ಒಂದು ಮುಖ್ಯ ಪ್ರಶ್ನೆ - ಗೀತಾಚಾರ್ಯನ ರಾಜ ಮಾರ್ಗವನ್ನನುಸರಿಸಿ ಅಭಿನವಗುಪ್ತರು ಆಧ್ಯಾತ್ಮಿಕ ಭರವಸೆಯನ್ನು ನೀಡು ತ್ತಾರೆ. ಯೋಗಭ್ರಷ್ಟನೂ ಶಿವನನ್ನು ಸೇರುವನು. ಆದರೆ ವಿಳಂಬವಾಗಿ ಸೇರುವನು. ಭ್ರಂಶ ಆತ್ಯಂತಿಕವಲ್ಲ. ಭ್ರಷ್ಟ ಯೋಗಿಯೂ ಅಭ್ಯುದಯ ಫಲ ವನ್ನು ಅನುಭವಿಸಿ ಕ್ರಮೇಣ ಯೋಗಮಾರ್ಗಕ್ಕೆ ಪುನಃ ಸೆಳೆಯಲ್ಪಡುವನು. ಪರಮಾರ್ಥಮಾರ್ಗದಲ್ಲಿ ''ಅಭಿಕ್ರಮನಾಶ"ವಿಲ್ಲ. ಕರುಣಾಳು ಅಭಿನವ ಗುಪ್ತರ ಕೊನೆಯ ಸಂದೇಶ ಇದು :

" ಪರಮಾರ್ಥೇ ಯಥಾ ತಥಾಪಿ ಪ್ರಯತನೀಯಂ "

॥ ಶ್ರೀಃ ॥

ಶ್ರೀಮನ್ಮಹಾಮಾಹೇಶ್ವರಾಚಾರ್ಯ ಶ್ರೀಮದಭಿನವಗುಪ್ತಾಚಾರ್ಯ

ವಿರಚಿತವಾದ

ಪ ರ ಮಾ ರ್ಥ ಸಾ ರ

ಪರಂ ಪರಸ್ಥಂ ಗಹನಾತ್ ಅನಾದಿಂ
ಏಕಂ ನಿವಿಷ್ಟಂ ಬಹುಧಾ ಗುಹಾಸು
ಸರ್ವಾಲಯಂ ಸರ್ವಚರಾಚರಸ್ಥಂ
ತ್ವಾಮೇವ ಶಂಭುಂ ಶರಣಂ ಪ್ರಪದ್ಯೇ ೧

[1]ಪರನೂ [2]ಗಹನದತ್ತಲಿಂದ ಮೇಲಿರುವವನೂ ಅನಾದಿಯೂ [3]ಒಬ್ಬನೇ [ಆಗಿ ಹಲವು] ಗುಹೆಗಳಲ್ಲಿ ಬಹು ಪ್ರಕಾರವಾಗಿ ನೆಲಸಿರುವವನೂ ಸರ್ವಕ್ಕೂ ಆಸರೆಯಾದವನೂ ಸರ್ವಚರಾಚರಗಳಲ್ಲಿ ಇರುವವನೂ ಆದ [4]ಶಂಭುವೇ! ನಿನ್ನನ್ನೇ ಮರೆಹೊಗುತ್ತೇನೆ.

1. ಪೂರ್ಣ ಚಿದಾನಂದೇಚ್ಛಾಜ್ಞಾನ ಕ್ರಿಯಾಶಕ್ತಿ ನಿರ್ಭರನೂ ತನಗೆ ಮೇಲೆನಿಸಿದ ವಸ್ತುವಿಲ್ಲದವನೂ. (ವ್ಯಾ)

2. ಮಾಯೆಯಿಂದ ಹೊರಗಾಗಿ ಶಿವತತ್ತ್ವದಿಂದ ಹಿಡಿದು ವಿದ್ಯಾತತ್ತ್ವ ಪರ್ಯಂತವಾದ ಶುದ್ಧಮಾರ್ಗದಲ್ಲಿ ಸ್ವರೂಪದಿಂದ ಇರುವವನು. (ವ್ಯಾ)

3. ಸರ್ವಚೈತನ್ಯಸ್ವರೂಪನಾಗಿ ಸ್ವಂತ ಇಚ್ಛೆಯಿಂದ ನಟನಂತೆ ಜಡಾಜಡ ವಸ್ತುಭೇದದಿಂದ ಹಲವು ಬಗೆಯ ರೂಪಗಳನ್ನು ಪ್ರಕಟಿಸುವವನು, ಅನೇಕ ವಿಧನಾಗಿ ಕಂಡುಬರುವ ಕ್ಷೇತ್ರಜ್ಞರಂತೆ ತೋರಿಬರುವವನು.

4. ಸರ್ವೋತ್ಕೃಷ್ಟವಾದ ಶ್ರೇಯಸ್ಸೇ ಸ್ವಭಾವವಾದವನು. ತನಗೆ ಮೀರಿದ ಬೇರೊಂದೂ ಇಲ್ಲದ, ಮಾಯೆಗೆ ಮೀರಿದ, ಸರ್ವಕ್ಕೆ ಸ್ವಾತ್ಮದೇವತಾ ಸ್ವರೂಪನಾದ, ಚೈತನ್ಯರೂಪನಾದರೂ ನಾನಾತ್ವವನ್ನು ಸ್ವೀಕರಿಸಿ ಹಲವಾಗಿ ತೋರಿಸಿಕೊಳ್ಳುವ ಅತ್ಯಂತ ಅಖಂಡಿತ ಸ್ವಾತಂತ್ರ್ಯ ಪರಮಾದ್ವಯಪ್ರಕಾಶಸ್ವಭಾವನಾದ ಶ್ರೇಯೋ ಮೂರ್ತಿಯೇ ! ನಿನ್ನನ್ನೇ ನಾನು ಮರೆಹೊಗುತ್ತೇನೆ.

ಗರ್ಭಾಧಿವಾಸ ಪೂರ್ವಕ
ಮರಣಾಂತಕ ದುಃಖಚಕ್ರ ವಿಭ್ರಾಂತಃ
ಆಧಾರಂ ಭಗವಂತಂ
ಶಿಷ್ಯಃ ಪಪ್ರಚ್ಛ ಪರಮಾರ್ಥಂ ೨

ಗರ್ಭವಾಸದಿಂದ ಹಿಡಿದು ಮರಣದವರೆಗಿನ ದುಃಖದ ಚಕ್ರದಲ್ಲಿ ತೊಳಲುವ ಶಿಷ್ಯನು ಆಧಾರಭೂತನಾದ ಭಗವಂತನನ್ನು ಪರಮಾರ್ಥವನ್ನು ಕುರಿತು ಪ್ರಶ್ನಿಸಿದನು.

ಆಧಾರಕಾರಿಕಾಭಿಃ
ತಂ ಗುರುರಭಿಭಾಷತೇಸ್ಮ ತತ್ಸಾರಂ
ಕಥಯತ್ಯಭಿನವಗುಪ್ತಃ
ಶಿವಶಾಸನ ದೃಷ್ಟಿಯೋಗೇನ ೩

ಆತನಿಗೆ ಅಭಿಮುಖನಾಗಿ ಗುರು [1]ಆಧಾರಕಾರಿಕೆಗಳಿಂದ ಪರಮಾರ್ಥವನ್ನು ಉಪದೇಶ ಮಾಡಿದನು. ಅದರ ಸಾರವನ್ನು ಅಭಿನವಗುಪ್ತನು ಶೈವ ಶಾಸ್ತ್ರ ದೃಷ್ಟಿಯ ಸುಯೋಗದಿಂದ ಹೇಳುತ್ತಾನೆ.

1. ಕಾರಿಕೆ-ಎಂದರೆ ಸೂತ್ರರೂಪವಾದ ಶ್ಲೋಕವೆಂದು ಅರ್ಥ, ಆಧಾರಕಾರಿಕೆಗಳು-ಎಂದರೆ ಈ ಎಲ್ಲವಿಧವಾದ ಬವಣೆಗೆ, ಬಿಡುಗಡೆಗೆ. ಮತ್ತು ಸರ್ವಕ್ಕೆ ಮೂಲ ಏನೆಂಬುದನ್ನು-ಯಾರೆಂಬುದನ್ನು ತಿಳಿಸುವ ಸೂತ್ರಶ್ಲೋಕಗಳು-ಎಂದು ಸುಂದರವಾಗಿ ಸೂಚಿತವಾಗುತ್ತದೆ. 'ಆಧಾರಕಾರಿಕೆ' ಬೇರೊಂದು ಗ್ರಂಥದ ಹೆಸರು.

ನಿಜಶಕ್ತಿವೈಭವಭರಾತ್
ಅಂಡಚತುಷ್ಟಯಮಿದಂ ವಿಭಾಗೇನ
ಶಕ್ತಿರ್ಮಾಯಾ ಪ್ರಕೃತಿಃ
ಪೃಥ್ವೀ ಚೇತಿ ಪ್ರಭಾವಿತಂ ಪ್ರಭುಣಾ ೪

*ಪ್ರಭುವಿನ ಸಹಜವಾದ ಶಕ್ತಿವೈಭವದ ತೀವ್ರತೆಯಿಂದ ಶಕ್ತಿ, ಮಾಯೆ, ಪ್ರಕೃತಿ, ಪೃಥ್ವೀ—ಎಂಬ ವಿಭಾಗದಿಂದ ಕೂಡಿ ಈ ಅಂಡಚತುಷ್ಟಯವು ಹೊಮ್ಮಿ ಬಂದಿತು-ಅಸ್ತಿತ್ವವನ್ನು ಪಡೆಯಿತು (ಉಂಟಾಯಿತು).

* [ಉತ್ಪತ್ತಿ ಕ್ರಮವನ್ನು ತಿಳಿಸಿ ಸತ್ಯಸಾರವನ್ನು ನಿರೂಪಿಸಬೇಕಾಗಿರುವುದರಿಂದ ಉಚಿತವಾಗಿ ಹೀಗೆ ಆರಂಭಿಸುತ್ತಾರೆ.] ಚಿದಾನಂದಘನನೂ ಸ್ವತಂತ್ರನೂ ಆದ ಭಗವಾನ್ ಮಹೇಶ್ವರನಿಂದ ಕೋಶರೂಪವಾಗಿ ವಿಶ್ವಾಚ್ಛಾದಕವಾದ ಅಂಡ ಚತುಷ್ಟಯವು ಸಂಯೋಜಿತವಾಗಿ ಪ್ರಕಾಶಿತವಾಯಿತು. ವಿವಿಧಾಶ್ಚರ್ಯಗಳಿಂದ ಚಿತ್ರವಿಚಿತ್ರವೆನಿಸಿದ ಈ ಜಗತ್ತಿಗೆ ಸರ್ವಸ್ವತಂತ್ರನಾದ ಆತನೇ ಸಂಯೋಜನವಿಯೋಜನಗಳಿಗೆ ಕಾರಣ. ಆತನ ಶಕ್ತಿ ವಿಕಾಸವೇ ಈ ವಿಶ್ವವು. (ವ್ಯಾಖ್ಯಾನಸಾರ)

ತತ್ರಾಂತರ್ವಿಶ್ವಮಿದಂ
ವಿಚಿತ್ರ ತನು ಕರಣ ಭುವನ ಸಂತಾನಂ
ಭೋಕ್ತಾ ಚ ತತ್ರ ದೇಹೀ
ಶಿವ ಏವ ಗೃಹೀತ ಪಶುಭಾವಃ ೫

ಅಲ್ಲಿ (=ಆ ಅಂಡಚತುಷ್ಟಯದಲ್ಲಿ) ವಿಚಿತ್ರವಾದ ದೇಹ ಇಂದ್ರಿಯ ಲೋಕ-ಇವುಗಳ ಸಂಘಾತರೂಪವಾದ ಈ ವಿಶ್ವವು ಹುದುಗಿರುವುದು. [1]ಅಲ್ಲಿ ಶಿವನೇ ಪಶುಭಾವವನ್ನು ಅಂಗೀಕರಿಸಿ ದೇಹಿಯಾಗಿ ಭೋಕ್ತೃವೂ ಆಗಿರುವನು.

1. ಚಿದಾನಂದೈಕ ಘನನಾಗಿ ಸ್ವಾತಂತ್ರ್ಯವೇ ಸ್ವಭಾವವಾದ ಶಿವನೇ ಸ್ವಸ್ವರೂಪವನ್ನು ಮರೆಸಿಕೊಂಡು ವಿಹರಿಸುವ ಇಚ್ಛೆಯಿಂದ ನಟನಂತೆ ವೇಷಧಾರಣೆಮಾಡಿ ಸ್ವಯಂ

ನಿರ್ಮಿತವಾದ ಸುಖದುಃಖಾದಿಮಯವಾದ ವ್ಯವಹಾರದಲ್ಲಿ ಭೋಕ್ತಾ, ದೇಹೀ ಎನ್ನಲ್ಪಡುವನು, ಭಗವಾನ್ ಶಿವನೇ ಭೋಗ್ಯ ಭೋಕ್ತೃ ಲಕ್ಷಣವುಳ್ಳ ಪ್ರಮಾತೃ ಪ್ರಮೇಯ ದ್ವಂದ್ವವನ್ನು ಆಟದ ವಸ್ತುವಿನಂತೆ ಹುಟ್ಟಿಸುವವನು. ಅದರಿಂದ ಈ ಭೇದಪ್ರಧಾನವಾದ ವ್ಯವಹಾರ, ವಸ್ತುತಃ ಶಿವವ್ಯತಿರಿಕ್ತವಾದ ಪದಾರ್ಥಜಾತವೊಂದೂ ಇಲ್ಲ. ಪರಮೇಶ್ವರನ ನಿರತಿಶಯವಾದ ಸ್ವಾತಂತ್ರ್ಯದ ಚೋದ್ಯವೇನೆಂದರೆ ಪೂರ್ಣ ಸ್ವರೂಪತೆಯನ್ನು ಪರಿತ್ಯಾಗಮಾಡಿ ಭೋಕ್ತೃ ಭೋಗ್ಯ ಸ್ವಭಾವವನ್ನೂ ಪಶುಭಾವ ವನ್ನೂ ಹೊಂದಿದರೂ ಸರ್ವ ಪ್ರಮಾತೃಗಳಲ್ಲಿ ಅನುಭಾವಿಯಾಗಿ ಅಂತರಂಗದಲ್ಲಿ ಹೊಳೆಯುತ್ತಾ ಚಿದಾನಂದೈಕಘನನಾಗಿ ಶಿವನಾಗಿಯೇ ಉಳಿದಿರುವುದು.

ನಾನಾವಿಧವರ್ಣಾನಾಂ
ರೂಪಂ ಧತ್ತೇ ಯಥಾಮಲಃ ಸ್ಫಟಿಕಃ
ಸುರ ಮಾನುಷ ಪಶು ಪಾದಪ
ರೂಪತ್ವಂ ತದ್ವದೀಶೋಽಪಿ ೬

(ಸ್ವತಃ) ಶುದ್ಧವಾದ ಸ್ಫಟಿಕವು (ಹಿನ್ನೆಲೆಯ ದೆಸೆಯಿಂದ) ಹಲವು ವರ್ಣ ರೂಪಗಳನ್ನು ಧರಿಸುವಂತೆ ಈಶನೂ ದೇವ ಮನುಷ್ಯ ಪಶು ವೃಕ್ಷ ರೂಪವಾದ ಸ್ಥಿತಿಯನ್ನು ತಾಳುತ್ತಾನೆ.

ಗಚ್ಛತಿ ಗಚ್ಛತಿ ಜಲ ಇವ
ಹಿಮಕರಬಿಂಬಂ ಸ್ಥಿತೇ ಸ್ಥಿತಿಂ ಯಾತಿ
ತನು ಕರಣ ಭುವನ ವರ್ಗೇ
ತಥಾಽಯಮಾತ್ಮಾ ಮಹೇಶಾನಃ ೭

ಚಂದ್ರಬಿಂಬವು ಚಲಿಸುವ ನೀರಿನಲ್ಲಿ ಚಲಿಸುವಂತೆಯೂ ನಿಂತ ನೀರಿನಲ್ಲಿ ನಿಂತಂತೆಯೂ ತೋರುತ್ತದೆ. ಅಂತೆಯೇ ಮಹೇಶನಾದ ಈ ಆತ್ಮನು ದೇಹ ಇಂದ್ರಿಯ ಲೋಕಗಳ ವ್ಯೂಹದಲ್ಲಿ ಹಾಗೆ ಹಾಗೆ ತೋರುತ್ತಾನೆ.

ರಾಹುರದೃಶ್ಯೋಽಪಿ ಯಥಾ
ಶಶಿಬಿಂಬಸ್ಥಃ ಪ್ರಕಾಶತೇ ತದ್ವತ್
ಸರ್ವಗತೋಽಪ್ಯಯಮಾತ್ಮಾ
ವಿಷಯಾಶ್ರಯಣೇನ ಧೀಮುಕುರೇ ೮

(ತಾನಾಗಿ) ಕಣ್ಣಿಗೆ ಕಾಣಿಸದಿರುವವನಾದರೂ ರಾಹುವು (ಗ್ರಹಣ ಕಾಲದಲ್ಲಿ) ಚಂದ್ರಬಿಂಬದಲ್ಲಿ ಕೂಡಿ ಪ್ರಕಟವಾಗುತ್ತಾನೆ. ಹಾಗೆಯೇ ಎಲ್ಲದರಲ್ಲೂ ಎಡೆಗೊಂಡ ಆತ್ಮನು ವಿಷಯಸಂಬಂಧವುಂಟಾದಾಗ ಬುದ್ಧಿಯ ಕನ್ನಡಿಯಲ್ಲಿ ಗೋಚರಿಸಿ ಪ್ರಕಾಶಕ್ಕೆ ಬರುತ್ತಾನೆ.

ಆದರ್ಶೇ ಮಲರಹಿತೇ
ಯದ್ವದ್ ವದನಂ ವಿಭಾತಿ ತದ್ವದ್ ಅಯಂ
ಶಿವ ಶಕ್ತಿಪಾತ ವಿಮಲೇ
ಧೀ ತತ್ತ್ವೇ ಭಾತಿ ಭಾರೂಪಃ ೯

ಕೊಳೆ ಕಳೆದ ಕನ್ನಡಿಯಲ್ಲಿ ಮುಖವು ವಿಶಿಷ್ಟ ರೀತಿಯಲ್ಲಿ ಸ್ಪಷ್ಟವಾಗಿ ಪ್ರತಿಬಿಂಬಿತವಾಗುವಂತೆ *ಶಿವಶಕ್ತಿಪಾತ (ಶಿವಾನುಗ್ರಹ)ದಿಂದ ನಿರ್ಮಲವಾದ ಬುದ್ಧಿಯಲ್ಲಿ ಪ್ರಕಾಶರೂಪನಾಗಿ ಆತ್ಮನು ಪ್ರಕಟನಾಗುತ್ತಾನೆ.

* ಶಿವಶಕ್ತಿಪಾತ-ಶಿವಾನುಗ್ರಹ ಇವೆರಡೂ ಪರ್ಯಾಯಶಬ್ದಗಳೆನ್ನಬಹುದು. ಮಹೇಶ್ವರನ ದಿವ್ಯಾನುಗ್ರಹವು ಅಪರಿಮಿತವಾದುದು. ಆ ಅನುಗ್ರಹರೂಪವಾದ ದಿವ್ಯ ಶಕ್ತಿಯ ಕಿರಣಗಳ ಕುಂಚದಿಂದ ಒರಸಲ್ಪಟ್ಟ ನಿರ್ಮಲವಾದ ಬುದ್ಧಿ (ಪ್ರತಿಭೆ)ಯ ಕನ್ನಡಿಯಲ್ಲಿ ಆಣವ, ಮಾಯಿಯ ಕಾರ್ಮ-ಎಂಬ ಮುಂದೆ ಹೇಳುವ ಮೂರು ವಿಧವಾದ ದೋಷಗಳು ಮರೆಯಾಗುವುದರಿಂದ ಸ್ವಚ್ಛತೆಯುಂಟಾಗಿ ಪ್ರಕಾಶ ಸ್ವರೂಪನಾದ ಆತ್ಮನು ಯಥಾವತ್ತಾಗಿ ತೋರಿಬರುತ್ತಾನೆ. ಎಷ್ಟೇ ಸುಂದರವಾದ ಮುಖವಾದರೂ ಕೊಳೆ ತುಂಬಿದ ಕನ್ನಡಿಯಲ್ಲಿ ಕೊಳಕಾಗಿ ಕುರೂಪವಾಗಿಯೇ ಕಂಡು ಬರುತ್ತದೆ. ಆ ಕನ್ನಡಿಯಲ್ಲಿ ಸ್ವಲ್ಪಮಟ್ಟಿಗೆ ಕೊಳೆಯಿದ್ದರೂ ಮುಖದ ಸಮಗ್ರ

ಸೌಂದರ್ಯ ಪ್ರಕಟವಾಗದೆ ಕೊಳೆಯಿರುವ ಸ್ಥಳದಲ್ಲಿ ವಿಕಾರವಾಗಿಯೇ ಕಂಡು ನಾಚುವಂತಿರುತ್ತದೆ.

ಕೆಲವುಜನ ಚರಮ ಶರೀರಿಗಳಿಗೆ ಶಿವಾನುಗ್ರಹ ವೇಗಉಂಟಾಗಿ ಅವರು ಜೀವನ್ಮುಕ್ತಾವಸ್ಥೆಯಲ್ಲಿರುತ್ತಾರೆ. ಬೇರೆ ಕೆಲವರಿಗೆ ಪರಮೇಶ್ವರನ ತಿರೋಧಾನಶಕ್ತಿಯಿಂದ ಆವರಣ ರೂಪವಾದ ಕೊಳೆಯು ಕಳಿಯದೆ ಆತ್ಮ ಸ್ವರೂಪವು ಕಂಡೂ ಕಾಣದಂತೆ ಇರುತ್ತದೆ. ಇದರಿಂದಲೇ ಸಾಂಸಾರಿಕ ಪಶುಗಳೆನಿಸುವರವರು. ಮತ್ತೆ ಕೆಲವರಿಗೆ ಪರಮೇಶ್ವರನ ಅನುಗ್ರಹ ಶಕ್ತಿ ತಿರೋಧಾನ ಶಕ್ತಿ ಎರಡೂ ಕಾರಣವಾಗಿ ಅವರು ಮುಕ್ತಿಯ ಹಾದಿಯಲ್ಲಿ ಮಾತ್ರ ಇರುತ್ತಾರೆ. ಇಂಥವರಿಗೆ ಅರುಮುಕ್ಷುಗಳೆಂದು ಹೆಸರು. ಹೀಗೆ ತೀವ್ರ, ಮಂದ, ಮಂದತರ ಮುಂತಾದ ಭೇದದಿಂದ ಆಗುವ ಶಿವಶಕ್ತಿ ಪಾತದ ರೀತಿವೈಚಿತ್ರ್ಯದಿಂದ ಪರಿಣಾಮವೂ ವಿಚಿತ್ರವಾಗಿರುತ್ತದೆ. ಆದುದರಿಂದ ಭವ್ಯ ಬುದ್ಧಿಗಳಿಗೆ ಪರಮೇಶ್ವರಾನುಗ್ರಹವೊಂದೇ ಮುಕ್ತಿಗೆ ಕಾರಣ. (ವ್ಯಾಖ್ಯಾನ)

ಭಾರೂಪಂ ಪರಿಪೂರ್ಣಂ
ಸ್ವಾತ್ಮನಿ ವಿಶ್ರಾಂತಿತೋ ಮಹಾನಂದಂ
ಇಚ್ಛಾ ಸಂವಿತ್ಕರಣೈಃ
ನಿರ್ಭರಿತಂ ಅನಂತಶಕ್ತಿಪರಿಪೂರ್ಣಂ ೧೦

ಸರ್ವ ವಿಕಲ್ಪವಿಹೀನಂ
ಶುದ್ಧಂ ಶಾಂತಂ ಲಯೋದಯವಿಹೀನಂ
ಯತ್ ಪರತತ್ತ್ವಂ ತಸ್ಮಿನ್
ವಿಭಾತಿ ಷಟ್ತ್ರಿಂಶದಾತ್ಮ ಜಗತ್ ೧೧

ಪ್ರಕಾಶ ಸ್ವರೂಪವೂ ತನ್ನಲ್ಲೇ ವಿಶ್ರಾಂತಿಹೊಂದುವುದರಿಂದ ಮಹಾನಂದಮಯವೂ ಇಚ್ಛಾಜ್ಞಾನಕ್ರಿಯಾಶಕ್ತಿಭರಿತವೂ ಅನಂತಶಕ್ತಿಪರಿಪೂರ್ಣವೂ ಎಲ್ಲ ಬಗೆಯ ವಿಕಲ್ಪಗಳಿಂದ ಬಿಡಲ್ಪಟ್ಟಿದೂ ಶುದ್ಧವೂ ಶಾಂತವೂ ನಾಶ ಉದಯ ರಹಿತವೂ ಆದ ಯಾವ ಪರತತ್ತ್ವವುಂಟೋ ಅದರಲ್ಲಿ ಮೂವತ್ತಾರು ತತ್ತ್ವಾತ್ಮಕವಾದ ಜಗತ್ತು ಪ್ರಕಾಶಿಸುತ್ತದೆ.

ದರ್ಪಣ ಬಿಂಬೇ ಯದ್ವತ್
ನಗರ ಗ್ರಾಮಾದಿ ಚಿತ್ರಮವಿಭಾಗಿ
ಭಾತಿ ವಿಭಾಗೇನೈವಚ
ಪರಸ್ಪರಂ ದರ್ಪಣಾದಪಿಚ ೧೨

ಕನ್ನಡಿಯಲ್ಲಿ ಪ್ರತಿಫಲಿತವಾದ ಗ್ರಾಮನಗರಾದಿಗಳ ಪ್ರತಿಬಿಂಬ ಚಿತ್ರವು ಕನ್ನಡಿಯಿಂದ ಬೇರ್ಪಡಿಸಲಾಗದುದು. ಆದರೆ ಕನ್ನಡಿ ಬೇರೆ, ಪ್ರತಿ ಬಿಂಬ ಬೇರೆ; ಪ್ರತಿಬಿಂಬಕ್ಕೆ ಕಾರಣವಾದ ಪ್ರಕಾಶ ಒಂದೇ ಆದರೂ ಬಿಂಬದಲ್ಲಿ ಗ್ರಾಮ ನಗರ (ಮನೆ, ಮಠ, ಗಿಡ, ಬಳ್ಳಿ, ಸ್ಥಲ, ಜಲ) ಮುಂತಾದುವು ಬೇರೆ ಬೇರೆಯಾಗಿಯೇ ಕಂಡು ಬರುತ್ತವೆ.

ವಿಮಲತಮ ಪರಮ ಭೈರವ
ಬೋಧಾತ್ ತದ್ವತ್ ವಿಭಾಗಶೂನ್ಯಮಪಿ
ಅನ್ಯೋನ್ಯಂ ಚ ತತೋಽಪಿ ಚ
ವಿಭಕ್ತಮಾಭಾತಿ ಜಗದೇತತ್ ೧೩

ಹಾಗೆಯೇ ಪರಮಶಿವನ ಅತ್ಯಂತಶುದ್ಧವಾದ ಜ್ಞಾನದಿಂದ ಬೇರ್ಪಡಿಸ ಲಾಗದ ಆದರೆ ಪರಸ್ಪರ ಭಿನ್ನವಾಗಿ ಕಾಣುವ ವಿವಿಧ ವಸ್ತುಗಳಿಂದ ಕೂಡಿದ ಈ ಜಗತ್ತು ಆ ಜ್ಞಾನಕ್ಕಿಂತಲೂ ಬೇರೆಯಾಗಿ ತೋರಿ ಬರುತ್ತದೆ.

ಶಿವಶಕ್ತಿ ಸದಾಶಿವತಾಂ
ಈಶ್ವರ ವಿದ್ಯಾಮಯೀಂ ಚ ತತ್ತ್ವದಶಾಂ
ಶಕ್ತೀನಾಂ ಪಂಚಾನಾಂ
ವಿಭಕ್ತ ಭಾವೇನ ಭಾಸಯತಿ ೧೪

(ಆ ಪರಶಿವನೇ ತನ್ನ) *ಐದು ಶಕ್ತಿಗಳನ್ನು ಶಿವ, ಶಕ್ತಿ, ಸದಾಶಿವ, ಈಶ್ವರ, ವಿದ್ಯಾ-ಎಂಬ ಐದು ಬೇರೆ ಬೇರೆ ತತ್ತ್ವಗಳ ಸ್ವರೂಪದಲ್ಲಿ ಪ್ರಕಾಶಕ್ಕೆ ತರುತ್ತಾನೆ.

*ಪರಮಶಿವನಿಗೆ ಸ್ವರೂಪವಾದುವು ಚಿತ್ ಶಕ್ತಿ, ನಿರ್ವೃತಿ ಶಕ್ತಿ, ಇಚ್ಛಾಶಕ್ತಿ ಜ್ಞಾನಶಕ್ತಿ, ಕ್ರಿಯಾಶಕ್ತಿ ಎಂಬ ಐದು ಮಹಾ ಶಕ್ತಿಗಳು. ಮಿಕ್ಕ ಅನಂತವಾದ ಶಕ್ತಿ ವ್ರಾತಕ್ಕೆ ಇವು ಮೂಲ ಭೂತವಾದುವು. ತನ್ನ ಆ ಶಕ್ತಿಗಳನ್ನೇ ಆತನು ಶಿವ ಶಕ್ತಿ ಸದಾಶಿವ ಈಶ್ವರ ವಿದ್ಯಾ–ಎಂಬ ಐದು ತತ್ತ್ವಗಳ ರೀತಿಯಲ್ಲಿ ಪ್ರಕಾಶಗೊಳಿಸುತ್ತಾನೆ. 1. ಸರ್ವದೇಹಿಗಳ ಅಂತರಂಗದಲ್ಲಿ ಪೂರ್ಣಾಹಂತಾಚಮತ್ಕಾರಮಯವಾಗಿ ಸರ್ವ ತತ್ತ್ವಗಳಿಗೂ ಮೀರಿದುದಾಗಿ ಮಹಾಪ್ರಕಾಶಾಕಾರವಾದ ಯಾವ ಚೈತನ್ಯವುಂಟೋ ಅದೇ ಶಿವತತ್ತ್ವವು. 2. 'ನಾನು ಜಗತ್ತಾಗುತ್ತೇನೆ' ಎಂದು ಭಾವಿಸಿ ವಿಚಿತ್ರ ವಿಶ್ವದ ರಂಗಭೂಮಿಗೆ ಅಡಿಪಾಯ ಹಾಕುವ ಆ ಚಿದ್ರೂಪನ ಆನಂದದ ಅಭಿನಿವೇಶವೇ ಶಕ್ತಿ ತತ್ತ್ವ. ಇದೇ ಸರ್ವರಹಸ್ಯಶಾಸ್ತ್ರಗಳಲ್ಲಿ ಸೃಷ್ಟಿ ಸಂಹಾರಾದಿಗಳಿಗೆ ಕಾರಣವಾಗಿ ಕೊಂಡಾಡಲ್ಪಟ್ಟಿದೆ. 3. ಸುತ್ತಣ ಮಹಾ ಶೂನ್ಯದಲ್ಲಿ ಏಕಾಕಿಯಾಗಿರಲು ಬಯಸದ ತನ್ನನ್ನು ತಾನೇ ಹರಡಿಕೊಳ್ಳಲಪೇಕ್ಷಿಸಿ ವೇಷಧಾರಣಕ್ಕೆ ಸಿದ್ಧನಾಗುವ ನಟನಂ ವಿಶ್ವೋತ್ಪತ್ತಿಗೆ ಬೀಜವಾಗುವ ಆತನ ಮನೋಭಾವನಾವಿಶೇಷ ಸದಾಶಿವತತ್ತ್ವ. ಇದು ಜ್ಞಾನ ಪ್ರಧಾನವಾಗಿ ಕ್ರಿಯಾಸಹಕಾರಿಯಾದುದು. 4. ವಿಶ್ವರೂಪದಿಂದ ಹರಡಿ ಮೇಲೆ ಗ್ರಾಹ್ಯ ಗ್ರಾಹಕಗಳಿಗೆ ಭೇದತೋರದೆ ನಾನೇ ಇದೆಂಬ ಸಮತೆಯ ಭಾವನಾ ವಿಶೇಷದ ನೆಲೆ ಈಶ್ವರ ತತ್ತ್ವವು. 5. ಗ್ರಾಹ್ಯಗ್ರಾಹಕಗಳಿಗೆ ಭೇದ ತೋರಿ ನಾನು ಇದು–ಎಂಬ ಎರಡನ್ನು ಕಾಣುವ ಅರಿವಿನ ಸ್ಥಿತಿ ವಿದ್ಯಾ ತತ್ತ್ವ. ಹೀಗೆ ಕರ್ತೃ ಕರಣ, ಕ್ರಿಯಾ ರೂಪದಲ್ಲಿ ಮಹೇಶ್ವರನೇ ಪ್ರಕಾಶಗೊಳ್ಳುತ್ತಾನೆ.

ಪರಮಂ ಯತ್ ಸ್ವಾತಂತ್ರ್ಯಂ
ದುರ್ಘಟಸಂಪಾದನಂ ಮಹೇಶಸ್ಯ
ದೇವೀ ಮಾಯಾಶಕ್ತಿಃ
ಸ್ವಾತ್ಮಾವರಣಂ ಶಿವಸ್ಯೈತತ್ ೧೫

ದುಸ್ಸಾಧ್ಯವಾದುದನ್ನು ಸಾಧ್ಯವಾಗಿಸಬಲ್ಲಂಥದು ಮಹೇಶ್ವರನ ಪರಮ ಸ್ವಾತಂತ್ರ್ಯ. ಆ ಸ್ವಾತಂತ್ರ್ಯವೇ ಲೀಲಾವಿಹಾರಿಯಾದ ಆತನ ಮಾಯಾ ಶಕ್ತಿ. ಅದು ಶಿವನಿಗೆ ಸ್ವಂತವಾದ ಆತ್ಮಾವರಣವನ್ನು ಒದಗಿಸುತ್ತದೆ.

ಲೀಲಾವಿಹಾರಿಯಾದ ಪರಮೇಶ್ವರನ ಅಘಟಿತಘಟನಾಸಮರ್ಥವಾದ ಮಾಯೆಯೇ ಸ್ವೇಚ್ಛೆಯಿಂದ ಪಶು (ಜೀವ) ಭಾವನನ್ನು ಪಡೆದ ಶಿವನ ನೈಜಸ್ವಭಾವವನ್ನು ಮರೆಸಿ ಆಣವಾದಿ ಮಲತ್ರಯಕ್ಕೆ ಒಳಗಾಗಿಸುತ್ತದೆ. ಶಿವನಿಗೆ ಆತ್ಮಾವರಣ ಉಂಟಾಗುವುದೆಂದರೆ ವಿಚಿತ್ರ ಮತ್ತು ದುಃಸಾಧ್ಯ. ಆದರೆ ಅಶಕ್ಯವನ್ನು ಶಕ್ಯವಾಗಿಸುವುದೇ ಆತನ ಸ್ವಾತಂತ್ರ್ಯದ ಒಂದು ವೈಶಿಷ್ಟ್ಯ (ವ್ಯಾಖ್ಯಾನ)

ಮಾಯಾಪರಿಗ್ರಹವಶಾತ್
ಬೋಧೋ ಮಲಿನಃ ಪುಮಾನ್ ಪಶುರ್ಭವತಿ
ಕಾಲ ಕಲಾ ನಿಯತಿವಶಾತ್
ರಾಗಾವಿದ್ಯಾವಶೇನ ಸಂಬದ್ಧಃ ೧೬

ಮಾಯೆಯ ಸೋಂಕಿನಿಂದ ಜ್ಞಾನವು ಮಲಿನವಾಗಿ ಪುರುಷನು ಪಶುವಾಗುತ್ತಾನೆ. ಅವನು ಕಾಲ, ಕಲೆ, ನಿಯತಿ, ರಾಗ, ಅವಿದ್ಯೆ-ಇವುಗಳಿಂದ ಬಲವಾದ ಕಟ್ಟಿಗೆ ಸಿಲುಕುತ್ತಾನೆ-ಬಂಧನಕ್ಕೆ ಒಳಗಾಗುತ್ತಾನೆ.

1 ಸರ್ವ ಸ್ವತಂತ್ರನು ಸ್ವೇಚ್ಛೆಯಿಂದ ಮಾಯೆಗೆ ಪರತಂತ್ರನಾಗಿ ಹೀಗೆ ಜೀವ ಭಾವವನ್ನು ಕೈಕೊಂಡಮೇಲೆ ಯಾವ ವಿಧವಾದ ಪರಿಮಿತಿಗೂ ಒಳಪಡದ ಸರ್ವಜ್ಞತೆಯೇ ಮುಂತಾದ ವಿಶಿಷ್ಟ ವ್ಯಾಪಕ ಜ್ಞಾನವು ಮಲಿನವಾಗಿ ಕುಗ್ಗಿ ಅಣುವಾಗಿ ಸ್ವಂತ ಸ್ವಭಾವವನ್ನೇ ಮರೆಯುವ ಅಖ್ಯಾತಿ-ಎಂಬ ಆಣವಮಲಕ್ಕೆ ಒಳಗಾಗುವುದು. ಪೂರ್ಣ ಸ್ವರೂಪವಾದ ಮಹಾಕಾಶದ ಅಂಶವು ಗಡಿಗೆಯಲ್ಲಿ ಸಿಲುಕಿ ಪರಿಮಿತವಾಗಿ ಘಟಾಕಾಶವೆನಿಸಿದಂತೆ ಆಗುವುದು. ಅದೇ ಮಹೇಶನ ಪುರುಷಭಾವ. ಮಾಯೆಯ ಪಾಶಕ್ಕೆ-ಪಾಲನೆಗೆ ಒಳಗಾಗುವುದರಿಂದ ಪುರುಷನೇ ಪಶುವೆನಿಸುವನು. ಜ್ಞಾನೈಕಾಕಾರ ಪಶುವಾಗುವುದು ಹೀಗೆ.

ಅಥುನೈವ ಕಿಂಚಿದೇವೇ
ದಮೇವ ಸರ್ವಾತ್ಮನೈವ ಜಾನಾಮಿ
ಮಾಯಾಸಹಿತಂ ಕಂಚುಕ
ಷಟ್ಕಮಣೋರಂತರಂಗಮಿದಮುಕ್ತಂ ೧೭

(ಯಾವ ವಿಧವಾದ ಭಾವವಿಕಲ್ಪವೂ ಇಲ್ಲದಿದ್ದಸ್ಥಿತಿಹೋಗಿ) ಈಗಲೇ, ಒಂದಾನೊಂದನ್ನೇ, ಇದನ್ನೇ, ಪೂರ್ಣವಾಗಿಯೇ (ಸುತರಾಂ), ಬಲ್ಲೆ,-ಎಂಬೀ ಬಗೆಯ (ಪರಿಮಿತಿ ಸೂಚಕವಾದ ಐದು) ಅನುಭವಗಳು ತೋರಿ ಮಾಯೆ ಯೊಡನೆ ಕೂಡಿ ಆರು ಕಂಚುಕ (ಮುಸುಕು)ಗಳಾಗಿ ಅಣುವಿನ (ಅಣುತ್ವದ) ಅಂತರಂಗವೆನಿಸಲ್ಪಡುವುವು.

ಜ್ಞಾನ ಸ್ವರೂಪನಾದ ಸ್ವತಂತ್ರನು ಹೀಗೆ ಸ್ವೇಚ್ಛೆಯಿಂದ ಸ್ವಂತಮಾಯೆಗೆ ಒಳಗಾಗಿ ಅಣುತ್ವವನ್ನು ಪಡೆದೊಡನೆ ಆತನ ಜ್ಞಾನ ಕ್ರಿಯಾಶಕ್ತಿಗಳು ಸಂಕುಚಿತವಾಗುತ್ತವೆ. ಯಾವ ವಿಧವಾದ ಪರಿಮಿತಿಗೂ ಒಳಪಡವ ಆತನು ಕಾಲ, ಕಲೆ, ಮುಂತಾದ ಅಯ್ದು ಬಗೆಯ ಪರಿಮಿತಿಗೆ ಒಳಗಾಗುತ್ತಾನೆ. ಈಗಲೇ-ಎಂಬುದರಿಂದ "ಇದಕ್ಕೆ ಹಿಂದೆ ಇಲ್ಲ, ಮುಂದಾಗದು"-ಎಂಬ ರೀತಿಯ ಕಾಲದ ಪರಿಮಿತಿಯ (ನಿರ್ಬಂಧದ) ಅನುಭವವೂ, ಒಂದಾನೊಂದನ್ನೇ ಎಂಬುದರಿಂದ 'ನಾನು ಗಡಿಗೆಯನ್ನು ಮಾತ್ರ ಮಾಡಬಲ್ಲೆ ಬಟ್ಟೆಯನ್ನು ನೇಯಲಾರೆ, ಚಿತ್ರವನ್ನು ಬರೆಯಬಲ್ಲೆ-ವಿಗ್ರಹವನ್ನು ಕೆತ್ತಲಾರೆ-ಎಂಬ ರೀತಿಯ ಪರಿಮಿತಿ ತೋರಿ ಕಲೆಯ ಸಂಕೋಚವೂ ಇದನ್ನೇ-ಎನ್ನುವುದರಿಂದ 'ಜ್ಯೋತಿಷ್ಟೋಮವೆಂಬ ಈ ಕರ್ಮವನ್ನು ಮಾತ್ರಮಾಡಿ ಸ್ವರ್ಗವನ್ನು ಪಡೆಯಬಹುದು, ಬೇರೊಂದರಿಂದ ಶಕ್ಯವಲ್ಲ, ಅಶ್ವಮೇಧವನ್ನೇ ನೆರವೇರಿಸಿ ಪ್ರಾಜಾಪತ್ಯವನ್ನು ಪಡೆಯುತ್ತೇನೆ-ಅನ್ಯಥಾ ಶಕ್ಯವಿಲ್ಲ'-ಎಂದು ಮುಂತಾದ ಸಂಕಲ್ಪವಿಕಲ್ಪದ ನಿಯತಿಯ ಪರಿಮಿತಿಯೂ ಪೂರ್ಣವಾಗಿಯೇ (ಸುತರಾಂ, ಸರ್ವಾತ್ಮನಾ) ಎಂಬ ತೆರನಾದ ಅಭಿನಿವೇಶದಿಂದ ಇಷ್ಟವಾದುದರ ಪರಿಮಿತಿಯನ್ನು ಸೂಚಿಸುವ ರಾಗವೂ ಬಲ್ಲೆ (ತಿಳಿದಿದ್ದೇನೆ)-ಎಂಬುದರಿಂದ ಒಮ್ಮೆ ತಿಳಿದಿರಲಿಲ್ಲ. ಬೇರೆ ತಿಳಿಯಬೇಕಾದುದೂ ಉಂಟು-ಎಂಬ ತರಹದ ವಿದ್ಯಾ ಪರಿಮಿತಿಯೂ ಅನುಭವವಾಗಿ ಕಾಲ ಕಲಾ ನಿಯತಿ ರಾಗ ಅವಿದ್ಯಾ-ಎಂಬ ಐದು ತತ್ತ್ವಾವರಣಗಳಾಗುತ್ತವೆ. ಇವುಗಳ ಜತೆಗೆ ವಸ್ತುಗಳು ಬೇರೆ ಬೇರೆಯೆಂಬ ನಾನಾತ್ವ ಕಲ್ಪನೆಯ ಮಾಯೆ ಆರನೆಯ ತತ್ವವಾಗಿ ಅಣುವನ್ನು ಆವರಿಸುತ್ತದೆ. ಈ ಆರೂ ಪಶುವಿನ ಷಟ್ಕಂಚುಕಗಳೆನಿಸುತ್ತವೆ. ಸುವರ್ಣದ ಒಳಗಡೆ ಸೇರಿದ ಕಾಳಿಕೆಯಂತೆ ಇವು ಅಣುವಿನ ಅಂತರಂಗವೆಂದು ಹೇಳಲ್ಪಡುವುವು. ಮಹತ್ತಿನ ಅಣುತ್ವಕ್ಕೆ ಇದು ನೆಲೆ. ಶಿವನ ಪಶುತ್ವಕ್ಕೆ ಇದು ನಿಧಾನ.

ಕಂಬುಕಮಿವ ತಂಡುಲಕಣ

ವಿನಿವಿಷ್ಟಂ ಭಿನ್ನಮಪ್ಯಭಿದಾ

ಭಜತೇ ತತ್ತ್ವ ವಿಶುದ್ಧಿಂ
ಶಿವಮಾರ್ಗೌನ್ಮುಖ್ಯಯೋಗೇನ ೧೬

ಹೊಟ್ಟು ಬೇರೆ ಅಕ್ಕಿ ಬೇರೆ, ಆದರೂ ಹೊಟ್ಟು ಅಕ್ಕಿಯ ಕಾಳಿಗೆ ಕವಚವಾಗಿದ್ದು ಮುಸುಕಿ (ಅದನ್ನು ಭತ್ತವೆನಿಸಿ) ಅದು ಬೇರೆಯೆಂದು ತೋರದಂತಿರುತ್ತದೆ. ಷಟ್ಕಂಚುಕಕ್ಕೂ ಅಣುವಿಗೂ ಇರುವ ಸಂಬಂಧ ಹೀಗೆ. ಆದರೆ* ಶಿವಮಾರ್ಗಕ್ಕೆ ಅಭಿಮುಖನಾಗುವ ಯೋಗದಿಂದ ಆ ಅಣು ಶುದ್ಧಿ ಹೊಂದುವುದು.

* ಪರಮೇಶ್ವರ ಶಕ್ತಿಪಾತದಿಂದ ವಿಶುದ್ಧಹೃದಯನಾಗುವ ಸುಯೋಗ ಯಾವಾಗ ‘ಪಶು’ವಿಗೆ ಉಂಟಾಗುವುದೋ ಆಗಲೇ ಸ್ವಾತ್ಮಜ್ಞಾನದ ಆವಿರ್ಭಾವವಾಗುವುದರಿಂದ ‘ಪಶು’ತ್ವಕ್ಕೆ ಕಾರಣವಾದ ಕಂಚುಕಾವರಣವು ತಾನಾಗಿ ಕಳಚಿಹೋಗಿ ಲಯವಾಗುವುದು.

ಸುಖದುಃಖ ಮೋಹ ಮಾತ್ರಂ
ನಿಶ್ಚಯ ಸಂಕಲ್ಪನಾಭಿಮಾನಾಚ್ಚ
ಪ್ರಕೃತಿರಥಾಂತಃಕರಣಂ
ಬುದ್ಧಿಮನೋಹಂಕೃತಿಕ್ರಮಶಃ ೧೭

[1]ಸುಖದುಃಖ ಮೋಹಗಳೂ [1]ನಿಶ್ಚಯ ಸಂಕಲ್ಪ ಅಭಿಮಾನಗಳೂ ಪ್ರಕೃತಿ ಮತ್ತು ಬುದ್ಧಿ ಮನಸ್ಸು ಅಹಂಕಾರ ರೂಪವಾದ ಅಂತಃಕರಣ.

1. ಸತ್ವರಜಸ್ತಮೋಗುಣಗಳ ಸಾಮಾನ್ಯ ರೂಪಗಳು ಸುಖ ದುಃಖ ಮೋಹಗಳು.

2. ಅಂತಕರಣಗಳಲ್ಲಿ ಬುದ್ಧಿಯ ವ್ಯಾಪಾರ ನಿಶ್ಚಯ, ಮನಸ್ಸಿನ ವ್ಯಾಪಾರ ಸಂಕಲ್ಪ, ಅಹಂಕೃತಿಯ ವ್ಯಾಪಾರ ಅಭಿಮಾನ, ಹೀಗೆ ಕ್ರಮವಿದೆ.

ಶ್ರೋತ್ರಂ ತ್ವಗಕ್ಷಿ ರಸನಾ
ಘ್ರಾಣಂ ಬುದ್ಧೀಂದ್ರಿಯಾಣಿ ಶಬ್ದಾದೌ
ವಾಕ್ಪಾಣಿ ಪಾದ ಪಾಯೂ
ಪಸ್ಥಂ ಕರ್ಮೇಂದ್ರಿಯಾಣಿ ಪುನಃ

ಕಿವಿ ಚರ್ಮ ಕಣ್ಣು ನಾಲಗೆ ಮೂಗು ಇವು ಶಬ್ದಾದಿ (ರೂಪ ವಿಷಯ) ಗಳ ಗ್ರಹಣಕ್ಕೆ ಉಪಯುಕ್ತವಾದ ಜ್ಞಾನೇಂದ್ರಿಯಗಳು. ವಾಕ್ಕು, ಪಾಣಿ ಪಾದ, ಪಾಯು, ಉಪಸ್ಥ ಇವು ಕರ್ಮೇಂದ್ರಿಯಗಳು.

ಏಷಾಂ ಗ್ರಾಹ್ಯೋ ವಿಷಯಃ
ಸೂಕ್ಷ್ಮಃ ಪ್ರವಿಭಾಗವರ್ಜಿತೋ ಯಃ ಸ್ಯಾತ್
ತನ್ಮಾತ್ರ ಪಂಚಕಂ ತತ್
ಶಬ್ದಃ ಸ್ಪರ್ಶಃ ಮಹೋ ರಸೋ ಗಂಧಃ ೧೦

ಏತತ್ಸಂಸರ್ಗವಶಾತ್
ಸ್ಥೂಲೋ ವಿಷಯಸ್ತು ಭೂತಪಂಚಕತಾಂ
ಅಭ್ಯೇತಿ ನಭಃ ಪವನಃ
ತೇಜಃ ಸಲಿಲಂ ಚ ಪೃಥ್ವೀ ಚ ೧೧

ಜ್ಞಾನೇಂದ್ರಿಯಗಳಿಗೆ ಗೋಚರವಾಗತಕ್ಕುದು ವಿಷಯ. ಅದರಲ್ಲಿ ಸೂಕ್ಷ್ಮವಾದುದೊಂದು ಬಗೆ. ವಿಭಾಗಮಾಡದೆ ಹೇಳುವುದಾದರೆ ಅದು ತನ್ಮಾತ್ರಪಂಚಕವೆನಿಸುತ್ತದೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧ---ಎಂಬ ಈ ಐದು ತನ್ಮಾತ್ರಗಳು.

ಇವುಗಳ (ಈ ತನ್ಮಾತ್ರಗಳ) ಸಂಯೋಗದಿಂದ ಒದಗುವ ವಿಷಯ ಸ್ಥೂಲ. ಅದು ಭೂತಪಂಚಕವೆನಿಸುತ್ತದೆ. ಆಕಾಶ, ವಾಯು, ತೇಜಸ್ಸು, ಅಪ್ಪು, ಪೃಥ್ವೀ ಈ ಐದು ಪಂಚಭೂತಗಳು.

1. ವಿಷಯುವಲ್ಲಿ ಎರಡು ಬಗೆ: ಸೂಕ್ಷ್ಮ, ಸ್ಥೂಲ. ತನ್ಮಾತ್ರಪಂಚಕವು ಸೂಕ್ಷ್ಮ ವಿಷಯುವೆನಿಸುತ್ತದೆ. ಅಂತರಂಗವಾದುದರಿಂದ ಈ ಹೆಸರು ಸಲ್ಲುತ್ತದೆ. ಬಹಿರಂಗವಾದ ಪಂಚಭೂತಗಳು ಸ್ಥೂಲ ವಿಷಯ.

2. ಶಬ್ದಾದಿ ವಿಷಯುಗಳಲ್ಲಿ ಒಂದೊಂದು ಇಂದ್ರಿಯಕ್ಕೆ ಒಂದೊಂದು ವಿಷಯ ಮಾತ್ರ ಗೋಚರವಾಗುವುದರಿಂದ ಅವಕ್ಕೆ ತನ್ಮಾತ್ರಗಳೆಂದು ಹೆಸರಾಯಿತು. ಉದಾ:- ಶಬ್ದ ಕಿವಿಯಿಂದ ಮಾತ್ರ ಗ್ರಹಿಸಲು ಶಕ್ಯ. ರೂಪ-ಕಣ್ಣಿಗೆ ಮಾತ್ರ ಗೋಚರ. ಗಂಧ ಘ್ರಾಣದಿಂದ ಮಾತ್ರ ವೇದ್ಯ. ಸ್ಪರ್ಶ ಚರ್ಮೇಂದ್ರಿಯದಿಂದ ಅರಿಯಬಹುದಾದುದು. ರಸ ನಾಲಗೆಗೆ ತಿಳಿಯ ಬರುತ್ತದೆ.

ತುಷ ಇವ ತಂಡುಲ ಕಣಿಕಾಂ
ಅವೃಣುತೇ ಪ್ರಕೃತಿಪೂರ್ವಕಃ ಸರ್ಗಃ
ಪೃಥ್ವೀಪರ್ಯಂತೋಽಯಂ
ಚೈತನ್ಯಂ ದೇಹಭಾವೇನ ೨೩

ಪ್ರಕೃತಿಯಿಂದ ಹಿಡಿದು ಪೃಥ್ವಿಯವರೆಗಿನ ಈ ಸೃಷ್ಟಿ (ಜಗತ್ತು) ಹೊಟ್ಟು ಅಕ್ಕಿಯ ಕಾಳನ್ನು ಮುಚ್ಚಿರುವಂತೆ ಚೈತನ್ಯವನ್ನು ದೇಹದ ರೂಪದಿಂದ (ಆ ಹೆಸರಿನಿಂದ) ಆವರಿಸುತ್ತದೆ.

ಪರಮಾವರಣಂ ಮಲಇಹ
ಸೂಕ್ಷ್ಮಂ ಮಾಯಾದಿಕಂಚುಕಂ ಸ್ಥೂಲಂ
ಬಾಹ್ಯಂ ವಿಗ್ರಹರೂಪಂ
ಕೋಶತ್ರಯ ವೇಷ್ಟಿತೋ ಹ್ಯಾತ್ಮಾ ೨೪

[1]ಪರಮಾವರಣ ಮಲ, [2]ಮಾಯೆಯೇ ಮೊದಲಾದ ಕಂಚುಕಗಳೆಂಬ ಸೂಕ್ಷ್ಮಾವರಣ ಮಲ, ಹೊರಗಿನ ದೇಹರೂಪವಾದ ಸ್ಥೂಲಾವರಣಮಲ-ಎಂಬ ಪ್ರಸಿದ್ಧವಾದ ಮೂರು ಬಗೆಯ ಕೋಶಗಳಿಂದ (ಹೊದಿಕೆಗಳಿಂದ) ಆತ್ಮನು ಸುತ್ತುವರಿಯಲ್ಪಟ್ಟಿದ್ದಾನೆ.

1. ಮಲನೆಂದರೆ ದೋಷನೆಂದರ್ಥ. ಪರಮಾವರಣನೆಂದರೆ ಅತ್ಯಂತ ಅಂತರಂಗಕ್ಕೆ ಸಂಬಂಧಿಸಿದುದು. ಆತ್ಮನು ತನ್ನ ಸಹಜ ಮಾಹಾತ್ಮ್ಯವನ್ನು ಮರೆಯುವ ಸಂಕೋಚ ರೂಪವಾದ ಬಹು ಸೂಕ್ಷ್ಮವಾದ - ಅತ್ಯಂತ ಅಂತರಂಗದ ದೋಷ. ಇದನ್ನು ಆಣವ ಮಲ-ಎಂದು ಕರೆಯುತ್ತಾರೆ. ಅಣುತ್ವಕ್ಕೆ ಕಾರಣವಾದ-ಅಥವಾ ಅತ್ಯಂತ ಸೂಕ್ಷ್ಮವಾದ ದೋಷವಾದುದರಿಂದ ಈ ಹೆಸರು.

2. ಮಾಯಾದಿಗಳೆಂದರೆ ಹಿಂದೆ ಹೇಳಿದ ಷಟ್ಕಂಚುಕಗಳು. ಭೇದ ಬುದ್ಧಿಗೆ ಕಾರಣವಾದ ಇವೂ ಅಂತರಂಗಕ್ಕೆ ಸಂಬಂಧಿಸಿದುವೇ. ಆದರೆ ಪ್ರಕಾಶ ಸಂಕುಚಿಸಿದ ಮೇಲೆ ಉಂಟಾಗಿ ಮನಸ್ಸಿಗೆ ಸಂಬಂಧಪಟ್ಟವಾದುದರಿಂದ ಸ್ವಲ್ಪ ಮಟ್ಟಿಗೆ ಮಾತ್ರ ಹೊರಗೆನಿಸಿ ಸೂಕ್ಷ್ಮಾವರಣವಾಗುತ್ತವೆ. ಅಕ್ಕಿಯ ಮೇಲಿನ ತವುಡಿನಂತೆ ಇವುಗಳ ಸ್ಥಾನ. ಇವುಗಳನ್ನು ಮಾಯಾ(ಽ)ಮಲವೆನ್ನುತ್ತಾರೆ. ಮೂರನೆಯದು ಶುಭಾಶುಭ ಕರ್ಮಗಳಿಗೆ ಕಾರಣವಾಗಿಯೂ ಅವುಗಳ ಫಲಕ್ಕೆ ಪಾತ್ರವೆನಿಸಿಯೂಬಿಡುವ ಹೊರಗಿನ ಶರೀರದ ಆವರಣ. ಇದು ಹೊಟ್ಟಿನಂತೆ ಹೊರಗಿನ ಆವರಣ. ಇದನ್ನು ಕಾರ್ಮಮಲ ವೆನ್ನುತ್ತಾರೆ. ಈ ಆವರಣತ್ರಯದಿಂದ ಅಣುತ್ವ ಪಶುತ್ವ !

ಅಜ್ಞಾನ ತಿಮಿರ ಯೋಗಾತ್
ಏಕಮಪಿ ಸ್ವಂ ಸ್ವಭಾವಮಾತ್ಮಾನಂ
ಗ್ರಾಹ್ಯ ಗ್ರಾಹಕ ನಾನಾ
ವೈಚಿತ್ರ್ಯೇಣ-ಅವಬುಧ್ಯೇತ ೨೫

ಅಜ್ಞಾನವೆಂಬ *ತಿಮಿರ ದೋಷದಿಂದ ಆತ್ಮನು ಒಂದೇ ಆಗಿರುವ ತನ್ನ ಸ್ವಭಾವವನ್ನು ತಿಳಿಯತಕ್ಕವಸ್ತು ತಿಳಿಯುವಸಾಧನ ಮೊದಲಾದ ಹಲವು ಎಣಿಕೆಗಳಿಂದ ವಿಚಿತ್ರವಾಗಿ ತಿಳಿಯುತ್ತಾನೆ.

* ಕೆಲವರಿಗೆ ಕಣ್ಣಿನಲ್ಲಿ ಒಂದು ಬಗೆಯ ದೋಷವುಂಟಾಗುತ್ತದೆ. ಇದರಿಂದ ಎಲ್ಲವಸ್ತುಗಳೂ ಒಂದಿರುವಡೆಯಲ್ಲಿ ಎರಡೆರಡಿರುವ ಹಾಗೆ ಅವರಿಗೆ ಅನೇಕವಾಗಿ ಕಾಣುತ್ತವೆ. ನೇತ್ರ ಫಲಕದ ಈ ದೋಷಕ್ಕೆ ವೈದ್ಯಶಾಸ್ತ್ರದಲ್ಲಿ ತಿಮಿರವೆಂದು ಸಂಜ್ಞೆ.

ರಸ ಫಾಣಿತ ಶರ್ಕರಿಕಾ
ಗುಡ ಖಂಡಾದ್ಯಾಃ ಯಥೇಕ್ಷುರಸ ಏವ

ತದ್ವದವಸ್ಥಾಭೇದಾಃ
ಸರ್ವೇ ಪರಮಾತ್ಮನಃ ಶಂಭೋಃ ೨೬

ರಸ, ಪಾಕ, ಸಕ್ಕರೆ, ಬೆಲ್ಲ, ಕಲ್ಲುಸಕ್ಕರೆ ಮುಂತಾದುವೆಲ್ಲ (ಒಂದೇ) ಕಬ್ಬಿನ ರಸದ ಪ್ರಕಾರಗಳು ಹೇಗೋ ಹಾಗೆಯೇ (ಸೃಷ್ಟಿಯಲ್ಲಿ) ಎಲ್ಲವೂ ಪರಮಾತ್ಮ ಶಂಭುವಿನ ಅವಸ್ಥಾಭೇದಗಳು.

ವಿಜ್ಞಾನಾಂತರ್ಯಾಮಿ
ಪ್ರಾಣ ವಿರಾಟ್ ದೇಹ ಜಾತಿ ಪಿಂಡಾಂತಾಃ
ವ್ಯವಹಾರ ಮಾತ್ರಮೇತತ್
ಪರಮಾರ್ಥೇನ ತು ನ ಸಂತ್ಯೇವ ೨೭

[1]ವಿಜ್ಞಾನ, ಅಂತರ್ಯಾಮಿ, ಪ್ರಾಣ, ವಿರಾಟ್ ದೇಹ, ಜಾತಿ, [2]ಪಿಂಡ ಇವೆಲ್ಲಾ ಕೇವಲ ವ್ಯವಹಾರ ಮಾತ್ರ; ಪರಮಾರ್ಥ ದೃಷ್ಟಿಯಿಂದ ಇವೊಂದೂ ಇಲ್ಲ.

1. ಬೇರೆ ಕೆಲವು ಮತಗಳು ಮೂಲತತ್ತ್ವವೆಂದು ಪರಿಗಣಿಸುವ ವಿಜ್ಞಾನವೇ ಮೊದಲಾದುವು ಕೇವಲ ವ್ಯವಹಾರ ದೃಷ್ಟಿಯಿಂದ ಸತ್ಯವೆಂದು ಸಿದ್ಧಾಂತಿಸುತ್ತಾರೆ.

2. ವ್ಯಕ್ತಿ.

ರಜ್ಜ್ವಾಂ ನಾಸ್ತಿ ಭುಜಂಗಃ
ತ್ರಾಸಂ ಕುರುತೇ ಚ ಮೃತ್ಯುಪರ್ಯಂತಂ
ಭ್ರಾಂತೇರ್ಮಹತೀ ಶಕ್ತಿಃ
ನ ವಿವೇಕ್ತುಂ ಶಕ್ಯತೇ ನಾಮ ೨೮

ಹಾವಿಲ್ಲ ; ಆದರೂ ಹಗ್ಗದ ವಿಷಯದಲ್ಲಿ ಹಾವೆಂಬ ಭ್ರಾಂತಿ ಸಾವೂ ಒದಗಬಹುದಾದಷ್ಟುಮಟ್ಟಿನ ಭಯವನ್ನು ಉಂಟು ಮಾಡುತ್ತದೆ.

ಭ್ರಾಂತಿಯ ಮಹಾಶಕ್ತಿ ಹೀಗೆಂದು ನಿರ್ಣಯಿಸಲಿಕ್ಕೇ ಶಕ್ಯವಿಲ್ಲವೆಂಬುದು ಪ್ರಸಿದ್ಧ.

ತದ್ವತ್ ಧರ್ಮಾ ಧರ್ಮ
ಸ್ವರ್ನಿರಯೋತ್ಪತ್ತಿ ಮರಣ ಸುಖ ದುಃಖಂ
ವರ್ಣಾಶ್ರಮಾದಿ ಚಾತ್ಮನಿ
ಅಸದಪಿ ವಿಭ್ರಮ ಬಲಾದ್ಭವತಿ ೨೯

ಹಾಗೆಯೇ ಧರ್ಮ, ಅಧರ್ಮ, ಸ್ವರ್ಗ, ನರಕ, ಹುಟ್ಟು ಸಾವು, ಸುಖ, ದುಃಖ, ವರ್ಣ, ಆಶ್ರಮ-ಈ ಮುಂತಾದುದು ಕೂಡ ಆತ್ಮನಲ್ಲಿಲ್ಲವಾದರೂ ಭ್ರಾಂತಿಯ ಬಲದಿಂದ ಉಂಟಾಗುವುದು (ತೋರುವುದು.)

ಏತತ್ ತದಂಧಕಾರಂ
ಯತ್ ಭಾವೇಷು ಪ್ರಕಾಶಮಾನತಯಾ
ಆತ್ಮಾನತಿರಿಕ್ತೇಷ್ವಪಿ
ಭವತ್ಯನಾತ್ಮಾಭಿಮಾನೋಽಯಂ ೩೦

ಪ್ರಕಾಶ (ಜ್ಞಾನ) ಸ್ವರೂಪನಾದ ಆತ್ಮನೂ ಜ್ಞಾನಕ್ಕೆ ವಿಷಯವಾದ ವಸ್ತುಗಳೂ ಒಂದೇ ಆದುದರಿಂದ ಆತ್ಮನಿಂದ ಬೇರೆಯಾದುವು ಯಾವುವೂ ಇಲ್ಲವಾಗಿ ವಿಷಯ (ವಸ್ತು)ಗಳನ್ನು ಆತ್ಮನಲ್ಲವೆಂದು ಎಣಿಸುವುದು ಅನಾತ್ಮಾಭಿಮಾನ; ಇದೊಂದು ಕುರುಡುಗತ್ತಲೆ, ಕಗ್ಗತ್ತಲೆ.

ತಿಳಿವಿನ ಸಾಧನ, ತಿಳಿಯತಕ್ಕ ವಿಷಯ-ಮುಂತಾದ ಎಲ್ಲ ರೂಪದಲ್ಲಿ ಜ್ಞಾನಸ್ವರೂಪನಾದ ಆತ್ಮನು ತಾನೇ ಸ್ವತಂತ್ರನಾಗಿ ಸ್ವೇಚ್ಛೆಯಿಂದ ಹರಡಿಕೊಂಡು ಬೆಳಗುತಿದ್ದಾನೆಂದ ಬಳಿಕ ಆತನನ್ನು ಯಾವ ವಸ್ತುವಿನಲ್ಲಿ ಕಾಣದಿರಲು ಶಕ್ಯ? ಕಾಣದಿದ್ದರೆ ನಾವಿರುವುದು ಕಗ್ಗತ್ತಲೆಯಲ್ಲಿ-ಎಂಬುದು ಸ್ಪಷ್ಟ.

ತಿಮಿರಾದಪಿ ತಿಮಿರಮಿದಂ
ಗಂಡಸ್ಯೋಪರಿ ಮಹಾಮಯಂ ಸ್ಫೋಟಃ
ಯದನಾತ್ಮನ್ಯಪಿ ದೇಹ
ಪ್ರಾಣಾದಾವಾತ್ಮಮಾನಿತ್ವಂ ೩೧

[1]ಆತ್ಮವಲ್ಲದ ದೇಹಪ್ರಾಣ ಮೊದಲಾದವುಗಳಲ್ಲಿ ಆತ್ಮವೆಂಬ ಅಭಿಮಾನವು
ಾಧಾರಣವಾದ ಒಂದು *ತಿಮಿರ ದೋಷ, ಕುರುವಿನ ಮೇಲೆ ಎದ್ದ ದೊಡ್ಡ
ಾಕ್ಕೆಯಂತೆ ಅದು.

1. ಆತ್ಮನಿಂದ ಭಿನ್ನವಾದ ವಸ್ತು ಯಾವುದೂ ಇಲ್ಲವೆಂದು ಹೇಳಿದರು. ಇಲ್ಲಿ
ವಲ್ಲದ ವಸ್ತು-ಅನಾತ್ಮ ಉಂಟು ಎಂಬಂತೆ ಮಾತನಾಡಿದರೆ ಹೇಗೆ ಎಂದು ಸಂಶಯ
ಟ್ಟುವುದು ಸಹಜ. ಅದರೆ ಕೆಲವರ ಒಂದು ಬಗೆಯ ವಿಚಿತ್ರವಾದ ವ್ಯವಹಾರವನ್ನು
ಿತು ಹೇಳುವ ಮಾತು ಇದು : ಹಲವರಿಗೆ ಕೆಲವು ವಸ್ತುಗಳಲ್ಲಿ ಮಾತ್ರ ಆತ್ಮೀಯತಾ
ವನೆ, ಬೇರೆ ಕೆಲವು ವಸ್ತುಗಳಲ್ಲಿ ಆ ಭಾವನೆ ಇಲ್ಲ, ಅಂಥವರು ಕೆಲವರನ್ನು
್ಮವರೆಂಬ ಮಮತೆಯಿಂದಲೂ ಬೇರೆ ಕೆಲವರನ್ನು ಹೆರವರೆಂತಲೂ ಎಣಿಸುತ್ತಾರೆ. ಈ
ವಹಾರಕ್ಕೆ ಕಾರಣವೇನು ? ದೇಹ ಸಂಬಂಧದ ಎಣಿಕೆತಾನೆ? ಇವರು ನನ್ನವರು
್ಮ, ತಮ್ಮ, ಮಾವ, ಭಾವ ಆಳು, ಒಡೆಯ ; ಇವು ನನ್ನವು-ಈ ಹೊಲ, ಗದ್ದೆ, ಮನೆ,
ೆ ಎಂಬ ಎಣಿಕೆ, ಆತ್ಮ ವಿಸ್ತಾರವನ್ನು ಕಾಣದೆ ಜಡವಾದ ದೇಹ ಮಾತ್ರ ಸಂಬಂಧ
್ನಿ ಹೀಗೆ ಎಣಿಸುವುದು ಅನಾತ್ಮನಲ್ಲಿ ಆತ್ಮನೆಂಬ ಎಣಿಕೆ-ಮಹಾ ತಿಮಿರದೋಷ.

*ತಿಮಿರದೋಷಕ್ಕೆ ಶ್ಲೋಕ ೨೫ರ ಟಿಪ್ಪಣಿ ನೋಡಿ.

ದೇಹಪ್ರಾಣ ವಿಮರ್ಶನ
ಧೀಜ್ಞಾನ ನಭಃಪ್ರಪಂಚಯೋಗೇನ
ಆತ್ಮಾನಂ ವೇಷ್ಟಯತೇ
ಚಿತ್ರಂ ಜಾಲೇನ ಜಾಲಕಾರ ಇವ ೩೨

ರೇಷ್ಮೆ ಹುಳುವಿನಂಥದು ತನ್ನಸುತ್ತಲೂ ಆವರಣವನ್ನು ನೆಯ್ದುಕೊಂಡು
ತುವಿನಿಂದಾದ ಕೋಶದಿಂದ ತನ್ನನ್ನೇ ಬಂಧಿಸಿಕೊಳ್ಳುವಂತೆ ಆತ್ಮನು [2]ದೇಹ

ಪ್ರಾಣಗಳನ್ನೇ ತಾನೆಂದು ವಿಮರ್ಶಿಸಿ (ಭಾವಿಸಿ) ಕೊಳ್ಳುವುದು, ಬುದ್ಧಿ ನಿಶ್ಚಯವನ್ನು ತಾನೆಂದು ಎಣಿಸುವುದು, ಗಗನಪ್ರಪಂಚವನ್ನೇ ತಾನೆಂದು ತರ್ಕಿಸಿಬಿಡುವುದು-ಮುಂತಾದ ಭಾವನೆಯ ಸೂತ್ರದ ಬಲೆಯಿಂದ ತನ್ನನ್ನೇ ಸುತ್ತುಗಟ್ಟುವುದು ವಿಚಿತ್ರವಾಗಿದೆ.

2. ಈ ದರ್ಶನದ ಪ್ರಕ್ರಿಯೆಯಲ್ಲಿ ವಿಮರ್ಶನವೆಂದರೆ ಆತ್ಮನ ಸ್ವಸಂವೇದನೆ; ಸ್ವಸ್ವರೂಪವನ್ನು ಪ್ರತಿಬಿಂಬಿಸುವ ಚಿತ್ಕ್ರಿಯೆ ವಿಮರ್ಶನ. ಹಾಗೆಯೇ ತನ್ನನ್ನು ತಾನು ಮರೆಯುವ ರೀತಿಗೆ-ಅಖ್ಯಾತಿ ಎಂಬ ಹೆಸರು ಬಂದಿದೆ. ಚಿನ್ಮಾತ್ರನೆನಿಸಿ ಜ್ಞಾನ ಸ್ವರೂಪನಾದ ಜೀವಾತ್ಮನು ತಾನಾಗಿ ಕಲ್ಪಿಸಿಕೊಂಡ ವಿಕಲ್ಪಗಳ ಸರಪಳಿಯಿಂದ ತನ್ನ ವ್ಯಾಪ್ತಿಯನ್ನು ಕುಗ್ಗಿಸಿಕೊಂಡು ಕಟ್ಟಿಗೆ ಸಿಲುಕುತ್ತಾನೆ : 1. ದೇಹವಿಮರ್ಶನ : ಕೆಲವರಲ್ಲಿ ದೇಹವೇ ತಾನೆಂದು ಎಣಿಸಿ ಕೇವಲ ಶರೀರಕ್ಕೆ ಸಂಬಂಧಿಸಿದ ಕೃಶತ್ವ (ತೆಳ್ಳಗಿರುವಿಕೆ), ಸ್ಥೂಲತ್ವ (ಕೊಬ್ಬಿರುವಿಕೆ), ಅಂದ, ಚೆಂದ, ಪಾಂಡಿತ್ಯ-ಮುಂತಾದುವನ್ನು ತಮ್ಮಲ್ಲಿ (ಆತ್ಮನಲ್ಲಿ) ಆರೋಪಿಸಿಕೊಂಡು, "ನಾನು ಕೃಶ, ನಾನು ದಪ್ಪನಾಗಿದ್ದೇನೆ. ನಾನು ಸುಂದರ, ನಾನು ಪಂಡಿತ"-ಎಂಬ ಬಗೆಯ ಭಾವನೆ ಎದ್ದು ಕಾಣುತ್ತದೆ. 2. ಪ್ರಾಣ ವಿಮರ್ಶನ: ಮತ್ತೆ ಕೆಲವರು ತಾವು ಬುದ್ಧಿವಂತರೆಂದು ಭಾವಿಸಿಯೇ ದೇಹ ಜಡ, ಇಲ್ಲಿಯೇ ಲಯವಾಗತಕ್ಕುದು, ಅದು ಆತ್ಮ ಹೇಗಾದೀತು, ಹಸಿವು ಬಾಯಾರಿಕೆ ಅನುಭವಿಸುವ 'ನಾನು' ಆತ್ಮ ವಸ್ತು ಎಂದು ಜಡವಾದ ಪ್ರಾಣದ ಗುಣವನ್ನೇ ಆತ್ಮನಲ್ಲಿ ಆರೋಪಿಸಿ ಆತ್ಮನನ್ನು ಕಂಡಂತೆ ತೃಪ್ತಿ ಪಡುವರು. 3. ಧೀಜ್ಞಾನ-ಬುದ್ಧಿ ನಿಶ್ಚಯ : ಬೇರೆ ಕೆಲವರಾದರೋ ತಾವು ವಿವೇಕಿಗಳಲ್ಲಿ ಅಗ್ರಗಣ್ಯರೆಂದು ಭ್ರಮಿಸಿ "ದೇಹವೂ ಜಡ, ಪ್ರಾಣವೂ ಜಡ, ಅವು ಕೇವಲ ಮಣ್ಣಿನಂತೆ. ಅವುಗಳನ್ನು ಆತ್ಮವೆಂದು ಎಣಿಸಲು ಹೇಗೆ ಶಕ್ಯ, ದೇಹದಲ್ಲಿದ್ದುಕೊಂಡೇ ಸುಖದುಃಖಾದಿಗಳನ್ನು ಅನುಭವಿಸುವ 'ನಾನು' ಆತ್ಮವಸ್ತು ಎಂದು ವಸ್ತುತಃ ಬುದ್ಧಿ ವಿಕಲ್ಪ ಮಾತ್ರವಾದ ಸುಖದುಃಖಗಳನ್ನು ಆತ್ಮನಲ್ಲಿ ಆರೋಪಿಸಿ ನಿಶ್ಚಯವನ್ನು ಕಂಡಂತೆ ತುಷ್ಟಿಹೊಂದುವರು. 4. ಇಂಥವರೆಲ್ಲರಿಗಿಂತ ತಾವು ಪ್ರಚಂಡ ಬುದ್ಧಿವಂತರೆಂಬಂತೆ ಹಿಗ್ಗಿ ಹಗುರಾದ ಹಲವರು ಹುರುಳುಗಾರರು 'ಛೇ ! ಸುಖದುಃಖಾದಿಗಳು ಬುದ್ಧಿ ಧರ್ಮಗಳು, ಆತ್ಮನಿಗೆ ಸಂಬಂಧ ಪಟ್ಟುವಲ್ಲ. ಈ ದೇಹ ಪ್ರಾಣ ಬುದ್ಧಿ ಧರ್ಮಗಳು ಯಾವುವೂ ಎಲ್ಲಿ ಗೋಚರವಾಗುವುದಿಲ್ಲವೋ ಅದೇ ಆತ್ಮ"-ಎಂದು ಶೂನ್ಯವನ್ನು ಆತ್ಮವನ್ನಾಗಿ ಎಣಿಸಿ ಅದ್ಭುತ ರಹಸ್ಯವನ್ನು ಸಾಕ್ಷಾತ್ಕರಿಸಿದಂತೆ ಸಂತೋಷದಲ್ಲಿ ತೇಲುವರು. ಈ ಶೂನ್ಯತಾ ಭಾವನೆ ಇಲ್ಲಿ ನಭ:—ಎಂದು ಸೂಚಿಸಲ್ಪಟ್ಟಿದೆ. ಈ ಬಯಲಿನ ಭಾವನೆಯನ್ನೇ ಮುಂದುವರಿಸಿ 'ಇದಲ್ಲ. ಇದಲ್ಲ' ಎಂಬ 'ನೇತಿ ನೇತಿ'ಯ ನೀತಿಯಿಂದ ಬ್ರಹ್ಮವಾದಿಗಳು

ವರ್ಣಿಸುವ ಆಯಾ ಶೂನ್ಯಗಳನ್ನು ಬಿಟ್ಟು ಬೇರೊಂದನ್ನು ಆತ್ಮವನ್ನಾಗಿ ಎಣಿಸುವ ರೀತಿಯೇ ಒಂದು ಪ್ರಪಂಚ. ಹೀಗೆ ನಭಃ ಪ್ರಪಂಚವೇ ಏರ್ಪಡುತ್ತದೆ. ಇಷ್ಟಾದರೂ ಚಿನ್ಮಾತ್ರವನ್ನು ಕಂಡಂತಾಗದಿರುವುದರಿಂದ ಎಲ್ಲರೂ ಗಾಢ ನಿದ್ರೆಯಲ್ಲಿ ಮುಳುಗಿದವರಾಗಿ ಜಡಾತ್ಮವಾದಿಗಳಂತೆಯೇ ಭ್ರಾಂತರೆನಲು ಸಲ್ಲುತ್ತದೆ. ಅಂತು ಈ ಬಗೆಯ ಎಣಿಕೆಗಳಿಂದ ತಾನಾಗಿಯೇ ಆತ್ಮನು ರೇಷ್ಮೆ ಹುಳು, ಕಂಬಳಿ ಹುಳು ಮುಂತಾದ ಜಾತಿಯ ಪ್ರಾಣಿ ತನ್ನ ಬಾಯಿಂದಲೇ ಹೊರಟ ದಾರದಿಂದ ತನ್ನ ಸುತ್ತಲೇ ಬಲವಾದ ಕೋಶಾವರಣವನ್ನು ಕಲ್ಪಿಸಿಕೊಂಡು ಹೊರಗೆ ಬರಲಾಗದಂತೆ ಒಳಗೆ ಸಿಲುಕುವ ರೀತಿ ಆತ್ಮನದು.

ಈ ಉಪಮಾನದಿಂದ ಇಲ್ಲಿ ವಿಚಿತ್ರವಾದ ಇನ್ನೊಂದು ಸೂಚನೆ ಬರುತ್ತದೆ. ರೇಷ್ಮೆ ಹುಳು ತಾನೇ ಕಲ್ಪಿಸಿಕೊಂಡ ಕೋಶಾವರಣದಿಂದ ಕೆಲವು ಕಾಲದ ಮೇಲೆ ಆ ಆವರಣವನ್ನು ತಾನೇ ಕತ್ತರಿಸಿಕೊಂಡು ಹೊರಕ್ಕೆ ಬೇರೊಂದು ರೂಪದಲ್ಲಿ (ಚಿಟ್ಟೆಯಾಗಿ) ಬಂದುಬಿಡುತ್ತದೆ. ಶಿವ ಶಕ್ತಿಪಾತದ ಮೂಲಕ ಜೀವನೂ ಹಾಗೆ ಹೊರಗೆ ಬಂದಾನು.

ಮುಂದಿನ ಶ್ಲೋಕವನ್ನು ನೋಡಿ.

ಸ್ವಜ್ಞಾನ ವಿಭವ ಭಾಸನ
ಯೋಗೇನೋದ್ವೇಷ್ಟಯೇನ್ನಿಜಾತ್ಮಾನಂ
ಇತಿ ಬಂಧ ಮೋಕ್ಷ ಚಿತ್ರಾಂ
ಕ್ರೀಡಾಂ ಪ್ರತನೋತಿ ಪರಮ ಶಿವಃ ೩೩

[1]ನೈಜವಾದ ಜ್ಞಾನ ವೈಭವದ ಪ್ರಕಾಶನದ ಮೂಲಕ ಆತ್ಮನು ಈ ಆವರಣವನ್ನು ಕಳಚಿಬಿಡುತ್ತಾನೆ. ಹೀಗೆ ಬಂಧಮೋಕ್ಷವೆಂಬ ವಿಚಿತ್ರವಾದ ಕ್ರೀಡೆಯನ್ನು ಪರಮಶಿವನು ನಡೆಸುತ್ತಾನೆ.

1. ಪಶುಭಾವನನ್ನು ಪಡೆದು ಆವರಣದಲ್ಲಿ ಹುದುಗಿ 'ನಾನು ಜಡನು, ಕರ್ಮಪಾಶದಿಂದ ಕಟ್ಟಲ್ಪಟ್ಟವನು, ಮಲಿನನು, ಪರಾಧೀನನು'–ಎಂಬ ಭ್ರಾಂತಿಯಲ್ಲಿ ಮುಸುಕಿದ ಆತ್ಮನು ಚೈತನ್ಯ ಲಕ್ಷಣನಾದ ತನ್ನ ಚಿದಾನಂದೈಕ ಘನಸ್ವಭಾವವನ್ನೂ, ಸ್ವಾತಂತ್ರ್ಯ ವೈಭವವನ್ನೂ ಪರಿಶೀಲನಕ್ರಮದಿಂದ ವಿಮರ್ಶಿಸಿ ದೃಢನಿಶ್ಚಯವನ್ನು ಪಡೆವ ಸಂದರ್ಭವೊದಗುವುದರಿಂದ ಪರಮಶಿವನೇ ಆ ಆವರಣವನ್ನು ಕಳಚುತ್ತಾನೆ.

ತನ್ನನ್ನು ತಾನು ಮರೆಯುವುದರಿಂದ ಒದಗಿದ್ದ ದೇಹಾದ್ಯಾವರಣವು ಸ್ವಸ್ವರೂಪ ವಿಮ ರ್ಶೆಯ ಮೂಲಕ ಉಂಟಾಗುವ ನೆನಹಿನಿಂದ ಕಳಚಿ ಬೀಳುವುದು. ಹಿಂದೆ ಹೇಳಿ ಕ್ರಮದಲ್ಲಿ ಭಗವಾನ್ ಪರಶಿವನೇ ತನ್ನ ವಿನೋದಕ್ಕಾಗಿ ಕ್ರೀಡಾ ಶೀಲತೆಯಿಂ ಸ್ವಸ್ವರೂಪವು ಮರೆಯಾಗುವಂತಾಗಿಸಿ ಆವರಣಕ್ಕೆ ಸಿಲುಕಿಸುತ್ತಾನೆ. ಹಾಗೆಯೆ ಸ್ವೇಚ್ಛೆಯಿಂದ ಮತ್ತೆ ಸ್ವಾತ್ಮಜ್ಞಾನಪ್ರಕಾಶವನ್ನು ಒದಗಿಸಿ ಉಂಟಾದ ಬಂಧವನ್ನು ತಾನೇ ನಿವಾರಿಸುತ್ತಾನೆ. ಹೀಗೆ ಎರಡು ಬಗೆಯಲ್ಲೂ ವಿಚಿತ್ರವಾದ ಸಂಸಾರ ಬಂ ಮೋಕ್ಷವೆಂಬ ಆಟ ಆತನದೇ. 'ಏಕಾಕೀ ನ ರಮಾಮ್ಯಹಂ'–ಎಂಬುದು ಆತ ಸ್ವಭಾವ ತಾನೆ. (ವ್ಯಾಖ್ಯಾಧಾರ)

ಸೃಷ್ಟಿಸ್ಥಿತಿ ಸಂಹಾರಾಃ
ಜಾಗ್ರತ್ಸ್ವಪ್ನೌ ಸುಷುಪ್ತಮಿತಿ ತಸ್ಮಿನ್
ಭಾಂತಿ ತುರೀಯೇ ಧಾಮನಿ
ತಥಾಪಿ ತೈರ್ನಾವೃತಂ ಭಾತಿ ೩

ಸೃಷ್ಟಿ ಸ್ಥಿತಿ ಸಂಹಾರಗಳು ಜಾಗ್ರತ್, ಸ್ವಪ್ನ, ಸುಷುಪ್ತಿದಶೆಗಳ ನಾಲ್ಕನೆಯ ಸ್ಥಾನದಲ್ಲಿರುವ ಆತನಲ್ಲಿ ತೋರಿಬರುತ್ತವೆ. ಆದರೂ ಆತನ ಅವುಗಳಿಂದ ಆವೃತನಾಗದ ರೀತಿಯಲ್ಲಿ ಪ್ರಕಾಶಿಸುತ್ತಾನೆ.

ಈ ಎಲ್ಲ ಅವಸ್ಥೆಗಳಲ್ಲಿಯೂ ಆನಂದ ಸ್ವರೂಪನಾಗಿ (ಕೇವಲ ಸಾಕ್ಷಿಯಂತೆ ನಾಲ್ಕನೆಯ(ಬೇರೊಂದು) ಸ್ಥಿತಿಯಲ್ಲಿರುವ ಶಿವನು ಆವರಣಕ್ಕೆ ಸಿಲುಕದೆ ಪರಿಪೂರ್ಣ ತೆಯು ಮರೆಯಾಗದಂತೆ ಸರ್ವಾನುಭವಿಯಾಗಿ ಮೆರೆಯುವನು. ನೀರಿನಲ್ಲಿ ಹರಡಿಕೊಂ ಡಿನ ಎಣ್ಣೆಯಂತೆ ಆತನ ಅನುಸ್ಯೂತತೆಯನ್ನು ಸೂಚಿಸಬಹುದು.

ಜಾಗ್ರದ್ವಿಶ್ವಂ ಭೇದಾತ್
ಸ್ವಪ್ನಸ್ತೇಜಃ ಪ್ರಕಾಶಮಾಹಾತ್ಮ್ಯಾತ್
ಪ್ರಾಜ್ಞಃ ಸುಪ್ತಾವಸ್ಥಾ
ಜ್ಞಾನಘನತ್ವಾತ್ ತತಃ ಪರಂ ತುರ್ಯಂ ೩

*ಜಾಗ್ರತ್ತು ವೈವಿಧ್ಯದಿಂದ ವಿಶ್ವವೆನಿಸಿಕೊಳ್ಳುತ್ತದೆ. ಸ್ವಪ್ನವು ಪ್ರಕಾಶದ ಮಹಿಮೆಯಿಂದ ತೇಜವೆನಿಸಿಕೊಳ್ಳುತ್ತದೆ. ಸುಷುಪ್ತಾವಸ್ಥೆಯು ಪ್ರಾಜ್ಞ ಸ್ಥಿತಿ. ಇವಕ್ಕೆ ಮೀರಿದುದು ತುರೀಯ. ಜ್ಞಾನಘನವಾದುದು ಅದು.

* ವಿಶ್ವನೆಂದರೆ ವೈವಿಧ್ಯಮಯತೆ, ಎಚ್ಚರವೆಂದರೆ ವಿಷಯ ವೈವಿಧ್ಯವನ್ನು ಕಾಣುವುದು. ಈ ವೈವಿಧ್ಯಕ್ಕೆ ಕಾರಣ ಬಾಹ್ಯೇಂದ್ರಿಯಗಳಿಗೆ ಗೋಚರವಾಗುವ ಶಬ್ದ ಸ್ಪರ್ಶಾದಿಗಳಲ್ಲಿ ಹಲವು ಬಗೆ. ತಿಳಿಯುವ ಇಂದ್ರಿಯಗಳು ತಿಳಿಯಲ್ಪಡುವ ವಿಷಯಗಳು-ಹೀಗೆ ಗ್ರಾಹ್ಯಗ್ರಾಹಕ ಭೇದದ ವೈಚಿತ್ರ್ಯದಿಂದ ಬ್ರಹ್ಮನೇ ಇಲ್ಲಿ ತೋರಿಬರುತ್ತಾನೆ. ಈ ಅವಸ್ಥೆ ಬ್ರಹ್ಮನ 'ವಿರಾಟ್' ಸ್ವರೂಪವೆನಿಸುತ್ತದೆ. ಆದುದರಿಂದ ಜಾಗ್ರತ್ತು ವಿಶ್ವವೆಂದರು. ಸ್ವಪ್ನವು ಪ್ರಕಾಶಾವಸ್ಥೆಯೆನ್ನಲು ಕಾರಣ ಇದು: ಭಗವಾನ್ ಪರಮಶಿವನೇ ಕ್ರೀಡಾಪರನಾಗಿ ಆಯಾ ಪ್ರಮಾತೃ ಜೀವರೂಪದಲ್ಲಿ ಹರಡಿದವನಾಗಿದ್ದು ತನ್ನ ಪ್ರಕಾಶ ಸ್ವಾತಂತ್ರ್ಯದಿಂದ ಮನೆ, ಮಠ, ಮಹಡಿ ಊರು ಕೇರಿ ಮುಂತಾದ ವಸ್ತು ವೈಚಿತ್ರ್ಯದಿಂದ ವಿಭಾಗಿಸಿಕೊಂಡೂ ಅಸಾಧಾರಣವಾದ ರೀತಿಯಲ್ಲಿ ಸ್ವಪ್ನದಲ್ಲಿ ಪ್ರತಿ ಜೀವಕ್ಕೂ ಪ್ರಕಾಶಗೊಳಿಸುತ್ತಾನೆ—ಎಂದು ಬ್ರಹ್ಮನ ಸ್ವಾತಂತ್ರ್ಯ ಬ್ರಹ್ಮಾದಿಗಳಿಂ ಒಪ್ಪಲ್ಪಟ್ಟಿದೆ. "ಪ್ರವಿಭಜ್ಯಾತ್ಮನಾತ್ಮಾನಂ ಸೃಷ್ಟ್ವಾ ಭೂತಾನ್ ಪೃಥಗ್ವಿಧಾನ್॥ ಸರ್ವೇಶ್ವರಃ ಸರ್ವಮಯಃ ಸ್ವಪ್ನೇ ಭೋಕ್ತಾ ಪ್ರಕಾಶತೇ॥" ಎಂದು ವೇದಾಂತಗಳಲ್ಲಿ ಉಕ್ತವಾಗಿದೆ.

ಸುಷುಪ್ತಾವಸ್ಥೆಯನ್ನು (ಗಾಢನಿದ್ರೆಯ ದಶೆ) ಪ್ರಾಜ್ಞಾವಸ್ಥೆಯೆನ್ನಲು ನಿಮಿತ್ತ ಇದು: ಈ ದಶೆಯಲ್ಲಿ ಆಂತರಂಗಿಕವಾಗಿಯಾಗಲಿ ಬಾಹ್ಯವಾಗಿಯಾಗಲಿ ಯಾವುದೊಂದು ವಿಕಲ್ಪದರ್ಶನವೂ ಇಲ್ಲದೆ ವಿಷಯ ಪ್ರಪಂಚವು ವಿಲಯವಾಗಿ ಶೂನ್ಯವಾಗಿ ಕೇವಲ ಸಂಸ್ಕಾರ ಮಾತ್ರ ಶೇಷವಾಗಿರುವುದು. ಮತ್ತು ವಿಶ್ವಬೀಜ ಭೂತನಾದ ಬ್ರಹ್ಮನ ಪ್ರಜ್ಞೆ ಅಂತರತಮವಾಗಿರುವುದು. ಇಲ್ಲದಿದ್ದರೆ-ನಾನು ಸುಖವಾಗಿ ಮಲಗಿದ್ದೆ-ಎಂದು ಮುಂತಾದ ಅನುಭವಸಾಕ್ಷಿತ್ವ ದೊರಕುತ್ತಿರಲಿಲ್ಲ. ಈ ಮೂರಕ್ಕೆ ಮೀರಿದುದು ತುರೀಯ: ಸುಷುಪ್ತಕ್ಕಿಂತ ತುಂಬ ಹಿರಿದು ಅದು. ಪಾಶವ ವಾಸನಾ ಸಂಸ್ಕಾರವೆಲ್ಲವೂ ನಿಶ್ಶೇಷವಾಗಿ ಕ್ಷಯಿಸಿಹೋಗಿ ಶುದ್ಧ ಪೂರ್ಣಾನಂದಮಯವಾದ ಬ್ರಹ್ಮ ಸ್ವರೂಪವು ಅಲ್ಲಿ ವ್ಯಕ್ತವಾಗುವುದು. ಚಿದಾನಂದಮಯತ್ವದಿಂದ ಇದಕ್ಕೆ ಹಿರಿಮೆ.

ಜಲಧರ ಧೂಮ ರಜೋಭಿಃ
ಮಲಿನೀಕ್ರಿಯತೇ ಯಥಾ ನ ಗಗನತಲಂ

ತದ್ವತ್ ಮಾಯಾವಿಕೃತಿಭಿಃ
ಅಪರಾಮೃಷ್ಟಃ ಪರಃ ಪುರುಷಃ ೩೬

ಆಕಾಶವು ಮೋಡ ಹೊಗೆ ಧೂಳು ಇವುಗಳಿಂದ ಹೇಗೆ ಮಲಿನವಾಗುವು ದಿಲ್ಲವೋ ಹಾಗೆಯೇ ಪರಮಪುರುಷನು ಮಾಯಾ ವಿಕಾರಗಳಿಂದ ಕಲುಷಿತ ನಾಗುವುದಿಲ್ಲ.

ಜೀವ ಸ್ವರೂಪದಲ್ಲಿ ಅಖ್ಯಾತಿಯಿಂದ ಉಂಟಾಗಿ ತೋರಿಬರುವ ಜನನ ಮರಣಾದಿ ನಾನಾ ವಿಧ ವಿಕಾರಗಳಿಂದ ಪರಮ ಪುರುಷನಿಗೆ ಯಾವ ಸ್ವರೂಪಾಪಹಾರವೂ ಆಗಲಾ ರದು. ಎಲ್ಲದರ ಉಗಮಸ್ಥಾನವೂ ವಿಶ್ರಾಂತಿಸ್ಥಾನವೂ ತಾನೇ ಆಗಿಯೂ ಸರ್ವಾನು ಭಾವಿಯಾಗಿ ಆತನು ಸದಾ ಪ್ರಕಾಶಿಸುತ್ತಿರುತ್ತಾನೆ.

ಏಕಸ್ಮಿನ್ ಘಟಗಗನೇ
ರಜಸಾ ವ್ಯಾಪ್ತೇ ಭವಂತಿ ನಾನ್ಯಾನಿ
ಮಲಿನಾನಿ ತದ್ವದೇತೇ
ಜೀವಾಃ ಸುಖದುಃಖಭೇದಜುಷಃ ೩೭

ಮಡಕೆಯೊಂದರ ಒಳಗಿನ ಆವರಣವು ಧೂಳಿಯಿಂದ ವ್ಯಾಪ್ತವಾದರೆ ಬೇರೆ ಮಡಕೆಗಳ ಒಳಗೂ ಮಲಿನವಾಗುವುದಿಲ್ಲ. ಹಾಗೆ ಈ ಜೀವಗಳು ಸುಖದುಃಖಗಳಲ್ಲಿ ವ್ಯತ್ಯಾಸವನ್ನು ಹೊಂದಿವೆ.

ಜೀವರಾಶಿಯೆಲ್ಲವೂ ಪರಮಾರ್ಥವಾಗಿ ಏಕಚಿನ್ಮಾತ್ರದ ಅಂಶವಾದರೂ ಪರಮೇ ಶ್ವರನ ಮಾಯಾಶಕ್ತಿಯಿಂದ ಆಣವ ಮಾಯೀಯ, ಕಾರ್ಮವೆಂಬ ಹಿಂದೆ ಹೇಳಿದ ಮಲತ್ರಯದ ಆವರಣದಲ್ಲಿ ಹುದುಗಿ ಪೂರ್ಣವೂ ವ್ಯಾಪಿಯೂ ಚಿದಾನಂದೈಕಘನವೂ ಆದ ಸ್ವಸ್ವರೂಪವು ಮರೆಯಾಗಿ ಪರಿಮಿತಿಗೊಳಪಡುತ್ತವೆ. ಅನಂತವಾದ ಮಹದಾ ಕಾಶದಲ್ಲಿ ಕೃತಕವಾದ ಆವರಣಗಳು ಕಲಿಸಲ್ಪಟ್ಟರೆ ಆ ಆವರಣಗಳೊಳಗೆ ಪರಿಮಿತ ವಾದ ಆಕಾಶವು ಏರ್ಪಡುವಂತೆ ಇವುಗಳ ಸ್ಥಿತಿ. ನಾವು ದಿನಗಟ್ಟಲೆ ನೋಡುವಂತೆ ಎಲ್ಲ ಆವರಣಗಳ ಒಳಗೂ ಒಂದೇ ಸಮನಾಗಿರುವುದಿಲ್ಲ. ಹಾಗೆಯೇ ಕೋಶತ್ರಯದ ವೈವಿಧ್ಯಕ್ಕನುಸಾರವಾಗಿ ಏಕಚೈತನ್ಯಾತ್ಮವಾದರೂ ವಿಚ್ಛೇದಹೊಂದಿ ಪರಸ್ಪರ ಭಿನ್ನವಾಗಿ

ಗೃಹಾಕಾಶ, ಘಟಾಕಾಶ ಮುಂತಾದಂತೆ ವ್ಯವಹಾರಕ್ಕೆ ಸಿಲುಕುತ್ತವೆ. ಹೀಗೆ ಮಾಯಾದಿ ಮಲದ ದೆಸೆಯಿಂದ ಉಂಟಾದ ವಿಚ್ಛೇದವೇ ಜೀವ-ಎಂಬ ಹೆಸರಿನ ವ್ಯವಹಾರಕ್ಕೆ ಕಾರಣ. ಹಾಗಲ್ಲದೆ ಅಪರಿಚ್ಛಿನ್ನನಾದ ಚಿದಾನಂದೈಕ ಘನ ಪರಮೇಶ್ವರನಲ್ಲಿ ಜೀವರು ಪುರುಷರು ಆತ್ಮಗಳು–ಅಣುಗಳು–ಎಂಬ ವ್ಯವಹಾರಕ್ಕೆ ಅವಕಾಶವೆಲ್ಲಿ? ಈ ಪ್ರಕಾರ ಆಣವಾದಿ ಮಲದ ಆವರಣದಿಂದ ಜೀವತೆ ಏರ್ಪಟು ಅನಾದಿಯಾದ ವಿಚಿತ್ರ ಕರ್ಮವಾಸನೆಯಿಂದ ಪ್ರಾಪ್ತವಾದ ನಾನಾ ದೇಹಗಳು ನಾನಾ ಆಶಯಗಳು ನಾನಾವಿಧ ಪುಣ್ಯ ಪಾಪ ಸ್ವರ್ಗ ನರಕ ಸುಖದುಃಖ ಜನ್ಮ ಮರಣಾದಿ ದ್ವಂದ್ವ ಭೇದಗಳು ಇವಕ್ಕೆ ಅವಕಾಶವಾಗುತ್ತದೆ. ಈ ವ್ಯವಹಾರದಲ್ಲಿ ಒಂದು ಜೀವದ ಸುಖದುಃಖಗಳಂತೆ ಮತ್ತೊಂದರ ಸುಖದುಃಖ ಇರಬೇಕಾಗಿಲ್ಲ. ಗುಂಬಗಳು ಹಲವಿದ್ದರೆ ಒಂದು ಗುಂಬದ ಒಳ ಆವರಣಕ್ಕೆ ಕಾರಣ ವಿಶೇಷದಿಂದ ಧೂಳಿ ಸೇರಿದರೆ ಬೇರೊಂದಕ್ಕೂ ಸೇರಬೇಕೆಂಬ ನಿರ್ಬಂಧವಿಲ್ಲ–ಆ ಬೇರೊಂದು ಪಚ್ಚ ಕರ್ಪೂರದಿಂದ ವಾಸಿತವಾಗಬಹುದು. ಮತ್ತೊಂದು ಕಸ್ತೂರಿಯ ಗಂಧಕ್ಕೆ ನೆಲೆಯಾಗಬಹುದು. ಹಾಗೆಯೇ ಜೀವವ್ಯವಹಾರದ ಸುಖ ದುಃಖ ವೈವಿಧ್ಯ.

ಶಾಂತೇ ಶಾಂತ ಇವಾಯಂ
ಹೃಷ್ಟೇ ಹೃಷ್ಟೋ ವಿಮೋಹವತಿ ಮೂಢಃ
ತತ್ತ್ವಗಣೇ ಸತಿ ಭಗವಾನ್
ನ ಪುನಃ ಪರಮಾರ್ಥತಃ ಸ ತಥಾ ೩೮

(ಇಂದ್ರಿಯ ಗಣವೇ ಮುಂತಾದ) ತತ್ತ್ವವರ್ಗವು ಉಪರತವಾಗಿ ಶಾಂತವೆನಿಸಿದಾಗ ಭಗವಂತನು ತಾನೂ ಶಾಂತನೆಂಬಂತೆಯೂ ಹರ್ಷಗೊಂಡು ಉತ್ಸುಕವಾದಾಗ ತಾನೂ ಹರ್ಷೋತ್ಸುಕನೆಂಬಂತೆಯೂ ಮೋಹಗೊಂಡು ಮಂಕಾದಾಗ ತಾನೂ ಮಂಕುಗೊಂಡಂತೆಯೂ ತೋರುತ್ತಾನೆ. ಆದರೆ ಪರಮಾರ್ಥವಾಗಿ ಹಾಗಲ್ಲ.

ಯಾವ ವಿಕಾರವಾದರೂ ಬಾಹ್ಯವಾದ ಜಡ ಶರೀರಕ್ಕೆ ಸಂಬಂಧ ಪಟ್ಟುದೇ ಹೊರತು ಜ್ಞಾನೈಕ ಸ್ವಭಾವನಾದ ಭಗವಂತನಿಗಲ್ಲ. ಮಾಯಾದಿ ಕಂಚುಕಗತವಾದ ಉತ್ಪತ್ತಿ ವಿನಾಶಗಳು ಜಡ ಶರೀರಕ್ಕೆ ಸೇರಿದುವು.

ಯದನಾತ್ಮನ್ಯಪಿ ತದ್ರೂಪಾ
ವಭಾಸನಂ ತತ್ ಪುರಾ ನಿರಾಕೃತ್ಯ
ಆತ್ಮನ್ಯನಾತ್ಮ ರೂಪಾಂ
ಭ್ರಾಂತಿಂ ವಿದಲಯತಿ ಪರಮಾತ್ಮಾ ೩೯

ಪರಮಾತ್ಮನು ಮೊದಲು ಅನಾತ್ಮನು ಆತ್ಮನೆಂದು ತೋರುವ ಭ್ರಾಂತಿಯನ್ನು ನಿರಾಕರಿಸಿ ಅನಂತರ ಆತ್ಮನ ವಿಷಯದಲ್ಲಿ ಹುಟ್ಟುವ ಅನಾತ್ಮವೆಂಬ ಭ್ರಾಂತಿಯನ್ನು ನಾಶಮಾಡುತ್ತಾನೆ.

ದೇಹಕ್ಕೆ ಸಂಬಂಧಿಸಿದ ಕೃಶತ್ವ ಸ್ಥೂಲತ್ವಾದಿಗಳನ್ನು ತನ್ನಲ್ಲಿ ಆರೋಪಿಸಿಕೊಂಡು "ನಾನು ಕೃಶ, ನಾನು ಸ್ಥೂಲ"-ಎಂದು ಎಣಿಸುವ ಆತ್ಮನ ಭ್ರಾಂತಿಯನ್ನು ನೀಗಿ ತರುವಾಯ ನಾನಾತ್ವಭಾವನಾ ರೂಪವಾದ ಭೇದಭ್ರಾಂತಿಯನ್ನು ಪರಮಾತ್ಮನು ನಾಶ ಮಾಡುತ್ತಾನೆ.

ಇತ್ಥಂ ವಿಭ್ರಮಯುಗಲಕ
ಸಮೂಲ ವಿಚ್ಛೇದನೇ ಕೃತಾರ್ಥಸ್ಯ
ಕರ್ತವ್ಯಾಂತರ ಕಲನಾ
ನ ಜಾತು ಪರಯೋಗಿನೋ ಭವತಿ ೪೦

ಹೀಗೆ ಭ್ರಾಂತಿಗಳೆರಡೂ ಸಮೂಲವಾಗಿ ಕತ್ತರಿಸಲ್ಪಟ್ಟು ಕೃತಾರ್ಥನಾದ ಪರಮಯೋಗಿಗೆ ಮಾಡಬೇಕಾದ ಬೇರೆ ಕರ್ತವ್ಯದ ಹವ್ಯಾಸ ಯಾವಾಗಲೂ ಇರುವುದಿಲ್ಲ.

ಪೃಥಿವೀ ಪ್ರಕೃತಿ ರ್ಮಾಯಾ
ತ್ರಿತಯಮಿದಂ ವೇದ್ಯ ರೂಪತಾಪತಿತಂ

ಅದ್ವೈತ ಭಾವನ ಬಲಾತ್
ಭವತಿ ಹಿ ಸನ್ಮಾತ್ರ ಪರಿಶೇಷಂ ೪೧

ಪೃಥಿವೀ, ಪ್ರಕೃತಿ ಮತ್ತು ಮಾಯೆ ಇವು ಮೂರು ಜ್ಞಾನಕ್ಕೆ ವಿಷಯ ವೆಂಬಂತಿವೆ. ಆದರೆ ಜ್ಞೇಯ ಬೇರೆ ಅಲ್ಲ, ಜ್ಞಾತೃ ಬೇರೆಯಲ್ಲ–ಎಂಬ ಅದ್ವೈತ ಭಾವನೆಯು ಬಲವಾದರೆ ಉಳಿಯುವುದು ಕೇವಲ ಸತ್-ಒಂದೇ.

ರಶನಾ ಕುಂಡಲ ಕಟಕಂ
ಭೇದತ್ಯಾಗೇನ ದೃಶ್ಯತೇ ಯಥಾ ಹೇಮ
ತದ್ವತ್ ಭೇದತ್ಯಾಗೇ
ಸನ್ಮಾತ್ರಂ ಸರ್ವಮಾಭಾತಿ ೪೨

ಸರಪಣಿ ಕುಂಡಲ ಕಡಗ ಮೊದಲಾದ ಚಿನ್ನದ ಆಭರಣಗಳ ಭಿನ್ನ ಭಿನ್ನರೂಪಗಳು ಹೋಗಲಾಗಿ ಹೇಗೆ ಅವೆಲ್ಲಾ ಬರಿಯ ಚಿನ್ನವಾಗಿ ಉಳಿಯುವುವೋ ಹಾಗೆಯೇ ವಿಶ್ವದ ಭೇದಗಳು ಹೋಗಲಾಗಿ ಸರ್ವವೂ ‘ಸನ್ಮಾತ್ರ’ವಾಗಿ ಪ್ರಕಾಶಿಸುವುದು.

ತದ್ಬ್ರಹ್ಮ ಪರಂ ಶುದ್ಧಂ
ಶಾಂತಮಭೇದಾತ್ಮಕಂ ಸಮಂ ಸಕಲಂ
ಅಮೃತಂ ಸತ್ಯಂ ಶಕ್ತೌ
ವಿಶ್ರಾಮ್ಯತಿ ಭಾಸ್ವರೂಪಾಯಾಂ ೪೩

ಪರವೂ ಶುದ್ಧವೂ ಶಾಂತವೂ ಅಭೇದ ಸ್ವರೂಪವೂ ಸಮವೂ ಸಕಲವೂ ಅಮೃತವೂ ಸತ್ಯವೂ ಆದ ಆ ಬ್ರಹ್ಮತತ್ತ್ವವು ಪ್ರಕಾಶರೂಪವಾದ ತನ್ನ ಶಕ್ತಿಯಲ್ಲಿ ವಿಶ್ರಾಂತವಾಗುವುದು.

ಪೂರ್ಣತ್ವದಿಂದ ಪರವೂ ಹೇಯೋಪಾದೇಯಗಳೆಂಬುವಿಲ್ಲದಿರುವುದರಿಂದ ಶುದ್ಧವೂ ಭಿನ್ನಭಾವನೆ ಹೋಗುವುದರಿಂದ ಶಾಂತವೂ ಅದರಿಂದಲೇ ಅಭೇದಾತ್ಮಕವೂ

ಹೆಚ್ಚು ಕುಂದುಗಳೆಂಬುದಿಲ್ಲದಿರುವುದರಿಂದ ಸಮವೂ ಸಕಲವೂ ಅವಿನಾಶಿಯೆನಿಸುವುದರಿಂದ ಅಮೃತವೂ ಆದ ಆ ತತ್ತ್ವವು ಇಚ್ಛಾ ಜ್ಞಾನ ಕ್ರಿಯಾಶಕ್ತಿಗಳ ಸಾಮರಸ್ಯ ಸ್ಥಿತಿಯಾಗಿ ಪ್ರಕಾಶರೂಪವಾದ ಪರಶಕ್ತಿಯಲ್ಲಿ ವಿಶ್ರಾಂತವಾಗುವುದು. (ವ್ಯಾಖ್ಯಾನ)

ಇಷ್ಯತ ಇತಿ ವೇದ್ಯತ ಇತಿ
ಸಂಪಾದ್ಯತ ಇತಿ ಚ ಭಾಸ್ವರೂಪೇಣ
ಅಪರಾಮೃಷ್ಟಂ ಯದಪಿ ತು
ನಭಃಪ್ರಸೂನತ್ವಮಭ್ಯೇತಿ ೪೪

ಬಯಸಲ್ಪಡುತ್ತದೆ. ತಿಳಿಯಲ್ಪಡುತ್ತದೆ ಹೊಂದಲ್ಪಡುತ್ತದೆ-ಎಂದು ಇಚ್ಛಾ ಜ್ಞಾನ ಕ್ರಿಯೆಗಳಿಗೆ ವಿಷಯವಾಗಿದ್ದು ಸಂಕಲ್ಪ ವೇದನ ಸಂಪಾದನ ರೂಪವಾದ ವ್ಯವಹಾರಕ್ಕೆ ಒಳಗಾದ ಯಾವುದೂ ಆ ಪರಾಶಕ್ತಿಯ ತೇಜಸ್ಸಿನ ಸ್ಪರ್ಶಕ್ಕೆ ಸಿಲುಕದಿರದು. ಹೀಗೆ ಸಿಲುಕದುದು ಒಳಗಾಗದುದು ಇದೆಯೆಂದರೆ ಆಕಾಶದಲ್ಲಿ ಹೂ ಬಿಟ್ಟದೆ ಎಂದ ಹಾಗೆ.

ಎಲ್ಲವೂ ಕೇವಲ ಸನ್ಮಾತ್ರವಾದ ಪರಮಾರ್ಥ ಬ್ರಹ್ಮದಲ್ಲಿ—ಆ ಪ್ರಕಾಶದಲ್ಲಿ ಲೀನವಾಗುವುದು.

ಶಕ್ತಿ ತ್ರಿಶೂಲ ಪರಿಗಮ
ಯೋಗೇನ ಸಮಸ್ತಮಪಿ ಪರಮೇಶೇ
ಶಿವನಾಮನಿ ಪರಮಾರ್ಥೇ
ವಿಸೃಜ್ಯತೇ ದೇವದೇವೇನ ೪೫

[1](ಹೀಗೆ) ಸಮಸ್ತವೂ [2]ದೇವದೇವನಿಂದ ಶಕ್ತಿತ್ರಯವೆಂಬ [3]ತ್ರಿಶೂಲದ (ಧಾರೆಗಳ ಹರಿತದ ಮೊನೆಗಳಿಗೆ ಜೋಡಿಸಲ್ಪಟ್ಟು ಆ) ಮೂಲಕ ಶಿವ-ಎಂಬ ಹೆಸರಿನ ಪರಮಾರ್ಥದ ಪರಮೇಶ್ವರ್ಯ (ಸ್ವಧಾಮ)ದಲ್ಲಿ ಬಿಸುಡಲ್ಪಡುವುದು.

1. ಎಲ್ಲವೂ ಲೀಲಾವಿಹಾರಿಯಾದ ಪರಮೇಶ್ವರನ ಇಚ್ಛಾ ಜ್ಞಾನ ಕ್ರಿಯಾಶಕ್ತಿಗಳ ಸಾಮರಸ್ಯ ಸ್ಥಿತಿಯು ಕೇವಲ ಸತ್ತಾಮಾತ್ರ ಸ್ವರೂಪವಾದ ಪರಮಾರ್ಥದಲ್ಲಿ ಆ ಪರಾಶಕ್ತಿಯಿಂದ ಹೀಗೆ ಲೀನಗೊಳಿಸಲ್ಪಡುವುದು.

1. ದೇವದೇವನೆಂಬ ಮಾತು ತುಂಬಾ ಅರ್ಥಗರ್ಭಿತವಾದುದು. ಲೀಲಾವಿಹಾರಿಯ ವಿಹಾರಸಂತೋಷಕ್ಕೆ ಆಧಾರ ಇಂದ್ರಿಯಗಳು. ಗ್ರಾಹಕಗಳಾದ ಇಂದ್ರಿಯಗಳು ಗ್ರಾಹ್ಯಗಳಾದ ವಿಷಯಗಳನ್ನು ಗ್ರಹಿಸುವ ರೀತಿಯು ವಿಚಿತ್ರ ವೈವಿಧ್ಯದ ಮತ್ತು ಆ ಸಂದರ್ಭದ ನಾನಾವಿಧ ಚೇಷ್ಟೆಗಳ ನೋಟದಲ್ಲಿ ಆ ಸಂತೋಷ ಕುಳಿತಿದೆ. ಬ್ರಹ್ಮನಾಮದಿಂದ ಹಿಡಿದು ಸದಾಶಿವನಾಮ ಪರ್ಯಂತವಾದ ಸರ್ವವಿಧ ಪ್ರಕಾಶರೂಪ ಜೀವರಾಶಿಯು ವೇಷವನ್ನು ಧರಿಸಿ ಹರಡಿ ಇಂದ್ರಿಯಗಳನ್ನು ಅಂಟಿಸಿಕೊಟ್ಟೊಡನೆ ತನ್ಮೂಲಕ ನಾನಾವಿಧ ವ್ಯವಹಾರಕ್ಕೆ ಅವಕಾಶವನ್ನು ವಿಷಯಗಳ ರೂಪವಾಗಿ ಕಲ್ಪಿಸಿ ಬಿಟ್ಟೊಡನೆ ಪಶುಭಾವದ ಅವುಗಳ ಚಿತ್ರ ವಿಚಿತ್ರವಾದ ವರ್ತನೆಯು ಸೋಜಿಗದ ಆರಂಭ ! ಈ ಸೋಜಿಗದಿಂದ ಆತನು ನಲಿವುದರಿಂದಲೇ ದೇವ ದೇವ ! ದೇವ–ಎಂದರೆ ಇಂದ್ರಿಯ. ದೇವ–ಎಂದರೆ ಕ್ರೀಡಾಪರ, ವಿಹಾರಿ. ಈಶನ ಕ್ರೀಡಾಪರತೆ ಇಂದ್ರಿಯಗಳ ಪರವಶತೆಯಲ್ಲಿ ಈ ಜೀವರಾಶಿಯು ವ್ಯವಹರಿಸುವ ಚೋದ್ಯರೀತಿಗಳಲ್ಲಿ ವ್ಯಕ್ತವಾಗಿ ಸಾರ್ಥಕಗೊಳ್ಳುತ್ತದೆ. ಅದರಿಂದಲೇ ಆತನು ದೇವದೇವ.

2. ಪರಶಿವನು ತ್ರಿಶೂಲಧಾರಿ, ಖಟ್ವಾಂಗವನ್ನು ಹಿಡಿದಿದ್ದಾನೆ, ಶ್ಮಶಾನವಾಸಿ–ಎಂದು ಮುಂತಾದ ಪ್ರಸಿದ್ಧಿಯುಂಟಷ್ಟೆ. ಅದರ ಅರ್ಥವೇನಿರಬಹುದೆಂಬುದನ್ನು ಇಲ್ಲಿ ಮತ್ತು ಮುಂದೆ 79, 80 ನೆಯ ಶ್ಲೋಕಗಳಲ್ಲಿ ಸುಂದರವಾಗಿ ನಿರೂಪಿಸುತ್ತಾರೆ: ಭಗವಂತನ ಇಚ್ಛಾ ಜ್ಞಾನ ಕ್ರಿಯಾಶಕ್ತಿಗಳೆಂಬುವೇ ಆ ತ್ರಿಶೂಲದ ಮೂರಲಗು, ಸ್ವೇಚ್ಛೆಯಿಂದ ಆತನು ಹರಡಿ ಹಂಚಿಕೊಂಡು ಸೃಷ್ಟಿರೂಪದಲ್ಲಿ ಹೊರಗೆಡಹಿದ ಸಮಸ್ತ ವಸ್ತುವಿಕಲ್ಪವನ್ನೂ ತನ್ನ ಶಕ್ತಿತ್ರಯದ ತ್ರಿಶೂಲದ ಮೊನೆಯಿಂದ ಚುಚ್ಚಿ ಚುಚ್ಚಿ ಜೋಡಿಸಿಕೊಂಡು ಕೇವಲ ಪರಮಾರ್ಥವಾದ ಶಿವನಾಮಧೇಯದ ಅಪರಿಮಿತ ಚಿದಾನಂದೈಕ ಘನ ಸ್ವಭಾವದ ಪರಮೈಶ್ವರ್ಯ ದಿವ್ಯ ಧಾಮಕ್ಕೆ ಎಸೆದು ನೆಲೆಗೊಳಿಸುವನು. (ಕೃಷಿಕನು ಬೇಸಾಯ ಮುಗಿದಬಳಿಕ ತಾನು ಕಟ್ಟಿದ ತೆನೆಗೂಡಿದ ಹುಲ್ಲಿನ ಕಂತೆಗಳನ್ನೂ ತನ್ನ ಮೆರೆಗೋಲಿನ ತುದಿಯಿಂದ ಚುಚ್ಚಿ ಚುಚ್ಚಿ ಮೆದೆಹಾಕುವ ಅಥವಾ ಒಕ್ಕುನೆಡೆಗೆ ಬಿಸುಡುವ ರೀತಿಯನ್ನು ಇಲ್ಲಿ ನೆನೆಯಬಹುದು) ಆತನ ಪರಾಶಕ್ತಿಯಿಂದ ಹೀಗೆ ಎಲ್ಲವೂ ತೇಜೋಮಯವಾದ ಸ್ವಸ್ವರೂಪದಲ್ಲಿ ಲೀನವಾಗುವುದೇ ಪ್ರಳಯ. ಅಂತರ್ಮುಖವಾದ ವಿಮರ್ಶೆಯಲ್ಲಿ ತೊಡಗಿ ಆತ್ಮನ ನೈಜಸ್ವಭಾವದ ಅನುಸಂಧಾನದ ಮೂಲಕ ಶಕ್ತಿತ್ರಯದ ಸಾಮರಸ್ಯ ಸ್ಥಿತಿಯ ಸಾಕ್ಷಾತ್ಕಾರದಿಂದ ತನ್ನ ಯತ್ನವನ್ನು ಪಡೆಯುವ ಇರವು–‘ ಲೀಯೇ ಪರಬ್ರಹ್ಮಣಿ ’-ಅದು.

ಪ್ರಸರಪಿ ಚ ಪಂಚಶಕ್ತಿ
ಪ್ರಸರಣ ಕ್ರಮೇಣ ಬಹಿರಪಿ ತತ್
ಅಂಡತ್ರಯಂ ವಿಚಿತ್ರಂ
ಸೃಷ್ಟಂ ಬಹಿರಾತ್ಮಲಾಭೇನ ೪೬

(ಹೀಗೆ ವಿಸರ್ಜಿಸಲ್ಪಟ್ಟ ಲೀನವಾದ ಸಮಸ್ತವೂ) ಮತ್ತೆ ಎಂದಿನಂತೆ (ಪರಶಿವನ) [1]ಅಯ್ದು ಶಕ್ತಿಗಳ ವಿಸ್ತರಣದ ಸಂದರ್ಭದಲ್ಲಿ ಕ್ರಮವಾಗಿ ಹೊರಕ್ಕೆ ವಿಸರ್ಜಿಸಲ್ಪಡುವುದು. ಆತ್ಮನ ಶಕ್ತಿಪ್ರಕಾಶದ ಈ ಬಹಿರ್ವಿಸರ್ಜನ ದಿಂದಾದ ಈ ಬಾಹ್ಯಪ್ರದರ್ಶನ ವಿಚಿತ್ರವಾದ [2]ಅಂಡತ್ರಯದ ಸೃಷ್ಟಿ (ಎನಿಸುವುದು).

1. ಚಿತ್. ಆನಂದ, ಇಚ್ಛಾ, ಜ್ಞಾನ, ಕ್ರಿಯೆಗಳೇ ಅಯ್ದು ಶಕ್ತಿಗಳು. ಈ ಅಯ್ದುಶಕ್ತಿಗಳ ಸಾಮರಸ್ಯರೂಪನಾದ ಆತ್ಮನೇ ಪರಮಶಿವನು. (ವ್ಯಾಖ್ಯಾನ)

2. ಶಿವ ಶಕ್ತಿ ಸದಾಶಿವ ಈಶ್ವರ ವಿದ್ಯಾರೂಪವಾದ ಆತನ ಆತ್ಮವಿಸ್ತರಣವೇ ಮಾಯಾ, ಪ್ರಕೃತಿ, ಪೃಥ್ವೀ-ಎಂಬ ಅಂಡತ್ರಯದ ಸೃಷ್ಟಿ. (14ನೆಯ ಶ್ಲೋಕವನ್ನು ನೋಡಿ).

ಇತಿ ಶಕ್ತಿಚಕ್ರಯಂತ್ರಂ
ಕ್ರೀಡಾಯೋಗೇನ ವಾಹಯನ್ ದೇವಃ
ಅಹಮೇವ ಶುದ್ಧರೂಪಃ
ಶಕ್ತಿ ಮಹಾ ಚಕ್ರನಾಯಕ ಪದಸ್ಥಃ ೪೭

ಮಯ್ಯೇವ ಭಾತಿ ವಿಶ್ವಂ
ದರ್ಪಣ ಇವ ನಿರ್ಮಲೇ ಘಟಾದೀನಿ

ಮತ್ತಃ ಪ್ರಸರತಿ ಸರ್ವಂ
ಸ್ವಪ್ನವಿಚಿತ್ರತ್ವಮಿವ ಸುಪ್ತಾತ್ ೪೮

ಅಹಮೇವ ವಿಶ್ವರೂಪಃ
ಕರಚರಣಾದಿ ಸ್ವಭಾವ ಇವ ದೇಹಃ
ಸರ್ವಸ್ಮಿನ್ ಅಹಮೇವ
ಸ್ಫುರಾಮಿ ಭಾವೇಷು ಭಾಸ್ವರೂಪಮಿವ ೪೯

ದ್ರಷ್ಟಾ ಶ್ರೋತಾ ಘ್ರಾತಾ
ದೇಹೇಂದ್ರಿಯ ವರ್ಜಿತೋಽಪ್ಯಕರ್ತಾಪಿ
ಸಿದ್ಧಾಂತಾಗಮತರ್ಕಾನ್
ಚಿತ್ರಾನ್ ಅಹಮೇವ ರಚಯಾಮಿ" ೫೦

"ಹೀಗೆ ಶಕ್ತಿ ಚಕ್ರಯಂತ್ರವನ್ನು ವಿಹಾರದ ಉದ್ದೇಶದಿಂದ ನಡೆಸುವ ದೇವನು ನಾನು. ನಾನೇ ಶುದ್ಧ ರೂಪನಾಗಿ (ಈ) ಶಕ್ತಿ ಮಹಾ ಚಕ್ರದ ನಾಯಕ ಸ್ಥಾನದಲ್ಲಿದ್ದೇನೆ.

ನಿರ್ಮಲವಾದ ಕನ್ನಡಿಯಲ್ಲಿ ಘಟಾದಿ ವಸ್ತುಗಳು ಪ್ರತಿ ಬಿಂಬಿಸುವಂತೆ ವಿಶ್ವವು ನನ್ನಲ್ಲೇ ಭಾಸವಾಗುವುದು. ಮಲಗಿರುವ ವ್ಯಕ್ತಿಯತ್ತಲಿಂದ ವಿಚಿತ್ರವಾದ ಸ್ವಪ್ನಪ್ರಪಂಚವು ಹುಟ್ಟಿ ಹರಡುವಂತೆ ನನ್ನಿಂದ ಸರ್ವವೂ ಪ್ರಸಾರ ಹೊಂದುವುದು.

ವಿಶ್ವರೂಪನಾದ ನಾನೇ ಕೈ, ಕಾಲು ಮುಂತಾದುವುಗಳನ್ನುಳ್ಳ ದೇಹದಂತೆ ಕಾಣುವೆನು. ಸರ್ವ ವಸ್ತುಗಳಲ್ಲೂ ನಾನೇ ಪ್ರಕಾಶ ಸ್ವರೂಪನಾಗಿ ತೋರುವೆನು.

ದೇಹ ಇಂದ್ರಿಯ ಇವುಗಳಿಂದ ಬಿಡಲ್ಪಟ್ಟಿದ್ದರೂ ನೋಡುವವನು ಕೇಳುವವನು ಆಘ್ರಾಣಿಸುವವನು ನಾನೇ. ಕರ್ತನಲ್ಲದಿದ್ದರೂ ಚಿತ್ರ ವಿಚಿತ್ರವಾದ ಸಿದ್ಧಾಂತ ಆಗಮ ತರ್ಕಗಳನ್ನು ನಾನೇ ರಚಿಸುತ್ತೇನೆ.

ಇತ್ಥಂ ದ್ವೈತವಿಕಲ್ಪೇ
ಗಲಿತೇ ಪ್ರವಿಲಂಘ್ಯ ಮೋಹಿನೀಂ ಮಾಯಾಂ
ಸಲಿಲೇ ಸಲಿಲಂ ಕ್ಷೀರೇ
ಕ್ಷೀರಮಿವ ಬ್ರಹ್ಮಣಿ ಲಯೀಸ್ಯಾತ್ ೫೧

ಈ ರೀತಿಯಾದ ಭಾವನೆಯಿಂದ ದ್ವೈತ ವಿಕಲ್ಪವು (ನಾನಾತ್ವ ಭ್ರಾಂತಿಯು) ಜಾರಲಾಗಿ ಮೋಹಗೊಳಿಸುವ ಮಾಯೆಯನ್ನು ಲಂಘಿಸಿ ನೀರು ನೀರಿನಲ್ಲಿ, ಹಾಲು ಹಾಲಿನಲ್ಲಿ ಬೆರೆತು ಒಂದಾಗಿ ಹೋಗುವಂತೆ ಬ್ರಹ್ಮನಲ್ಲಿ ಲೀನನಾಗಬೇಕು.

ಇತ್ಥಂ ತತ್ತ್ವ ಸಮೂಹೇ
ಭಾವನಯಾ ಶಿವಮಯತ್ವಮಭಿಯಾತೇ
ಕಃ ಶೋಕಃ ಕೋ ಮೋಹಃ
ಸರ್ವಂ ಬ್ರಹ್ಮಾವಲೋಕಯತಃ ೫೨

ಸಮಸ್ತ ತತ್ತ್ವಗಳು (ಸಮ್ಯಕ್) ಭಾವನೆಯ ದೆಸೆಯಿಂದ ಹೀಗೆ ಶಿವಮಯತ್ವವನ್ನು ಪಡೆದ ಮೇಲೆ ಸರ್ವವನ್ನೂ ಬ್ರಹ್ಮವನ್ನಾಗಿ ಕಾಣುವ ಜ್ಞಾನಿಗೆ ಯಾವ ಶೋಕ ? ಯಾವ ಮೋಹ ?

ಕರ್ಮ ಫಲಂ ಶುಭಮಶುಭಂ
ಮಿಥ್ಯಾಜ್ಞಾನೇನ ಸಂಗಮಾದೇವ
ವಿಷಮೋ ಹಿ ಸಂಗದೋಷಃ
ತಸ್ಕರಯೋಗೋಽಪ್ಯತಸ್ಕರಸ್ಯೇವ ೫೩

ಒಳ್ಳೆಯದು ಕೆಟ್ಟದ್ದು ಎಂಬ ಕರ್ಮಫಲ ಮಿಥ್ಯಾಜ್ಞಾನದ ತೊಡಕಿನಿಂದಲೇ. ಸಹವಾಸ ದೋಷ ವಿಷಮವಷ್ಟೆ ! ಕಳ್ಳನಲ್ಲದವನಿಗೆ ಕಳ್ಳನೊಡನೆ ಒಡನಾಟ ಒದಗಿದರೆ ಹೇಗೋ ಹಾಗೆ !

ಲೋಕವ್ಯವಹಾರ ಕೃತಾಂ
ಯ ಇಹಾವಿದ್ಯಾಮುಪಾಸತೇ ಮೂಢಾಃ
ತೇ ಯಾಂತಿ ಜನ್ಮಮೃತ್ಯೋ
ರ್ಧರ್ಮಾಧರ್ಮಾರ್ಗಲಾಬದ್ಧಾಃ ೫೪

ಲೋಕ ವ್ಯವಹಾರ ಜನ್ಯವಾದ *ಅವಿದ್ಯೆಯನ್ನು ಉಪಾಸಿಸುವಂಥವರು ತಾವಾಗಿ ಹುಟ್ಟುಸಾವಿನ ಆವರಣದೊಳಕ್ಕೆ ನುಗ್ಗಿ (ಪರಮಾನಂದದ ವೈಶಾಲ್ಯಕ್ಕೆ ಹೋಗಲಾಗದಂತೆ) ಧರ್ಮ, ಅಧರ್ಮ ಎಂಬ (ಬಲವಾದ ಎರಡು) ಅಗುಳಿಗಳನ್ನು ಹಾಕಿ (ಬಾಗಿಲನ್ನು) ಭದ್ರಪಡಿಸಿಕೊಳ್ಳುವಂಥ ಮೂಢರು.

ಮೋಕ್ಷಕ್ಕೆ ಸಾಧನವಾದುದು ನಿಜವಾದ ವಿದ್ಯೆ. ಪುಣ್ಯಾಪುಣ್ಯಮಯವಾಗಿ ಸ್ವರ್ಗನರಕಾದಿಗಳಿಗೆ ಕಾರಣವಾಗುವ ಬೇರೆಲ್ಲವೂ ಅವಿದ್ಯೆ. ಪುಣ್ಯಕರ್ಮವೆಂಬುದು ಒಮ್ಮೆ ಸ್ವರ್ಗಾದಿ ಉತ್ತಮ ಫಲವನ್ನು ಒದಗಿಸುವಂತೆ ಆಸೆ ತೋರಿ ಬೇರೊಮ್ಮೆ ಸಮತೆ ಹೋಗುವುದಕ್ಕೆ ಪೀಠಿಕೆಯಾಗಿ ಮನಸ್ಸಿನಲ್ಲಿ ಸಂಕಲ್ಪ ವಿಕಲ್ಪಗಳಿಗೆ ಕಾರಣವಾಗುತ್ತದೆ. ಹಾಗೂ ಲೋಭದೋಷಾದಿಗಳನ್ನು ಬೆಳಸಿ, ಅಧರ್ಮವನ್ನು ತರುವುದು. ಜನನ ಮರಣ ಪರಂಪರೆಗೆ ತಾನೇ ಮೂಲವಾಗುವುದು. ಸಾಧಾರಣವಾದ ಸಣ್ಣ ಆಸೆ ನೆರವೇರಿದಂತೆ ತೋರಿದಾಗ ಬೇರೊಂದು ಆಸೆಗೆ ಮೂಲವಾಗಿ ಮತ್ತೆ ಇಚ್ಛಾರೂಪವಾದ ವಾಸನೆಯನ್ನು ಬಲಗೊಳಿಸಿ ಅದಕ್ಕಿಂತ ಹಿರಿದೆನಿಸಿದ ಫಲಕ್ಕಾಗಿ ಪ್ರೇರಿಸುವುದು. ಫಲಕ್ಕೆ ಅಡ್ಡಿ ತೋರಿದಾಗ ಕ್ರೋಧ ದ್ವೇಷಾದಿಗಳಿಗೆ ಅವಕಾಶ. ಅಂತು ಮೋಕ್ಷದ ಕಡೆಯ ಬಾಗಿಲಿಗೆ ಅಗುಳಿ ಹಾಕಿದಂತೆಯೇ ಇದರ ಫಲಿತಾಂಶ. ಪುಣ್ಯಕ್ಕೆ ಕಾರಣ ಆಸೆ. ಆಸೆಗಿಂತ ಹಿರಿಯ ಶತ್ರುವನ್ನು ಎಲ್ಲಿ ಕಾಣಬಹುದು ? "ಕಾಮಏಷ ಕ್ರೋಧಏಷ ರಜೋಗುಣ ಸಮುದ್ಭವಃ ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಂ"—ಎಂದನು ಗೀತಾಚಾರ್ಯ.

ಅಜ್ಞಾನಕಾಲ ನಿಚಿತಂ
ಧರ್ಮಾಧರ್ಮಾತ್ಮಕಂ ತು ಕರ್ಮಾಪಿ
ಚಿರಸಂಚಿತಮಿವ ತೂಲಂ
ನಶ್ಯತಿ ವಿಜ್ಞಾನ ದೀಪ್ತಿವಶಾತ್ ೫೫

[1]ಅಜ್ಞಾನದ ಕಾಲದಲ್ಲಿ ಕೂಡಿಕೊಂಡ ಪುಣ್ಯ ಪಾಪರೂಪವಾದ ಕರ್ಮವಾದರೋ ಬಹಳಕಾಲ ಕೂಡಿಡಲ್ಪಟ್ಟ ಹತ್ತಿಯು ಅಗ್ನಿಸಂಪರ್ಕದಿಂದ ಭಸ್ಮವಾಗುವಂತೆ ವಿಜ್ಞಾನದ ತೇಜಸ್ಸಿನಲ್ಲಿ ದಗ್ಧವಾಗಿ ಹೋಗುವುದು.

1. ಈಗ ವಿವೇಕ ಬಂದುಬಿಟ್ಟರೆ ಹಿಂದೆ ಮಾಡಿದ ಕರ್ಮರಾಶಿಗೇನು ಮಾಡುವುದು? ಅದರಿಂದ ಬಿಡುಗಡೆ ಹೇಗೆ ಶಕ್ಯ?—ಎಂಬ ಪ್ರಶ್ನೆಗೆ ಉತ್ತರ ಹೇಳುತ್ತಿರುವರು.

ಜ್ಞಾನ ಪ್ರಾಪ್ತೌ ಕೃತಮಪಿ
ನ ಫಲಾಯ ತತೋಽಸ್ಯ ಜನ್ಮ ಕಥಂ
ಗತಜನ್ಮಬಂಧಯೋಗೋ
ಭಾತಿ ಶಿವಾರ್ಕಃ ಸ್ವದೀಧಿತಿಭಿಃ ೫೬

ಜ್ಞಾನ ಪ್ರಾಪ್ತಿಯಾದ ಮೇಲೆ ಕರ್ತೃತ್ವವೇ ಮೊದಲಾದ ಅಭಿಮಾನದ ಗಂಧವೇ ಇಲ್ಲದುದರಿಂದ ಕರ್ಮವು ಆಚರಿಸಲ್ಪಟ್ಟರೂ ಫಲಕ್ಕೆ ಕಾರಣವಾಗುವುದಿಲ್ಲ. ಆದರಿಂದ ಮತ್ತೆ ಜನ್ಮ ಹೇಗೆ ಉಂಟಾದೀತು ? ಹೀಗೆ ಜನ್ಮದ ತೊಡಕಿನ ಸಂಬಂಧವು ಕಳೆದ *ಶಿವಾರ್ಕನು (ಶಿವಯೋಗಿಯು) ಸ್ವಪ್ರಕಾಶದಿಂದ ಬೆಳಗುವನು.

*ಮೋಡಗಳ ಮುಸುಕು ಜಾರಿದ ಸೂರ್ಯನು ಹೇಗೋ ಹಾಗೆ.

ತುಷ ಕಂಬುಕ ಕಿಂಶಾರುಕ
ಮುಕ್ತಂ ಬೀಜಂ ಯಥಾಂಕುರಂ ಕುರುತೇ
ನೈವ ತಥಾಣವ ಮಾಯಾ
ಕರ್ಮವಿಮುಕ್ತೋ ಭವಾಂಕುರಂ ಹ್ಯಾತ್ಮಾ ೫೭

ಹೊಟ್ಟು, ತವುಡು, ಸಣ್ಣ ತವುಡು ಇವುಗಳ ಮುಸುಕು ಹೋದ ಮೇಲೆ ಬೀಜವು ಹೇಗೆ ಮೊಳಕೆ ಇಡಲಾರದೋ ಹಾಗೆಯೇ ಆಣವ, ಮಾಯಾ, ಕರ್ಮದ ಕವಚವು ಕಳಚಿಹೋದ ಆತ್ಮನು ಸಂಸಾರದ ಮೊಳಕೆಯನ್ನು ಹೊಂದಲಾರನು.

ಆತ್ಮಜ್ಞೋ ನ ಕುತಶ್ಚನ
ಬಿಭೇತಿ ಸರ್ವಂ ಹಿ ತಸ್ಯ ನಿಜರೂಪಂ
ನೈವ ಚ ಶೋಚತಿ ಯಸ್ಮಾತ್
ಪರಮಾರ್ಥೇ ನಾಶಿತಾ ನಾಸ್ತಿ ೫೮

ಆತ್ಮವನ್ನು ಅರಿತವನು *ಏತರಿಂದಲೂ ಭಯಪಡುವುದಿಲ್ಲ. ಅವನಿಗೆ ಸರ್ವವೂ ನಿಜರೂಪವೇ ತಾನೆ! ದಿಟವರಿತು ನೋಡಿದರೆ ನಾಶವಾಡತಕ್ಕ ವಸ್ತುವೇ ಇಲ್ಲ. (ಹೀಗಿರುವಾಗ ಯಾತಕ್ಕಾಗಿ ಶೋಕಿಸುತ್ತಾನೆ?) ಶೋಕಿಸುವುದೂ ಇಲ್ಲ.

* ಲೋಕದಲ್ಲಿ ಭಯ ಯಾವಾಗಲೂ ಹೆರವರಿಂದ ಹುಟ್ಟುತ್ತದೆ. ಶೋಕಕ್ಕೂ ಕಾರಣವು ಹೊರಗಿನದು. ತನ್ನಿಂದ ಬೇರೆ ವಸ್ತುವೇ ಇಲ್ಲದಿರುವಾಗ ಭಯಕ್ಕಾಗಲೀ ಶೋಕಕ್ಕಾಗಲಿ ಅವಕಾಶವೆಲ್ಲಿದೆ?

ಅತಿಗೂಢ ಹೃದಯಗಂಜ
ಪ್ರರೂಢ ಪರಮಾರ್ಥ ರತ್ನಸಂಚಯತಃ

ಅಹಮೇವೇತಿ ಮಹೇಶ್ವರ
ಭಾವೇ ಕಾ ದುರ್ಗತಿಃ ಕಸ್ಯ ೫೯

*ಅತಿಗೂಢವಾದ ಹೃದಯ ಭಂಡಾರದಲ್ಲಿ ಪರಮಾರ್ಥವೆಂಬ ರತ್ನವನ್ನು ಶೇಖರಿಸಿ 'ನಾನೇ ಸರ್ವವೂ' ಎಂದು ಮಹೇಶ್ವರ ಭಾವದಲ್ಲಿ (ನೆಲಸಿರುವಲ್ಲಿ) ಯಾವನಿಗೆ ಯಾವ ದುರ್ಗತಿ ಸಂಭವಿಸಬಲ್ಲುದು ?

* ಲೋಕದಲ್ಲಿ ರತ್ನಾದಿಗಳು ಹೊರಗಿನಿಂದ ಸಂಪಾದಿಸಿದುವಾದರೆ-ಹೊರಗಡೆ ಇರುವುದಾದರೆ ತೊಡಕಿಗೆ ಗುರಿಯಾಗುವ ಅಥವಾ ಕಳೆದು ಹೋದೀತೆಂಬ ಭಯ. ಸ್ವಂತ ಹೃದಯಾಂತರಾಳದಲ್ಲಿ ಹುಟ್ಟಿ ಬಂದು ಹುದುಗಿರುವ (ಪರಮಾರ್ಥ) ರತ್ನವು ತೊಡಕನ್ನುಂಟುಮಾಡುವ ಅಥವಾ ಕಳೆದು ಹೋಗುವ ಭಯವೇ ಇಲ್ಲ. ಮಹೇಶ್ವರ ಭಾವ ಒಳಗಿನದು ಬಳಿ ಕಾವ ಭಯ ?

ಮೋಕ್ಷಸ್ಯ ನೈವ ಕಿಂಚಿತ್
ಧಾಮಾಸ್ತಿ ನ ಚಾಪಿ ಗಮನಮನ್ಯತ್ರ
ಅಜ್ಞಾನಗ್ರಂಥಿಭಿದಾ
ಸ್ವಶಕ್ತ್ಯಭಿವ್ಯಕ್ತತಾ ಮೋಕ್ಷಃ ೬೦

ಮೋಕ್ಷವು ಒಂದು ಸ್ಥಾನವಿಶೇಷದ ಸಿದ್ಧಿಯಲ್ಲ. ಅದನ್ನು ಹೊಂದಲು ಬೇರೆಲ್ಲಿಗೂ ಹೋಗಬೇಕಾದುದೂ ಇಲ್ಲ. ಅಜ್ಞಾನದ ಗಂಟನ್ನು ಭೇದಿಸುವುದು ಆತ್ಮನ ಸಹಜವಾದ ಶಕ್ತಿಯ ಆವಿಷ್ಕಾರ-ಇವೇ ಮೋಕ್ಷ.

ಭಿನ್ನಾಜ್ಞಾನ ಗ್ರಂಥಿಃ
ಗತಸಂದೇಹಃ ಪರಾಕೃತಭ್ರಾಂತಿಃ
ಪ್ರಕ್ಷೀಣಪುಣ್ಯಪಾಪಃ
ವಿಗ್ರಹಯೋಗೇಽಪ್ಯಸೌ ಮುಕ್ತಃ ೬೧

ಅಜ್ಞಾನದ ಗಂಟು ಒಡೆದು, ಸಂಶಯಗಳು ಧ್ವಂಸವಾಗಿ, ಭ್ರಾಂತಿ ಸೀಗಿ ಹೋಗಿ ಪುಣ್ಯ ಪಾಪಗಳ ಲೇಪವು ತೊಡೆದುಹೋದಂತಹ ವ್ಯಕ್ತಿ ದೇಹದೊಡ ಗೂಡಿದ್ದರೂ ಮುಕ್ತನೇ.

ಅಗ್ನ್ಯಭಿದಗ್ಧಂ ಬೀಜಂ
ಯಥಾ ಪ್ರರೋಹಾಸಮರ್ಥತಾಮೇತಿ
ಜ್ಞಾನಾಗ್ನಿದಗ್ಧಮೇವಂ
ಕರ್ಮ ನ ಜನ್ಮಪ್ರದಂ ಭವತಿ ೬೨

ಬೆಂಕಿಯ ಸೆಕೆಗೆ ಗುರಿಯಾದ (ಹುರಿದ) ಬೀಜವು ಹೇಗೆ ಮೊಳಕೆ ಯಿಡಲು ಅಸಮರ್ಥವಾಗುವುದೋ ಹಾಗೆ ಜ್ಞಾನಾಗ್ನಿಯಿಂದ ಸುಟ್ಟುಹೋದ ಕರ್ಮವು ಮರುಹುಟ್ಟನ್ನು ಒದಗಿಸಲಾರದು.

ಪರಿಮಿತ ಬುದ್ಧಿತ್ವೇನ ಹಿ
ಕರ್ಮೋಚಿತ ಭಾವಿದೇಹ ಭಾವನಯಾ
ಸಂಕುಚಿತಾ ಚಿತಿರೇತತ್
ದೇಹಧ್ವಂಸೇ ತಥಾ ಭವತಿ ೬೩

ಬುದ್ಧಿ ಪರಿಮಿತವಾಗಿರುವುದರಿಂದ ಮುಂದೆ ಕರ್ಮೋಚಿತವಾಗಿ ಪ್ರಾಪ್ತ ವಾಗಬಹುದಾದ *ದೇಹ ಭಾವನೆಯಿಂದ ಜ್ಞಾನವು ಸಂಕುಚಿತವಾಗಿರುವಾಗ ದೇಹ ಧ್ವಂಸವಾದರೂ ಅದೇ ಜ್ಞಾನಸಂಕೋಚ ಉಳಿಯುವುದು (ದೇಹ ಪತನದಿಂದ ಮುಕ್ತಿ ಬರುವುದಿಲ್ಲ.)

* ಜನ್ಮಾಂತರಕ್ಕೆ ಕಾರಣ ವಾಸನೆ. (ಶ್ಲೋಕ 89-92 ನೋಡಿ) ಸುಖದ ಹಂಬಲ, ಅದನ್ನು ನೆರವೇರಿಸಿಕೊಳ್ಳುವುದಕ್ಕಾಗಿ ಅಶ್ವಮೇಧ, ಜ್ಯೋತಿಷ್ಟೋಮ, ಮುಂತಾದ ಹಲವು ಕರ್ಮಗಳನ್ನು ಆಚರಿಸಲು ತೊಡಗುವುದು, ಯಾವಾಗಲೂ ಫಲದ ಚಿಂತನೆ—ಇವುಗಳಿಂದ ಕೂಡಿರುವವನಿಗೆ ಶರೀರ ಹೋದರೆ ಆ ವಾಸನೆಗನುಗುಣ

ವಾಗಿ ಬಯಸಿದ ಸ್ಥಳದಲ್ಲಿಯೋ ಬೇರೆಲ್ಲಿಯೋ ಬಯಸಿದ್ದನ್ನು ಅನುಭವಿಸಲಿಕ್ಕಾಗಿ. ಬೇರೊಂದು ದೇಹ ಹುಟ್ಟಲೇಬೇಕು. ಸ್ವರ್ಗಾದಿ ಸುಖವನ್ನು ಅಪೇಕ್ಷಿಸುವವನು ಅಲ್ಲಿ ಹುಟ್ಟಬೇಕೆಂದು ತಾನೆ ಆಸೆ ಪಡುವನು? ಆತನು ಬಯಸುವುದೇ ಶರೀರವನ್ನು! ಪಡೆಯದಿರುವುದು ಹೇಗೆ? ನಿಃಸ್ಪೃಹನಾದ ಮೋಕ್ಷಾಪೇಕ್ಷಿಗೆ ಈ ತೊಡಕಿಲ್ಲ.

ಯದಿ ಪುನರಮಲಂ ಬೋಧಂ
ಸರ್ವಸಮುತ್ತೀರ್ಣ ಬೋಧ್ಯ ಕರ್ತೃಮಯಂ
ವಿತತಂ ಅನಸ್ತಮಿತೋದಿತ
ಭಾರೂಪಂ ಸತ್ಯಸಂಕಲ್ಪಂ ೬೪

ದಿಕ್ಕಾಲಕಲನವಿಕಲಂ
ಧ್ರುವಂ ಅವ್ಯಯಂ ಈಶ್ವರಂ ಸುಪರಿಪೂರ್ಣಂ
ಬಹುತರ ಶಕ್ತಿವ್ರಾತ
ಪ್ರಲಯೋದಯ ವಿರಚನೈಕ ಕರ್ತಾರಂ ೬೦

ಸೃಷ್ಟ್ಯಾದಿ ವಿಧಿ ಸುವೇಧಸಂ
ಆತ್ಮಾನಂ ಶಿವಮಯಂ ವಿಬುಧ್ಯೇತ
ಕಥಮಿವ ಸಂಸಾರೀ ಸ್ಯಾತ್
ವಿತತಸ್ಯ ಕುತಃ ಕ್ವ ವಾ ಸರಣಂ ೬೬

ಆತ್ಮವನ್ನು "ಅಮಲನು ಜ್ಞಾನಸ್ವರೂಪನು ಸರ್ವಾತೀತವಾದ ಜ್ಞಾನ ಕ್ರಿಯಾಮಯನು, ವ್ಯಾಪಿಯೂ ಕೊನೆ ಮೊದಲಿಲ್ಲದುದೂ ಆದ ಪ್ರಕಾಶ ರೂಪನು, ಸತ್ಯಸಂಕಲ್ಪನು, ದೇಶಕಾಲಮಿತಿ ಇಲ್ಲದವನು, ಶಾಶ್ವತನು, ನಿರ್ವಿಕಾರನು, ಈಶ್ವರನು, (ಯಾವ ಅರಕೆಯೂ ಇಲ್ಲದಿರುವುದರಿಂದ) ಸುಪರಿ

ಪ್ರೇರ್ಣನು, ಹಲವು ಬಗೆಯಾದ ಶಕ್ತಿಸಂತತಿಯು ಅಳಿವುಹುಟ್ಟುಗಳಿಗೆ ಏಕಮಾತ್ರ ಕರ್ತೃವು, ಸೃಷ್ಟ್ಯಾದಿಗಳ ನಿಯಂತೃವು, ಶಿವನುಯನು ಎಂದು ತಿಳಿದರೆ ಹೇಗೆ ತಾನೆ ಸಂಸಾರಿಯಾದಾನು ? ಎಲ್ಲೆಡೆಯೂ ಹರಡಿಪವನು ಹೋಗುವುದೆಲ್ಲಿಗೆ ? ಹೇಗೆ ?

ಸಂಸಾರವೆಂದರೆ ಸಮ್ಯಕ್-ಸರಣ. ಸರಣ ಶಬ್ದಕ್ಕೆ 'ಹೋಗುವುದು' 'ಚಲಿಸುವುದು' ಎಂದು ಅರ್ಥ. ದೇಹದಿಂದ ದೇಹಕ್ಕೆ ಕರ್ಮಚಕ್ರವಶದಿಂದ ಹೋಗುವುದು ಸಂಸಾರ. ವ್ಯಾಪಿಯಾದ ಆತ್ಮನಿಗೆ ಅವನಿಲ್ಲದ ಪ್ರದೇಶವೇ ಇಲ್ಲದಿರುವಾಗ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗುವುದು ಹೇಗೆ ಸಾಧ್ಯ ?

ಇತಿ ಯುಕ್ತಿಭಿರಪಿ ಸಿದ್ಧಂ
ಯತ್ಕರ್ಮ ಜ್ಞಾನಿನೋ ನ ಸಫಲಂ ತತ್
ನ ಮಮೇದಂ ಅಪಿ ತು ತಸ್ಯ
ಇತಿ ದಾರ್ಢ್ಯತೋ ನ ಹಿ ಫಲಂ ಲೋಕೇ ೬೨

ಲೋಕದಲ್ಲಿ 'ಇದು ನನ್ನದಲ್ಲ, ಅವನದು'-ಎಂಬ ದೃಢ ನಿಶ್ಚಯದಿಂದ ಕೂಡಿದವನಿಗೆ ಯಾವ ಕರ್ಮವೂ ಫಲ ಕೊಡುವುದಿಲ್ಲ. ಈ ಯುಕ್ತಿಗಳಿಂದ ಕೂಡ ಜ್ಞಾನಿಗೆ ಕರ್ಮಾಚರಣೆ ಫಲವನ್ನು ಕೊಡುವುದಿಲ್ಲವೆಂಬುದು ಸಿದ್ಧವಾಗುವುದು.

ಲೋಕದಲ್ಲಿ ರಾಜನೋ ಬೇರಾವ ಶ್ರೀಮಂತನೋ ಸ್ವರ್ಗಾದಿಯಾದ ಫಲವನ್ನು ಬಯಸಿ ಯಜ್ಞಾದಿ ಕರ್ಮವನ್ನು ಮಾಡಲು ಯತ್ನಿಸಿದಾಗ ಋತ್ವಿಕ್ಕುಗಳು ಪುರೋಹಿತರು ಮುಂತಾದವರಿಂದ ಆ ಕರ್ಮವನ್ನು ಮಾಡಿಸುವನು. ಅವರು ಆ ಕರ್ಮವನ್ನು ಸಾಂಗವಾಗಿ ನೆರವೇರಿಸಿದರೂ ಯಜಮಾನನಿಗಾಗಿ ಅದನ್ನು ನಡೆಯಿಸುವುದರಿಂದ ಅದರ ಫಲವಾದ ಸ್ವರ್ಗಾದಿಯನ್ನು ತಮಗಾಗಿ ಬಯಸುವುದಿಲ್ಲ. ಇದರಿಂದ ಅವರಿಗೆ ಆ ಫಲಗಳೂ ದೊರೆಯುವುದಿಲ್ಲ. ಇದು ನಮಗಾಗಿ ಅಲ್ಲ-ನಮಗಾಗಿ ಅಲ್ಲ-ಎಂಬುದೇ ಅವರ ನಿತ್ಯದ ಭಾವನೆ, ಅದರಿಂದಲೇ ಆ ಹೋಮಹವನದ ಫಲ ಯಜಮಾನನಿಗೆ ಮಾತ್ರ ದೊರಕುತ್ತದೆ. ಪುರೋಹಿತನು ಮಂತ್ರ ಹೇಳುತ್ತಾ ಹೋದರೆ ಪಾಣಿಗ್ರಹಣವಾಗುವುದು

ಮದವಣಿಗನಿಗೆ. ವಸಿಷ್ಠರು ಪುತ್ರ ಕಾಮೇಷ್ಟಿ ಆಚರಿಸಿದರು, ದಶರಥನಿಗೆ ಸಂತಾನ ವಾಯಿತು. ಈ ವಿಧವಾದ ಯುಕ್ತಿಯಿಂದಲೂ ಜ್ಞಾನಿಯಾದವನು ತಾನು ಆಚರಿಸುವ ಕರ್ಮವೊಂದನ್ನೂ ತನಗಾಗಿ ನಡೆಯಿಸುವುದಿಲ್ಲವಾಗಿ ಇದು ನನಗಾಗಿ ಅಲ್ಲ—ಎಂಬ ದೃಢವಾದ ಭಾವನೆ ನಿರಂತರವಾಗಿರುವ ಕಾರಣ ಆತನು ಕರ್ಮದ ಫಲಕ್ಕೆ ಭಾಗಿಯಾಗುವುದಿಲ್ಲ.

ಇತ್ಥಂ ಸಕಲ ವಿಕಲ್ಪಾನ್
ಪ್ರತಿಬುದ್ಧೋ ಭಾವನಾಸಮೀರಣತಃ
ಆತ್ಮ ಜ್ಯೋತಿಷಿ ದೀಪ್ತೇ
ಜುಹ್ವಜ್ಜ್ಯೋತಿರ್ಮಯೋ ಭವತಿ ೬೮

(ಜ್ಞಾನ ವೈಭವದಿಂದ) ಎಚ್ಚರಗೊಂಡಾತನು ಈ ಬಗೆಯ ಚಿಂತನೆಯ ಬೀಸುಗಾಳಿಯಿಂದ ಉಜ್ಜ್ವಲಿಸಿ ಪ್ರಜ್ವಲವಾದ ಆತ್ಮ ಜ್ಯೋತಿಯಲಿ ಸಕಲ (ಭೇದ ಭಾವನೆಯ) ವಿಕಲ್ಪಗಳನ್ನೂ ಹೋಮ ಮಾಡಿದವನಾಗಿ ಜ್ಯೋತಿರ್ಮಯನಾಗುವನು.

ಅಶ್ನನ್ ಯದ್ವಾ ತದ್ವಾ
ಸಂವೀತೋ ಯೇನ ಕೇನಚಿತ್ ಶಾಂತಃ
ಯತ್ರ ಕ್ವಚನ ನಿವಾಸೀ
ವಿಮುಚ್ಯತೇ ಸರ್ವಭೂತಾತ್ಮಾ ೬೯

ಆತನು (ಸಿಕ್ಕಿದುದು) ಏನನ್ನಾದರೂ ತಿಂದುಕೊಂಡು (ದೊರೆತ) ಯಾವುದನ್ನಾದರೂ ಸುತ್ತಿಕೊಂಡು ಎಲ್ಲಾದರಲ್ಲಿ ವಾಸಮಾಡುತ್ತ, (ತನ್ನ ಆತ್ಮವನ್ನು ಸರ್ವ ಭೂತಗಳಲ್ಲಿಯೂ, ಸರ್ವ ಭೂತಗಳನ್ನು ತನ್ನ ಆತ್ಮದಲ್ಲಿಯೂ ಕಾಣುವವನಾಗಿ) ಸರ್ವಭೂತಾತ್ಮನೆನಿಸಿ ವಿಮುಕ್ತನಾಗುವನು

ಹಯಮೇಧ ಶತ ಸಹಸ್ರಾ
ಣ್ಯಪಿ ಕುರುತೇ ಬ್ರಹ್ಮಘಾತ ಲಕ್ಷಾಣಿ
ಪರಮಾರ್ಥವಿತ್ ಸ ಪುಣ್ಯೈಃ
ನ ಚ ಪಾಪೈಃ ಸ್ಪೃಶ್ಯತೇ ವಿಮಲಃ ೭೦

ನಿರ್ಮಲನಾದ ಪರಮಾರ್ಥ ಜ್ಞಾನಿಯು ಶತಸಹಸ್ರ ಅಶ್ವಮೇಧಯಾಗವನ್ನು ಮಾಡಿದರೂ ಲಕ್ಷ ಬ್ರಹ್ಮಹತ್ಯೆಯನ್ನು ನಡೆಸಿದರೂ ಪುಣ್ಯಗಳೂ ಪಾಪಗಳೂ ಅವನನ್ನು ಸೋಕುವುದಿಲ್ಲ.

ಮದ ಹರ್ಷ ಕೋಪ ಮನ್ಮಥ
ವಿಷಾದ ಭಯ ಲೋಭ ಮೋಹ ಪರಿವರ್ಜೀ
ನಿಃಸ್ತೋತ್ರ ವಷಟ್ಕಾರೋ
ಜಡ ಇವ ವಿಚರೇದವಾದ ಮತಿಃ ೭೧

ಅವನು ಮದ-ಹರ್ಷ-ಕೋಪ-ಕಾಮ-ವಿಷಾದ-ಭಯ-ಲೋಭ ಮೋಹಗಳನ್ನು ಬಿಟ್ಟು, ಯಾವ ಬಗೆಯ ಸ್ತೋತ್ರದ ಹವ್ಯಾಸವಿಲ್ಲದೆ, ವಷಟ್ಕಾರವೇ ಮುಂತಾದ ಮಂತ್ರ ಪುರಶ್ಚರಣೆಯೊಡನೆ ಕೂಡಿದ ಹೋಮ ಹವನಗಳ ಗೋಜಿಗೆ ಹೋಗದೆ ವಾದದ ಗೊಡವೆಗೆ ದೂರವಾಗಿ ಜಡನಂತೆ ನಡೆಯುತ್ತಾನೆ.

ಮದ ಹರ್ಷ ಪ್ರಭೃತಿರಯಂ
ವರ್ಗಃ ಪ್ರಭವತಿ ವಿಭೇದ ಸಂಮೋಹಾತ್
ಅದ್ವೈತಾತ್ಮ ವಿಬೋಧಃ
ಕೇನ ಕಥಂ ಸ್ಪೃಶ್ಯತಾಂ ನಾಮ ೭೨

ಮದಹರ್ಷಾದಿಗಳು ' ಆತ್ಮ ವ್ಯತಿರಿಕ್ತವಾದ ನಾನಾವಸ್ತುಗಳು ಇವೆ '' ಎಂಬ ಅಜ್ಞಾನದಿಂದ ಉಂಟಾಗುವುವು. * ಎರಡಿಲ್ಲದ ಆತ್ಮಜ್ಞಾನಿಯನ್ನು ಅವು ಹೇಗೆ ತಾನೇ ಮುಟ್ಟಬಲ್ಲುವು ?

* ತಾನೇ ಎಲ್ಲವಾಗಿರುವಾಗ ಯಾರಿಗೆ ಸೊಕ್ಕನ್ನು ತೋರುವುದು ? ಯಾರಿಗೆ ಸಂತೋಷವನ್ನು ಪ್ರದರ್ಶಿಸುವುದು ? ಯಾರ ಮೇಲೆ ಕೋಪಿಸುವುದು ?

ಸ್ತುತ್ಯಂ ವಾ ಹೋತವ್ಯಂ
ನಾಸ್ತಿ ವ್ಯತಿರಿಕ್ತಮಸ್ಯ ಕಿಂಚನ ಚ
ಸ್ತೋತ್ರಾದಿನಾ ಸತುಷ್ಯೇತ್
ಮುಕ್ತ ಸ್ತನ್ನಿರ್ನಮಸ್ಕೃತಿವಷಟ್ಕಃ ೬೩

ತನ್ನಿಂದ ಭಿನ್ನವಾದ ಸ್ತೋತ್ರಾರ್ಹ ವ್ಯಕ್ತಿಯಾಗಲೀ ಹೋಮಹವನಗಳಿಂದ ತುಷ್ಟಿಪಡಿಸಬೇಕಾದ ದೇವತೆಯಾಗಲೀ ಅವನಿಗೆ ಯಾವುದೂ ಇಲ್ಲ. (ನಿತ್ಯಾನಂದನಾದ ಆತನು) ಸ್ತೋತ್ರಾದಿಗಳ ಮೂಲಕ ಹೊಂದಬೇಕಾದ ಯಾವ ಸಂತೋಷವೂ ಇಲ್ಲ. ಆದುದರಿಂದಲೇ ಆತನು ಮುಕ್ತ. ಆತನು ನಮಸ್ಕಾರ ವಷಟ್ಕಾರವರ್ಜಿ-ಎನಿಸುವನು.

ಷಟ್‌ತ್ರಿಂಶತ್ತತ್ವಭೃತಃ
ವಿಗ್ರಹ ರಚನಾ ಗವಾಕ್ಷ ಪರಿಪೂರ್ಣಂ
ನಿಜಮನ್ಯದಥ ಶರೀರಂ
ಘಟಾದಿ ವಾ ತಸ್ಯ ದೇವಗೃಹಂ ೬೪

ಮೂವತ್ತಾರು ತತ್ತ್ವಗಳೇ ಆಧಾರವಾಗಿ ಚಿತ್ರ ವಿಚಿತ್ರವಾದ ರಚನಾ ವಿಶೇಷಗಳಿಂದ ಕೂಡಿ ಇಂದ್ರಿಯ ರೂಪವಾದ ಗವಾಕ್ಷಗಳಿಂದ ಪರಿಪೂರ್ಣವೆನಿಸಿದ ತನ್ನ ಅಥವಾ ಬೇರೆ ಯಾವುದೇ ಆದ ಶರೀರವೂ, ಅಷ್ಟೇಕೆ ಗಡಿಗೆಯೇ ಮುಂತಾದ ಪಾತ್ರೆಗಳು ಕೂಡ ಆತನ ಭಾಗಕ್ಕೆ ದೇವಾಲಯ.

ತತ್ರ ಚ ಪರಮಾತ್ಮ ಮಹಾ
ಭೈರವ ಶಿವದೇವತಾಂ ಸ್ವಶಕ್ತಿಯುತಾಂ
ಆತ್ಮಾಮರ್ಶನ ವಿಮಲ
ದ್ರವ್ಯೈಃ ಪರಿಪೂಜಯನ್–ಆಸ್ತೇ ೨೪

ಅಲ್ಲಿ (ಶರೀರರೂಪವಾದ ಆ ದೇವಮಂದಿರದಲ್ಲಿ) ಆತ್ಮದೇವತೆಯಾದ *ಸ್ವಶಕ್ತಿಯುಕ್ತ ಭೈರವರೂಪಿ ಶಿವನನ್ನು ಆತ್ಮಾನುಸಂಧಾನದಿಂದ ಪವಿತ್ರವೆನಿಸಿದ ದ್ರವ್ಯಗಳಿಂದ ವಿಶಿಷ್ಟರೀತಿಯಲ್ಲಿ ಪೂಜಿಸುತ್ತಾ ಜ್ಞಾನಿಯಿರುವನು.

* ದೇಹ ದೇವಾಲಯದ (ಜಗತ್ತಿನ) 'ನಿರ್ವಾಣ' ಕಾರಣ ಶಿವನ ಪಂಚ ಶಕ್ತಿಗಳ ಸಹವಾಸ ಕೌತುಕ! ಭೈರವನೆಂದರೆ ಭರಣರಮಣವಮನ ಕರ್ತೃ. 'ಅರ್ಥಾತ್ ಸೃಷ್ಟಿ ಸ್ಥಿತಿಲಯ ವಿಹಾರಿ. ಶಕ್ತಿ ಪರಿವಾರಯುಕ್ತ ಶಿವನು ಮೂಲ ಮೂರ್ತಿಯಾದರೆ ಭೈರವನು ಅಲ್ಲಿನ ಉತ್ಸವಮೂರ್ತಿಯೆನಬಹುದು. ಸರ್ವದ್ರವ್ಯವೂ ಆತ್ಮಪ್ರಕಾಶ ರೂಪವೇ; ಆದುದರಿಂದ ಶಿವಮಯವೇ. ಇದರಿಂದ ಭವ್ಯಪವಿತ್ರತೆ. ಜ್ಞಾನಿಯ ನಯನದ ನೋಟ ಶಿವನ ನೋಟ, ಕಿವಿಯ ಕೇಳ್ಕೆ ಶಿವನ ಕೇಳ್ಕೆ, ಮೂಡುವ ಆಘ್ರಾಣ ಶಿವನ ವಾಸನೆಯ ಆಘ್ರಾಣ, ರಸನೆಯ ರಸಾಸ್ವಾದ ಶಿವನ ರಸಾಸ್ವಾದ, ತ್ವಕ್ಕಿನ ಸ್ಪರ್ಶ ಶಿವನ ಸಂಸ್ಪರ್ಶ. ಹೀಗೆ ಕರಣಗ್ರಾಮದಿಂದ ನಡೆವ ಎಲ್ಲ ಕೆಲಸವೂ ಶಿವನ ಪೂರ್ಣ ಪೂಜೆ. ಈ ರೀತಿಯಲ್ಲಿ ಜ್ಞಾನಿಯಿಂದ ದೇಹದೇವಾಲಯದಲ್ಲಿ ವಿಶಿಷ್ಟವಾದ ನಿತ್ಯ ಪೂಜೆ ನಡೆಯುತ್ತದೆ.

ಬಹಿರಂತರ ಪರಿಕಲ್ಪನೆ
ಭೇದ ಮಹಾ ಬೀಜ ನಿಚಯಮರ್ಪಯತಃ
ತಸ್ಯಾತಿ ದೀಪ್ತ ಸಂವಿ
ಜ್ಜ್ವಲನೇ ಯತ್ನಾದ್ವಿನಾ ಭವತಿ ಹೋಮಃ ೨೫

ಹೊರಗೊಳಗೆಂಬ ಕಲ್ಪನಾ ಭೇದಗಳ [1]ಮಹಾ ಬೀಜವರ್ಗವನ್ನು ಅತಿ ದೀಪ್ತವಾದ ಚೈತನ್ಯಾಗ್ನಿಯಲ್ಲಿ ಸಮರ್ಪಿಸುವ ಆತನಿಂದ ಪ್ರಯತ್ನವಿಲ್ಲದೆಯೇ ಹೋಮವು ಜರಗುವುದು.

1. ಕೆಲವು ಬೀಜಗಳು ಬೇಯಿಸಿದರೂ ಮತ್ತೆ ಮೊಳೆಯುವ ಶಕ್ತಿಯನ್ನು ಹೊಂದಿರುತ್ತವೆ. ಹೀಗೆಯ ಕಾಯನ್ನು ಬೇಯಿಸಿದ ತರುವಾಯ ಬೀಜವನ್ನು ತೆಗೆದು ನೆಟ್ಟರೂ ಹಲವು ವೇಳೆ ಸಸಿ ಮೊಳೆಯುತ್ತದೆ. ಜಾಲಿ (ಗೊಬ್ಬಳಿ) ಬೀಜ ಆಡಿನ ಜಠರಾಗ್ನಿಯಲ್ಲಿ ಬೇಯದೆ ನೆಲದಲ್ಲಿ ಬಿದ್ದೊಡನೆ ಹುಟ್ಟುವುದು. ಇಂಥವು ಮಹಾಬೀಜಗಳು. ಇಂಥವನ್ನು ಸಾಧಾರಣವಾಗಿ ಸುಟ್ಟರೆ ಸಾಲದು. ಉಜ್ಜ್ವಲವಾದ ಬೆಂಕಿಯಲ್ಲಿ ಚೆನ್ನಾಗಿಯೇ ಸುಡಬೇಕು. ಜ್ಞಾನಾಗ್ನಿ ಹಾಗೆ ದೀಪ್ತವಾಗಬೇಕು!

ಧ್ಯಾನಮನಸ್ತಮಿತಂ ಪುನಃ
ಏಷ ಹಿ ಭಗವಾನ್ ವಿಚಿತ್ರರೂಪಾಣಿ
ಸೃಜತಿ ತದೇವ ಧ್ಯಾನಂ
ಸಂಕಲ್ಪಲಿಖಿತ ಸತ್ಯರೂಪತ್ವಂ ೭೭

ಆತನ ಧ್ಯಾನವು ಅನಂತವಾಗಿರುವುದು. ಭಗವಂತನು (ಭಿನ್ನ ಭಿನ್ನ ವಸ್ತುಗಳನ್ನು ಸೃಷ್ಟಿಸುವ ಕ್ರಿಯಾಶಕ್ತಿಯ ವಿಕಲ್ಪ ರಚನಾ ಸ್ವಾತಂತ್ರ್ಯದಿಂದ ವಿಚಿತ್ರ ರೂಪಗಳನ್ನು ಸೃಷ್ಟಿಸುವನಷ್ಟೆ. *ಅವುಗಳ ವಿಷಯೀಕರಣವೇ ಅವನ ಧ್ಯಾನ. ಅವನಿಗೆ ತೋರಿಬಂದುದೆಲ್ಲ ತನ್ನ ಮನಸ್ಸಿನ ಗೋಡೆಯ ಮೇಲೆ ಈಶ್ವರನು ಚಿತ್ರಿಸಿದ ಸತ್ಯದ ರೇಖೆಗಳು.

* ತನ್ನ ಮನೋವ್ಯಾಪಾರವೆಲ್ಲ ಈಶ್ವರನ ಕ್ರಿಯಾಶಕ್ತಿಯ ವಿಕಲ್ಪವೆಂಬ ಭಾವನೆ ಅವನಿಗೆ ನಿರಂತರವಾಗಿರುವುದು. ಅವನ ಮನಸ್ಸು ಹರಿದೆಡೆಯೆಲ್ಲ ಶಿವ ಪ್ರಕಾಶವನ್ನು ಬಿಟ್ಟು ಬೇರೇನನ್ನೂ ಕಾಣನಾದುದರಿಂದ ಅವು ಸತ್ಯವೆಂಬ ಅನುಸಂಧಾನ ಅವನಿಗೆ. ಸರ್ವವೂ ಶಿವಮಯವಾಗಿರುವುದರಿಂದ ಅವನ ಮನಸ್ಸು ಬೇರೆಲ್ಲಿಗೆ ಹೋಗಬಲ್ಲದು?

ಭುವನಾವಲೀಂ ಸಮಸ್ತಾಂ
ತತ್ತ್ವಕ್ರಮಕಲ್ಪನಾಂ—ಅಥಾಕ್ಷಗಣಂ
ಅಂತರ್ಬೋಧೇ ಪರಿವ
ರ್ತಯತಿ ಯತ್ಸೋಽಸ್ಯ ಜಪ ಉದಿತಃ ೭೮

ಸಮಸ್ತವಾದ ಭುವನಾವಳಿಯನ್ನೂ ತತ್ತ್ವಗಳ ಕ್ರಮವಾದ ಕಲ್ಪನೆಯನ್ನೂ ಇಂದ್ರಿಯವರ್ಗವನ್ನೂ ಅಂತರಂಗದಲ್ಲಿ (ಇವೆಲ್ಲಾ ಶಿವನ ಶಕ್ತಿಯ ಸ್ಫುರಣವೆಂದು) ಎಣಿಸುತ್ತಾ ಬರುವುದರಿಂದ ಅದೇ ಈತನಿಗೆ ಸಂದ[1]ಜಪ.

1. ಜಪವೆಂದರೆ ಇಷ್ಟದೇವತೆಯನ್ನು ಕುರಿತ ಹೆಸರಿನ ಮಂತ್ರದ ಪುರಶ್ಚರಣೆ. ಪರಮಾರ್ಥ ಯೋಗಿಗೆ ಭುವನವರ್ಗ, ತತ್ತ್ವ ಸಮೂಹ, ಇಂದ್ರಿಯಾವಳಿ ಎಲ್ಲವೂ ಶಿವ ಶಕ್ತಿಯ ಒಂದೊಂದು ಹೆಸರು-ಒಂದೊಂದು ಕುರುಹು. ಪ್ರಾಣಶಕ್ತಿಯ ಸೂತ್ರದಲ್ಲಿ ಪೋಣಿಸಿದ ಅಕ್ಷಮಾಲೆಯ ಮೂಲಕ ಈ ರೀತಿಯಾದ ಎಣಿಕೆ ನಿರಂತರವಾಗಿ ನಡೆಯುತ್ತಾ ಹೋದರೆ ಜಪವಲ್ಲದೆ ಮತ್ತೇನು ?

ಸರ್ವಂ ಸಮತಯಾ ದೃಷ್ಟ್ಯಾ
ಯತ್ಪಶ್ಯತಿ ಯಚ್ಚ ಸಂವಿದಂ ಮನುತೇ
ವಿಶ್ವ ಶ್ಮಶಾನ ನಿರತಾಂ
ವಿಗ್ರಹಖಟ್ವಾಂಗ ಕಲ್ಪನಾ ಕಲಿತಾಂ ೭೯

ವಿಶ್ವ ರಸಾಸವ ಪೂರ್ಣಂ
ನಿಜ ಕರಗಂ ವೇದ್ಯಖಂಡಕ ಕಪಾಲಂ
ರಸಯತಿ ಚ ಯತ್ತದೇತತ್
ವ್ರತಮಸ್ಯ ಸುದುರ್ಲಭಂಚ ಸುಲಭಂ ಚ ೮೦

ಅವನು ಸರ್ವವನ್ನು ಸಮದೃಷ್ಟಿಯಿಂದ ನೋಡುತ್ತಾನೆ. ಮತ್ತು ಚೈತನ್ಯವು ಏಕಮಾತ್ರ. ತದ್ವ್ಯತಿರಿಕ್ತ ಸರ್ವವೂ ಜಡ. ಚೈತನ್ಯವು ಜಡವಾದ ದೇಹದಲ್ಲಿ ಭೋಕ್ತೃವಾಗಿ ನೆಲಸಿರುವುದು-ಎಂದೂ ತಿಳಿಯುತ್ತಾನೆ. ತಾನು ಚೈತನ್ಯವೆಂದು ತಿಳಿಯುವುದರಿಂದ ವಿಶ್ವವೆಂಬ ಶ್ಮಶಾನದ ನಿವಾಸಿ ತಾನೆಂದು ಅವನ ಎಣಿಕೆ. ಸ್ವಂತ ದೇಹವೇ ಅವನಿಗೊಂದು ಖಟ್ವಾಂಗ (ಕಂಕಾಲ ಮುದ್ರೆ). ಇಂದ್ರಿಯ ಸಮುದಾಯದ ಕರಗಳಿಂದ ಸ್ವವಶವಾದ ಗ್ರಾಹ್ಯ ವಿಷಯ ಖಂಡ ಯುಕ್ತವಾದ ಕಪಾಲದಲ್ಲಿ ವಿಶ್ವರಸಾಸವದ ಪಾನ ಮಾಡುತ್ತಾ ಆತನು ಸುಖಿಸುತ್ತಾನೆ. ಈ ಭಾವನಾಮಯವಾದ ವಿಶ್ವಶ್ಮಶಾನ ವಾಸಾದಿ ವ್ರತವು ಅತಿ ಕಷ್ಟವೂ ಹೌದು, ಸುಲಭವೂ ಹೌದು !

ರೌದ್ರ ಭೈರವ ವ್ರತವನ್ನು ಹಿಡಿದ ಕೆಲವರು ಯೋಗಿಗಳು ಹೀಗೆ ನಡೆದು ಕೊಳ್ಳುತ್ತಾರೆ. ಅವರ ವಾಸ ಶ್ಮಶಾನದಲ್ಲಿ. ಅವರಿಗೆ ಉಚ್ಚ ನೀಚ ತಾರತಮ್ಯವಿಲ್ಲ. ಶ್ಮಶಾನದಲ್ಲಿ ಉಚ್ಚಯಾವುದು ? ತುಚ್ಛಯಾವುದು ? ಅವರ ಒಡನಾಟ ಶವಗಳೊಡನೆ ಅಟ್ಟಾಟ ಶವಗಳ ನಡುವೆ. ಖಟ್ವಾಂಗಧರನಾದ ಆರಾಧ್ಯ ಶಿವನಂತೆ ಅವರೂ ಖಟ್ವಾಂಗ ಮುದ್ರೆಗೂಡಿ ಯೋಗಸಾಧನೆಯಲ್ಲಿ ನಿರತರಾಗುವರು. ಅವರ ಪಾನಪಾತ್ರೆ ತಲೆ ಬುರುಡೆಯ ಓಡು. ಕುಡಿಯುವುದು ಆಸವವೆಂಬ ಮಾದಕರಸ. ಪರಮಾರ್ಥಜ್ಞಾನಿಯೂ ಇಂತಹ ವ್ರತಿಗಳನ್ನು ಹೋಲುವನು. ಆತನೂ ಸಮದೃಷ್ಟಿಯುಳ್ಳವನು. ಚೈತನ್ಯವೊಂದು ಹೊರಗಾದರೆ ಜಡವಸ್ತು ನಿಬಿಡವೆನಿಸುವ ವಿಶ್ವವೇ ಒಂದು ಶ್ಮಶಾನದಂತೆ ಆತನ ಎಣಿಕೆ. ಹೀಗೆಂದ ಮೇಲೆ ಉಚ್ಚನೀಚ ಭೇದಭಾವಕ್ಕೆ ಅವಕಾಶವೆಲ್ಲಿ? ತನ್ನ ಶರೀರವೇ ಆತನಿಗೊಂದು ಖಟ್ವಾಂಗ-ಕಂಕಾಳ ಮಾತ್ರ—ಬರಿಯ ಎಲುಬಿನ ಗೂಡು ಅಥವಾ ಬುರುಡೆಗೋಲು ! ಪಂಚೇಂದ್ರಿಯಗಳ ಕೇಂದ್ರಸ್ಥಾನವಾದ ತನ್ನ ರುಂಡವೇ ಆತನ ಪಾನ ಪಾತ್ರೆ. ಇಂದ್ರಿಯಗಳ ಮೂಲಕ ಅವನು ಗ್ರಹಿಸುವ ವಿಶ್ವ ವಿಷಯಗಳೂ (ಶಿವಪ್ರಕಾಶಾನುಭವದ ಮಹಾ ಸಂತೋಷವನ್ನು ಕೊಡುವುದರಿಂದ) ವಿಶಿಷ್ಟವಾದ ರಸಾಸವದ ಪಾನ. ಈ ವಿಶ್ವರಸಾಸವದ ಪಾನಾನುಭವದಿಂದ ಆತನು ಆನಂದಮಯನಾಗಿ ಕಾಣುವನು. ದಿಟವಾಗಿ ಈ ವ್ರತ ಮಹಾದುರ್ಲಭ. ಕಾರಣ : ಆತ್ಮ ಸ್ವರೂಪವನ್ನು ಮರೆಯಿಸುವ ಅಖ್ಯಾತಿ ದೋಷ ಹೋದವರಿಗೆ ಹೊರತು ಇತರರಿಗೆ ಶಕ್ಯವಲ್ಲ. ಆದರೆ ವಿಚಾರಶೀಲರಾದ ಶ್ರದ್ಧಾಳುಗಳಿಗೆ ಇದು ಸುಲಭವೂ ಹೌದು.

(ಖಟ್ವಾಂಗ ವೆಂದರೆ ತಲೆ ಬುರುಡೆಗೆ ಕೋಲೊಂದನ್ನು ಅಳವಡಿಸಿ ಮಾಡಿದ ಒಂದು

ಬಗೆಯ ಆಯುಧ-ಬುರುಡೆಗೋಲು. ಖಟ್ವಾಂಗಮುದ್ರೆ-ಮುಷ್ಟಿ ಹಿಡಿದ ಬಲಗೈಯನ್ನು ನೀಳವಾಗಿ ಮೇಲಕ್ಕೆ ಎತ್ತಿ ಹಿಡಿದು ಒಂದು ಬಗೆಯ ಯೋಗಾಸನ ಕ್ರಮದಲ್ಲಿ ನಿಲ್ಲುವ ನಿಲುವು.)

ಇತಿ ಜನ್ಮನಾಶಹೀನಂ
ಪರಮಾರ್ಥ ಮಹೇಶ್ವರಾಖ್ಯಮುಪಲಭ್ಯ
ಉಪಲಬ್ಧೃತಾ ಪ್ರಕಾಶಾತ್
ಕೃತಕೃತ್ಯಸ್ತಿಷ್ಠತಿ ಯಥೇಷ್ಟಂ ೮೧

ಹೀಗೆ ಜನ್ಮನಾಶಗಳಿಲ್ಲದ ಪರಮಾರ್ಥ ಮಹೇಶ್ವರ ಸ್ವರೂಪವನ್ನು ಹೊಂದಿ, ಆತ್ಮ ಸ್ವರೂಪ ಪ್ರಕಾಶದ ದೆಸೆಯಿಂದ ಕೃತ ಕೃತ್ಯನಾದ ಜ್ಞಾನಿಯು ಇಷ್ಟಬಂದ ಕಡೆ ಇರುವನು.

ವ್ಯಾಪಿನಮಭಿಹಿತಮಿತ್ಥಂ
ಸರ್ವಾತ್ಮಾನಂ ವಿಧೂತ ನಾನಾತ್ವಂ
ನಿರುಪಮ ಪರಮಾನಂದಂ
ಯೋ ವೇತ್ತಿ ಸ ತನ್ಮಯೋ ಭವತಿ ೮೨

ಹೀಗೆ ನಿರೂಪಿತನಾದ ವ್ಯಾಪಿಯೂ, ನಾನಾತ್ವವನ್ನು ದೂರಗೊಳಿಸಿದವನೂ ಅಸದೃಶ ಪರಮಾನಂದನೂ, ಆದ ಸರ್ವಾತ್ಮನನ್ನು ತಿಳಿದವನು ತನ್ಮಯನಾಗುವನು.

ತೀರ್ಥೇ ಶ್ವಪಚಗೃಹೇ ವಾ
ನಷ್ಟಸ್ಮೃತಿರಪಿ ಪರಿತ್ಯಜನ್ ದೇಹಂ
ಜ್ಞಾನಸಮಕಾಲ ಮುಕ್ತಃ
ಕೈವಲ್ಯಂ ಯಾತಿ ಹತಶೋಕಃ ೮೩

ಪುಣ್ಯತೀರ್ಥದಲ್ಲಾಗಲಿ ಶ್ವಪಚ ಗೃಹದಲ್ಲಾಗಲೀ ಆ ಜ್ಞಾನಿಯು ವೈ ಮೇಲೆ ನೆನಹಿಲ್ಲದೆ ದೇಹವನ್ನು ಬಿಟ್ಟರೂ ಜ್ಞಾನ ಸಮಕಾಲದಲ್ಲಿಯೇ ಮುಕ್ತ ನಾಗಿರುವುದರಿಂದ ಶೋಕರಹಿತನಾಗಿ ಕೈವಲ್ಯವನ್ನು ಹೊಂದುವನು.

ಪುಣ್ಯಾಯ ತೀರ್ಥಸೇವಾ
ನಿರಯಾಯ ಶ್ವಪಚಸದನನಿಧನ ಗತಿಃ
ಪುಣ್ಯಾಪುಣ್ಯ ಕಲಂಕ
ಸ್ಪರ್ಶಾಭಾವೇತು ಕಿಂ ತೇನ ೮೪

ತೀರ್ಥಸೇವೆಯು ಪುಣ್ಯಕ್ಕೆ ಕಾರಣ, ಶ್ವಪಚನ ಮನೆಯಲ್ಲಿ ಸಾಯುವ ಅವಸ್ಥೆ ನರಕವನ್ನು ತಂದೀತು. ಆದರೆ ಪುಣ್ಯಾಪುಣ್ಯ ರೂಪವಾದ ಕಳಂಕದ ಸೋಂಕೇ ಇಲ್ಲದ ಜ್ಞಾನಿಗೆ ಅವುಗಳಿಂದ ಏನಾದೀತು ?

ತುಷ ಕಂಬುಕ ಸುಪೃಥಕ್ಕೃತ
ತಂಡುಲಕಣ ತುಷದಲಾಂತರ ಕ್ಷೇಪಃ
ತಂಡುಲಕಣಸ್ಯ ಕುರುತೇ
ನ ಪುನಸ್ತದ್ರೂಪ ತಾದಾತ್ಮ್ಯಂ ೮೫

ಹೊಟ್ಟು ತವುಡುಗಳಿಂದ ಚೆನ್ನಾಗಿ ಬೇರ್ಪಡಿಸಲ್ಪಟ್ಟ ಅಕ್ಕಿಯಕಾಳನ್ನು ಮತ್ತೆ ಅವುಗಳ ನಡುವೆ ಹುದುಗಿಸಿಟ್ಟರೂ ಆ ಹೊಟ್ಟು ತವುಡುಗಳಿಗೆ ಮೊದಲಿನಂತೆ ಅಂಟಿ ಭತ್ತದ ರೂಪವನ್ನು ಪಡೆಯುವುದಿಲ್ಲ.

ತದ್ವತ್ ಕಂಚುಕಪಟಲೀ
ಪೃಥಕ್ಕೃತಾ ಸಂವಿದತ್ರ ಸಂಸ್ಕಾರಾತ್

ಶಿಷ್ಟಂತ್ಯಪಿ ಮುಕ್ತಾತ್ಮಾ
ತತ್ಸ್ಪರ್ಶವಿವರ್ಜಿತಾ ಭವತಿ ೮೬

ಹಾಗೆಯೇ ಕಂಚುಕಗಳಿಂದ ಬೇರೆಯೆಂದು ಅರಿಯಲ್ಪಟ್ಟ ಚೈತನ್ಯವು ಸಂಸ್ಕಾರವಶದಿಂದ ಅವುಗಳಲ್ಲಿದ್ದರೂ ಮುಕ್ತಾತ್ಮವಾಗಿ ಅವುಗಳ ಸ್ಪರ್ಶವಿಲ್ಲದೆ ಇರುವುದು.

ಕುಶಲತಮ ಶಿಲ್ಪಿ ಕಲ್ಪಿತ
ವಿಮಲೀ ಭಾವಃ ಸಮುದ್ಗಕೋಪಾಧೇಃ
ಮಲಿನೋಽಪಿ ಮಣಿರುಪಾಧೇಃ
ವಿಚ್ಛೇದೇ ಸ್ವಚ್ಛ ಪರಮಾರ್ಥಃ ೮೭

ಏವಂ ಸದ್ಗುರು ಶಾಸನ
ವಿಮಲಸ್ಥಿತಿವೇದನಂ ತನೂಪಾಧೇಃ
ಮುಕ್ತಮುಪ್ಯುಪಾಧ್ಯಂತರ
ಶೂನ್ಯಮಿವಾಭ್ರಾತಿ ಶಿವರೂಪಂ ೮೮

ಕುಶಲತಮನಾದ ಶಿಲ್ಪಿಯಿಂದ (ಸಾಣೆಗೊಟ್ಟು) ಸ್ವಚ್ಛಗೊಳಿಸಲ್ಪಟ್ಟ ರತ್ನವು (ವಜ್ರವು) ಪೆಟ್ಟಿಗೆ (ಕುಂದಣ ಅಥವಾ ಭರಣಿ)ಯಲ್ಲಿ ಜೋಡಿಸಲ್ಪಟ್ಟರೆ ಹಿನ್ನೆಲೆಯ ಛಿಸೆಯಿಂದ ಮಲಿನವಾಗಿ ತೋರೀತು, ಆದರೆ ಆ ಬಗೆಯ ಆವರಣದ ಉಪಾಧಿರೂಪವಾದ ಹಿನ್ನೆಲೆ ಕಳಿದೊಡನೆ ಸ್ವಚ್ಛವಾದ ತನ್ನ ಸಹಜ ಪ್ರಕಾಶದಿಂದ ತೊಳಗುವುದು. ಹಾಗೆಯೇ ಸದ್ಗುರುವಿನ ಉಪದೇಶದಿಂದ ಸಹಜವಾದ ಶುದ್ಧ ಸ್ಥಿತಿಯನ್ನರಿತು ಕಳೆಗೊಂಡ ಆತ್ಮನು ಆ ಶರೀರ ರೂಪವಾದ ಉಪಾಧಿ ಹೋದೊಡನೆ ಬೇರೆ ದೇಹವೆಂಬ ಉಪಾಧಿಯನ್ನು ಮತ್ತೆ ಪಡೆಯದೆ ಸಹಜವಾದ ಶಿವರೂಪದಲ್ಲಿ ಬೆಳಗುವನು.

ಶಾಸ್ತ್ರಾದಿ ಪ್ರಾಮಾಣ್ಯಾತ್
ಅವಿಚಲಿತಶ್ರದ್ಧಯಾಪಿ ತನ್ಮಯತಾಂ
ಪ್ರಾಪ್ತಃ ಸ ಏವ ಪೂರ್ವಂ
ಸ್ವರ್ಗಂ ನರಕಂ ಮನುಷ್ಯತ್ವಂ ೪೯

* ಶಾಸ್ತ್ರಾದಿಗಳ ಆಧಾರದ ಮೇಲೆ ನಿಶ್ಚಲವಾದ ಶ್ರದ್ಧೆಯಿಂದ ಕೂಡಿದ ಮನುಷ್ಯನು ಯಾವುದಾದರೂ ಆಚರಣೆಯಲ್ಲಿ–ಅನುಷ್ಠಾನದಲ್ಲಿ ತೊಡಗಿ ಅದರಲ್ಲಿ ತನ್ಮಯನಾಗುವನು. ಮೊದಲಿನ ಈ ತನ್ಮಯತೆಗನುಸಾರವಾಗಿ ಅವನ ಮರಣ ಕಾಲದ ಮನೋಧರ್ಮವೂ ಭಾವನೆಗಳೂ ರೂಪುಗೊಳ್ಳುವುದರಿಂದ ಮರಣಾನಂತರದಲ್ಲಿ ಅವನು ಸ್ವರ್ಗವನ್ನೋ ನರಕವನ್ನೋ ಮತ್ತೆ ಮನುಷ್ಯತ್ವವನ್ನೋ ಪಡೆಯುವನು.

* ಮನುಷ್ಯನ ಮರಣಕಾಲದ ಸ್ಮೃತಿ, ಆಶೆ ಆರ್ತಿಗಳ ಮನೋಧರ್ಮ–ಭಾವನೆಗಳು ಅವನ ಮುಂದಿನ ಗತಿಯನ್ನು ರೂಪಿಸುತ್ತವೆ ಯೆಂಬುದು ಪ್ರಸಿದ್ಧವಾದ ವಿಷಯ ಆದರೆ ಅವನ ಆಗಿನ ಭಾವನೆಗಳು ಆಕಸ್ಮಿಕವಾಗಲಾರವು. ಜೀವಿತದ ಕಾಲದಲ್ಲಿ ಆತನು ಶಾಸ್ತ್ರಗಳ ಆಧಾರ, ಆಪ್ತವಾಕ್ಯ, ಉಪದೇಶ ಪರಂಪರೆ, ಯುಕ್ತಿಯಿಂದುಂಟಾದ ಪರಿಶೀಲನೆ ಮುಂತಾದುವುಗಳ ವೈವಿಧ್ಯಕ್ಕನುಗುಣವಾಗಿ ಕುದುರಿದ ನಿಶ್ಚಲವಾದ ಶ್ರದ್ಧೆಯಿಂದ ಆತ್ಮಾನುಸಂಧಾನದಲ್ಲಿ ನಿರತನಾಗಬಹುದು. ಅಥವಾ ಧರ್ಮಾಪೇಕ್ಷೆಯಿಂದ ಕೆರೆ ಕಟ್ಟೆ ಬಾವಿಗಳ ನಿರ್ಮಾಣ, ಯಜ್ಞಯಾಗಾದಿ ಕರ್ಮಗಳ -ಇವುಗಳಲ್ಲಿ ಆಸಕ್ತನಾಗಿ ನಡೆಸುತ್ತಾ ಬರಬಹುದು. "ಯೋ ಯತ್ ಶ್ರದ್ಧಃ ಸ ಏವ ಸಃ" ತಾನೆ ಹೀಗೆ ಅವನು ದಿನ ಗಟ್ಟಲೆ ಬೆಳಸಿಕೊಂಡ ಭಾವನೆಗಳಿಗೆ ಅನುಗುಣವಾಗಿ ಅಭ್ಯಾಸವು ಬೆಳೆದು ಸಂಸ್ಕಾರ ರೂಪಕ್ಕೆ ತಿರುಗಿ ಅವನಲ್ಲಿ ತನ್ಮಯತೆ ಹುಟ್ಟುವುದು. ಅತನ ಮರಣಕಾಲದ ಮನೋಧರ್ಮ ಈ ತನ್ಮಯತೆಗನುಗುಣವಾಗಿರುವುದು. ವಾಸನಾರೂಪವಾದ ಈ ಬಗೆಯ ಭಾವನೆಯ ಬೀಜವೇ ಮರಣದ ತರುವಾಯ ಅವನಿಗೆ ನಿರತಿಶಯ ಸುಖ ಪ್ರೀತಿ ರೂಪವಾದ ಸ್ವರ್ಗ, ಅಪರಿಮಿತದುಃಖ ರೂಪವಾದ ನರಕ ಅಥವಾ ಸುಖದುಃಖ ಮಿಶ್ರತಾರೂಪವಾದ ಮನುಷ್ಯತ್ವವನ್ನು ಮತ್ತೆ ಉಂಟುಮಾಡುವುದು. ತದ್ಭಾವ ಭಾವಿಕತೆಗೆ ಇದರಿಂದಲೇ ಪ್ರಾಮುಖ್ಯ.

ಅಂತ್ಯಃ ಕ್ಷಣಸ್ತು ತಸ್ಮಿನ್
ಪುಣ್ಯಾಂ ಪಾಪಾಂ ಚ ವಾ ಸ್ಥಿತಿಂ ಪುಷ್ಯನ್
ಮೂಢಾನಾಂ ಸಹಕಾರೀ
ಭಾವಂ ಗಚ್ಛತಿ ಗತೌ ತು ನ ಸ ಹೇತುಃ ೯೦

ಯೇಽಪಿ ತದಾತ್ಮತ್ವೇನ ವಿದುಃ
ಪಶು ಪಕ್ಷಿ ಸರೀಸೃಪಾದಯಃ ಸ್ವಗತಿಂ
ತೇಽಪಿ ಪುರಾತನ ಸಂಬೋ
ಧ ಸಂಸ್ಕೃತಾಃ ತಾಂ ಗತಿಂ ಯಾಂತಿ ೯೧

(ಆತ್ಮಜ್ಞಾನ) ಮೂಢರಾದವರಿಗೆ ಪುಣ್ಯ ಪಾಪಗಳ (ಮನೋಧರ್ಮ) ವನ್ನು ಪೋಷಿಸಿ ಅವರ ಮುಂದಿನ ಗತಿಗೆ ಕೇವಲ ಸಹಕಾರಿ ಕಾರಣವಾಗುವ ಕೊನೆಯಗಳಿಗೆ (ಅವಸಾನ ಕಾಲದ ಸ್ಥಿತಿ) ಪರಮಾರ್ಥ ಜ್ಞಾನಿಯ ಗತಿಗೆ ತಾನು ಮುಖ್ಯ ಕಾರಣವಾಗಲಾರದು. ಪಶುಪಕ್ಷಿ ಸರ್ಪಾದಿಗಳು ಕೂಡ ಆಗ (ಮರಣ ಸಮಯದ ಆ ಗಳಿಗೆಯಲ್ಲಿ) ತಮ್ಮ ನಿಜಸ್ಥಿತಿ ಶುದ್ಧಾತ್ಮ ವಿಭೂತಿ ಯೆಂದು ತಿಳಿಯುವುದರಿಂದ ಅವುಗಳ ಪುರಾತನ ಜ್ಞಾನದ ಸಂಸ್ಕಾರವು ಉಜ್ಜ್ವಲವಾಗಿ ಅದರ ಮಹಿಮೆಯಿಂದ ಸಹಜವಾಗಿ ಮೋಕ್ಷದ ಹಾದಿಯನ್ನೇ ಹಿಡಿದು ನಡೆಯುವುವು.

ಮನುಷ್ಯನ ಮುಂದಿನ ಗತಿಗೆ ಕೇವಲ ಮರಣಕಾಲದ ಮನೋಧರ್ಮವೇ ಮುಖ್ಯ ಕಾರಣವೆಂದು ಕೆಲವರಲ್ಲಿ ಅಭಿಪ್ರಾಯ ಹರಡಿದ್ದೀತು. ಆದರೆ ಈ ಮರಣ ಕಾಲದ ಮನೋಧರ್ಮವೆಂಬುದು ಆಕಸ್ಮಿಕವಾಗಿ ಉಂಟಾಗಲಾರದೆಂದು ಹಿಂದೆಯೇ ಹೇಳಿದೆ. ಅವಸಾನಕಾಲದಲ್ಲಿ ಸ್ಮೃತಿ ಶಕ್ತಿ ನೆಟ್ಟಗಿದ್ದರೆ ಮೂಢರಾದವರ ಹಂಬಲವೆಲ್ಲಾ ಪುಣ್ಯ ಪಾಪಗಳಿಗೆ ಸಂಬಂಧಿಸಿರುತ್ತದೆ. ಆದುದರಿಂದ ಅವರ ಹಿಂದಿನ ಭಾವನೆಗಳ ಹಿನ್ನೆಲೆಗೆ ಆಗಿನ ಭಾವನೆ ಪೋಷಕವಾಗಿ ಅವರ ಮುಂದಿನ ಗತಿಗೆ ಒತ್ತಾಸೆಯನ್ನು ಮಾತ್ರ ಮಾಡುತ್ತದೆ. ತಾನೇ ಮುಖ್ಯವಲ್ಲ. ಆತ್ಮಜ್ಞಾನಿಗಾದರೋ ಸ್ಮೃತಿ ಶಕ್ತಿ ನೆಟ್ಟಗಿದ್ದ ಪಕ್ಷದಲ್ಲಿ

ಆಗ ಸ್ವಸ್ವರೂಪ ಚಿಂತನೆಯೇ ಹೊರತು ಬೇರೆ ಯಾವ ಹಂಬಲಕ್ಕೂ ಕಾರಣವಿಲ್ಲ, ಆದುದರಿಂದ ಮೋಕ್ಷವೇ ಸಹಜ. ಒಂದು ವೇಳೆ ಸ್ಮೃತಿಶಕ್ತಿ ನೆಟ್ಟಗಿಲ್ಲದಿದ್ದರೆ, ಹಿಂದಿನ ಸಂಸ್ಕಾರವೇ ಅತನಿಗೆ ಸಾಕು. ಆಗಲೂ ತೊಡಕಿಲ್ಲ, ಒಂದು ವಿಶೇಷವೇನೆಂದರೆ ಹಿಂದಿನಿಂದ ಅರಿವು ಮರೆವಾಗಿದ್ದ ಪ್ರಾಚೀನ ಸಂಸ್ಕಾರ ವಿಶೇಷದಿಂದ ಮರಣಕಾಲದಲ್ಲಿ ಇದ್ದಕ್ಕಿದ್ದಂತೆ ನೈಜವಾದ ಆತ್ಮಸ್ವರೂಪದ ವಿಜ್ಞಾನವು ಮಿಂಚು ಹೊಳೆದಂತೆ ಹೊಳೆದು ತಿಳಿವು ಮರಳಿಬಿಟ್ಟರೆ ಅಂಥವನ ಕರ್ಮವಾಸನೆಯೆಲ್ಲವೂ ಹತ್ತಿಯ ಬಣವೆಗೆ ಬೆಂಕಿಯಿಟ್ಟಂತೆ ಕ್ಷಣದಲ್ಲಿ ದಗ್ಧವಾಗಿ ಪರಮಾರ್ಥ ಜ್ಯೋತಿಯು ಆದಿತ್ಯನಂತೆ ಪ್ರಕಾಶಿಸುವುದರಿಂದ ಮೋಕ್ಷವು ಸಿದ್ಧವೇ ಸಿದ್ಧ. "ಯಥೈಧಾಂಸಿ ಸಮಿದ್ಧೋಽಗ್ನಿಃ ಭಸ್ಮಸಾತ್ಕುರುತೇ... ಜ್ಞಾನಾಗ್ನಿಸ್ಸರ್ವ ಕರ್ಮಾಣಿ ಭಸ್ಮಸಾತ್ಕುರುತೇ ತಥಾ". ಒಮ್ಮೆ ಜ್ಞಾನಜ್ಯೇಷ್ಠರಾಗಿದ್ದು ಶಾಪಾದಿಗಳ ದೆಸೆಯಿಂದಲೋ ಮೋಹವಶತೆಯಿಂದಲೋ ಮೃಗಸರ್ಪಾದಿ ರೂಪಗಳನ್ನು ಪಡೆದ ಹಿರಿಯವ್ಯಕ್ತಿಗಳು ಹೀಗೆ ಮೋಕ್ಷಭಾಗಿಗಳಾದ ಉದಾಹರಣೆಗಳುಂಟು. ಗಜೇಂದ್ರ ಮೋಕ್ಷದ ಸಂದರ್ಭದಲ್ಲಿ ಅಂತಿಮದಶೆಯ ಸ್ಮೃತಿ ಬಿಡುಗಡೆಗೆ ಕಾರಣವಾಯಿತೆಂಬುದನ್ನು ಮನಮುಟ್ಟಿಸುತ್ತದೆ. ಅಜಗರ ಚರಿತ್ರೆಯೂ ಇದನ್ನೇ ಸ್ಪಷ್ಟಪಡಿಸುತ್ತದೆ.

ಸ್ವರ್ಗಮಯೋ ನಿರಯಮಯಃ
ತದಯಂ ದೇಹಾಂತರಾಲಗಃ ಪುರುಷಃ
ತದ್ಭಂಗೇ ಸ್ವಾಚಿತ್ಯಾತ್
ದೇಹಾಂತರ ಯೋಗಮಭ್ಯೇತಿ ೯೨

ಏವಂ ಜ್ಞಾನಾವಸರೇ
ಸ್ವಾತ್ಮಾ ಸಕೃದಸ್ಯ ಯಾದೃಗವಭಾತಃ
ತಾದೃಶ ಏವ ತದಾಸೌ
ಸ ದೇಹಪಾತೇಽಸ್ಯಥಾ ಭವತಿ ೯೩

ದೇಹಗತನಾದ ಪುರುಷನು (ಪರಮಾರ್ಥ ಜ್ಞಾನಿಯಾಗದಿದ್ದರೆ) ಸುಖ ದುಃಖ ಚಿಂತನೆಯಲ್ಲಿರುವನು. ಸುಖಾಭಿಲಾಷೆಯಿಂದ ಸ್ವರ್ಗಾದಿಗಳ ಚಿಂತನೆ, ದುಷ್ಕೃತದ ನೆನಹಿನಿಂದ ನರಕಾದಿಗಳ ಭಯ—ಇವು ಅಂಟೆ ಅವನ ಮನಸ್ಸು

ತನ್ಮಯತೆಯಲ್ಲಿರುವುದು. ಇದರಿಂದ ಆ ಶರೀರವು ಹೋದ ಮೇಲೆ ಅವನು ಬೆಳಸಿಕೊಂಡ ಭಾವನೆಗಳಿಗನುಗುಣವಾಗಿ ಅವನಿಗೆ ಬೇರೆ ದೇಹವುಂಟಾಗುವುದು ಉಚಿತವೆನಿಸುತ್ತದೆ. ಹಾಗೆಯೇ ಪರಮಾರ್ಥಜ್ಞಾನಿಯಾದವನಿಗೆ ಜ್ಞಾನಸಂಪ್ರಾಪ್ತಿಯ ಕಾಲದಲ್ಲಿ ಸ್ವಾತ್ಮರೂಪವು ಒಮ್ಮೆ ಹೇಗೆ ಪ್ರಕಾಶಿಸಿ ತೋರಿರುತ್ತದೋ ಆ ವಿಧವಾದ ಸ್ವರೂಪವನ್ನೇ ಅವನು ದೇಹಪಾತವಾದ ಮೇಲೆ ಹೊಂದುವನು. ಬೇರೆಯಾಗದು.

ಕರಣಗಣ ಸಂಪ್ರಮೋಷಃ
ಸ್ಮೃತಿನಾಶಃ ಶ್ವಾಸಕಲಿಲತಾಚ್ಛೇದಃ
ಮರ್ಮಸು ರುಜಾವಿಶೇಷಾಃ
ಶರೀರ ಸಂಸ್ಕಾರಜೋ ಭೋಗಃ ೯೪

ಸ ಕಥಂ ವಿಗ್ರಹಯೋಗೇ
ಸತಿ ಸ ಭವೇತ್ತೇನ ಮೋಹಯೋಗೇಽಪಿ
ಮರಣಾವಸರೇ ಜ್ಞಾನೀ
ನ ಚ್ಯವತೇ ಸ್ವಾತ್ಮ ಪರಮಾರ್ಥಾತ್ ೯೫

ಇಂದ್ರಿಯ ಮಾಂದ್ಯ, ಸ್ಮೃತಿನಾಶ, ಶ್ವಾಸಗತಿಯ ವ್ಯತ್ಯಾಸ, ಅಸ್ಥಿ ಸಂಧಿಗಳಲ್ಲಿನ ಶೈಥಿಲ್ಯ, ರೋಗ ವಿಶೇಷಗಳು, ಶರೀರ ಸಂಸ್ಕಾರದಿಂದ ಒದಗುವ ಸುಖ ದುಃಖ ಭೋಗಗಳು, ಇವು ಹೇಗೆ ತಾನೆ *ಸದೇಹನಾದ ಜೀವನಿಗೆ ಉಂಟಾಗದೇ ಇರುವುವು ? ಹೀಗಾಗಿ ಮರಣಸಮಯದಲ್ಲಿ ಜ್ಞಾನಿಯು ಪ್ರಜ್ಞಾಶೂನ್ಯನಾಗಿದ್ದರೂ ಅವನು ಗಳಿಸಿರುವ ಆತ್ಮ ಸಿದ್ಧಿಯು ಚ್ಯುತವಾಗುವುದಿಲ್ಲ.

* ಕಫವಾತ ಪಿತ್ತಾದಿ ದೋಷದಿಂದ ವಿಚಿತ್ರ ವಿಕಾರಗಳಿಗೆ ತೌರುಮನೆಯಾದ ಶರೀರದಲ್ಲಿ ಮರಣ ಕಾಲದಲ್ಲಿ ಸ್ಮೃತಿ ಶಕ್ತಿ ನೆಟ್ಟಗಿರುತ್ತದೆಂದು ಹೇಗೆ ನಿರೀಕ್ಷಿಸಲಾದೀತು? ಹಲವರಿಗೆ ಆಗ ಪ್ರಜ್ಞೆ ಹೋಗಿ ಬಿಡುತ್ತದೆ. ಇನ್ನೂ ಹಲವು ಬಗೆಯ ಕ್ಲೇಶಗಳು ಕಾಣಿಸಿಕೊಳ್ಳುತ್ತವೆ. ಆದ ಮಾತ್ರಕ್ಕೆ ಆಗ ಸ್ಮೃತಿಯಿಲ್ಲದೆ ಸಾಯುವುದರಿಂದ ಮೊದಲಿಂದ ಗಳಿಸಿದ ಸಿದ್ಧಿ ವ್ಯರ್ಥವಾಗಲಾರದು. ಕಾಷ್ಠ ಪಾಷಾಣ ಸದೃಶನಾಗಿ ಜ್ಞಾನಿಯು ಶರೀರವನ್ನು ಅಗಲಿದರೂ ಆತನ ಬಿಡುಗಡೆಗೆ ಕೊರತೆಯಿರುವುದಿಲ್ಲ.

ಪರಮಾರ್ಥ ಮಾರ್ಗಮೇನಂ
ಝುಟಿತಿ ಯದಾ ಗುರುಮುಖಾತ್ ಪುಮಭ್ಯೇತಿ
ಅತಿತೀವ್ರ ಶಕ್ತಿಪಾತಾತ್
ತದೈವ ನಿರ್ವಿಘ್ನಮೇವ ಶಿವಃ ೯೬

ಈ ಪರಮಾರ್ಥಮಾರ್ಗವನ್ನು [1]ಬಹುಬೇಗ ಗುರುಮುಖದಿಂದ ಯಾವಾಗ (ಅರಿತು) ಅಭಿಮುಖನಾಗಿ ನಡೆಯುವನೋ ಅತಿ ತೀವ್ರವಾದ ಶಿವ ಶಕ್ತಿಪಾತದಿಂದ ಆಗಲೇ ನಿರ್ವಿಘ್ನವಾಗಿಯೇ ವ್ಯಕ್ತಿ ಶಿವನಾಗುವನು.

1. ಕದಾ ಕದಾ-ಎಂಬ ಉತ್ಕಟೇಚ್ಛೆ ಕ್ಷಿಪ್ರವಾದ ಶ್ರೇಯಸ್ಸಿಗೆ ತೀವ್ರವಾದ ಕಾರಣ. ಕಾಲವಿಳಂಬವನ್ನು ಸಹಿಸಲಾರದೆ ಉತ್ಕಟೇಚ್ಛೆಯಿಂದ ಕೂಡಿ ಶ್ರದ್ಧಾವಂತನಾಗಿ ಎಂದು ಗುರುಮುಖದಿಂದ ಈ ಪರಮಾರ್ಥ ಮಾರ್ಗವನ್ನು ತಿಳಿಯುವನೋ ಆಗಲೇ ಅಂತಹ ವ್ಯಕ್ತಿಗೆ ಮಹತ್ತರವಾದ ಶಿವಾನುಗ್ರಹ ಪ್ರಾಪ್ತಿಯಾಗಿ ವಿಘ್ನಗಳೆಲ್ಲ ಕಳೆದು ಜೀವನ್ಮುಕ್ತನಾಗುವನು.

ಸರ್ವೋತ್ತೀರ್ಣಂ ರೂಪಂ
ಸೋಪಾನ ಪದ ಕ್ರಮೇಣ ಸಂಶ್ರಯತಃ
ಪರತತ್ತ್ವ ರೂಢಿಲಾಭೇ
ಪರ್ಯಂತೇ ಶಿವಮಯೀಭಾವಃ ೯೭

(ಹೀಗೆ ಅದ್ಭುತರೀತಿಯಲ್ಲಿ ಒಮ್ಮೆಗೇ ಶಿವತ್ವವನ್ನು ಪಡೆಯುವೆ) ಸರ್ವ ತತ್ತ್ವಗಳನ್ನೂ ಉಲ್ಲಂಘಿಸಿದ ಆ ಶಿವಸ್ವರೂಪವನ್ನು ಮೆಟ್ಟಲು ಮೆಟ್ಟಲಾಗಿ ಸೋಪಾನವನ್ನು ಏರುವಂತೆ ಏರಿ ಮುಟ್ಟಲು ತೊಡಗುವ ಯೋಗಿಗೆ ಪರ ತತ್ತ್ವದ ಒಳಕೆ ಬಂದು ಬಿಟ್ಟರೆ ಶರೀರಾವಸಾನದಲ್ಲಿ ಶಿವಮಯತ್ವವುಂಟಾಗುವುದು.

ತಸ್ಯ ತು ಪರಮಾರ್ಥಮಯೀಂ
ಧಾರಾಮಗತಸ್ಯ ಮಧ್ಯೆ ವಿಶ್ರಾಂತೇಃ
ತತ್ಪದಲಾಭೋತ್ಸುಕ ಚೇ
ತಸೋಽಪಿ ಮರಣಂ ಕದಾಚಿತ್ಸ್ಯಾತ್ ೯೮

ಯೋಗ ಭ್ರಷ್ಟಃ ಶಾಸ್ತ್ರೇ
ಕಥಿತೋಽಸೌ ಚಿತ್ರಯೋಗಭುವನಪತಿಃ
ವಿಶ್ರಾಂತಿ ಸ್ಥಾನ ವಶಾತ್
ಭೂತ್ವಾ ಜನ್ಮಾಂತರೇ ಶಿವೀಭವತಿ ೯೯

ಆ (ಸೋಪಾನ ಕ್ರಮ ಯೋಗಿಗೆ) ಸಾಧಕನಿಗೆ ಪರಮಾರ್ಥಮಯವಾದ ಯೋಗಧಾರೆಯು, ಮಧ್ಯದಲ್ಲಿ ಅವನು ವಿಶ್ರಾಂತಿಯನ್ನು ಅನುಭವಿಸಿದ ದೆಸೆಯಿಂದ ಪ್ರಾಪ್ತವಾಗದೆ, ಅದರಲ್ಲಿ ತೀವ್ರವಾದ ಅಭಿಲಾಷೆ ಇರುವ ಸ್ಥಿತಿಯಲ್ಲೇ ಮರಣ ಸಂಭವಿಸಬಹುದು. ಅಂತಹವನು ಶಾಸ್ತ್ರದಲ್ಲಿ ಯೋಗಭ್ರಷ್ಟನೆನಿಸಿಕೊಂಡಿರುವನು. ವಿಚಿತ್ರ ಭೋಗವನ್ನು ಒದಗಿಸುವ ಲೋಕಗಳಲ್ಲಿ ಅವನು ಆಧಿಪತ್ಯವನ್ನು ನಡೆಸಿ ಜನ್ಮಾಂತರದಲ್ಲಿ ಪೂರ್ವಯೋಗ ಸಂಸ್ಕಾರ ಬಲದಿಂದ ಶಿವನಾಗುವನು.

(ಹೀಗೆ ಸೋಪಾನ ಕ್ರಮವನ್ನು ಅವಲಂಬಿಸಿ ನಡೆಯುವ) ಆ ಸಾಧಕನು ಪರಮಾರ್ಥವಾದ ಶಿವಮಯೀ ಭಾವದ ಯೋಗಧಾರೆಯನ್ನು ಮುಟ್ಟಲಿಕ್ಕೆ ಮುಂಚೆ

(ನಡುವೆ ಉಂಟಾಗ ಬಹುದಾದ ಪ್ರಭಾವಾನುಭವಗಳ ಸಂತೋಷದಲ್ಲಿ ಪ್ರಲೋಭನ ವುಂಟಾಗಿ) ಗುರಿಯನ್ನು ಮುಟ್ಟುವ ಉತ್ಕಟೇಚ್ಛೆಯಿದ್ದರೂ ಸ್ವಲ್ಪಕಾಲ ವಿಶ್ರಾಂತ ನಾಗಬಹುದು. ಒಂದು ವೇಳೆ ಆ ದಶೆಯಲ್ಲಿ ಸಾಧನೆಗೆ ಮುಂಚೆ ಆತನು ಸತ್ತರೂ ಸಾಯಬಹುದು. ಅಂಥವನು ಶಾಸ್ತ್ರದಲ್ಲಿ ಯೋಗ ಭ್ರಷ್ಟನೆನಿಸುವನು. ಆತನು ತಾನು ವಿಶ್ರಾಂತನಾದ ಯೋಗಸ್ಥಾನದ ಮಹಿಮೆಯಿಂದ ವಿಚಿತ್ರ ಭೋಗಗಳಿಗೆ ಆಕರ ವಾದ ಲೋಕಗಳಿಗೆ ಅಧಿಪತಿಯಾಗಿದ್ದು ಅನ್ಯ ಜನ್ಮದಲ್ಲಿ ಶಿವನಾಗುವನು.

ಪರಮಾರ್ಥ ಮಾರ್ಗಮೇನಂ
ಅಭ್ಯಸ್ಯಾಪ್ರಾಪ್ಯ ಯೋಗಮಪಿ ನಾಮ
ಸುರಲೋಕ ಭೋಗ ಭಾಗೀ
ಮುದಿತಮನಾಃ ಮೋದತೇ ಸುಚಿರಂ ೧೦೦

ವಿಷಯೇಷು ಸಾರ್ವಭೌಮಃ
ಸರ್ವಜನ್ಯೈಃ ಪೂಜ್ಯತೇ ಯಥಾ ರಾಜಾ
ಭುವನೇಷು ಸರ್ವದೇವ್ಯೈಃ
ಯೋಗಭ್ರಷ್ಟಃ ತಥಾ ಪೂಜ್ಯಃ ೧೦೧

ಈ ಪರಮಾರ್ಥ ಮಾರ್ಗವನ್ನು ಅಭ್ಯಾಸಮಾಡಿ ಕೂಡಲೇ ಯೋಗವನ್ನು ಪಡೆಯದಿದ್ದರೆ ಅವನು ಸುರಲೋಕದ ಭೋಗಗಳಿಗೆ ಭಾಗಿಯಾಗಿ ಸಂತುಷ್ಟಚಿತ್ತನಾಗಿ ಬಹಳ ಕಾಲ ಸುಖಿಸುವನು. ಚಕ್ರವರ್ತಿಯು ರಾಜ್ಯದಲ್ಲಿನ ಸರ್ವ ಪ್ರಜೆಗಳಿಂದ ಪೂಜಿತನಾಗುವಂತೆ ಯೋಗಭ್ರಷ್ಟನು ದಿವ್ಯ ಲೋಕಗಳಲ್ಲಿ ಎಲ್ಲ ದೇವತೆಗಳಿಂದ ಪೂಜಿಸಲ್ಪಡುವನು

ಮಹತಾ ಕಾಲೇನ ಪುನ
ಮಾರ್ನುಷ್ಯಂ ಪ್ರಾಪ್ಯ ಯೋಗಮಭ್ಯಸ್ಯ

ಪ್ರಾಪ್ನೋತಿ ದಿವ್ಯಮಮೃತಂ
ಯಸ್ಮಾದಾವರ್ತತೇ ನ ಪುನಃ ೧೦೨

ಹಲವು ಕಾಲ ಹೀಗಿದ್ದ ಬಳಿಕ ಪುನಃ ಮನುಷ್ಯತ್ವವನ್ನು ಹೊಂದಿ ಯೋಗವನ್ನು ಅಭ್ಯಾಸಮಾಡಿ ದಿವ್ಯವಾದ ಪುನರಾವೃತ್ತಿಯಿಲ್ಲದ ಅಮೃತವನ್ನು ಪಡೆಯುವನು.

ತಸ್ಮಾತ್ ಸನ್ಮಾರ್ಗೇಽಸ್ಮಿನ್
ನಿರತೋ ಯಃ ಕಶ್ಚಿದೇತಿ ಸ ಶಿವತ್ವಂ
ಇತಿ ಮತ್ವಾ ಪರಮಾರ್ಥೇ
ಯಥಾ ತಥಾಪಿ ಪ್ರಯತನೀಯಂ ೧೦೩

ಆದುದರಿಂದ ಈ ಸನ್ಮಾರ್ಗದಲ್ಲಿ ನಿರತನಾದ ಯಾವನೇ ಆದರೂ ಶಿವತ್ವವನ್ನು ಹೊಂದಿಯೇ ಹೊಂದುವನು. ಇದನ್ನು ಅರಿತುಕೊಂಡು ಈ ಪರಮಾರ್ಥದ ವಿಷಯದಲ್ಲಿ ಯಾವ ರೀತಿಯಲ್ಲಾದರೂ ಪ್ರಯತ್ನಶೀಲರಾಗಬೇಕು.

ಇದಮಭಿನವಗುಪ್ತೋದಿತ
ಸಂಕ್ಷೇಪಂ ಧ್ಯಾಯತಃ ಪರಂ ಬ್ರಹ್ಮ
ಅಚಿರಾದೇವ ಶಿವತ್ವಂ
ನಿಜ ಹೃದಯಾವೇಶಮಭ್ಯೇತಿ ೧೦೪

ಅಭಿನವಗುಪ್ತನಿಂದ ಹೀಗೆ ಸಂಕ್ಷೇಪವಾಗಿ ಸೂಚಿಸಲ್ಪಟ್ಟ ಪರಬ್ರಹ್ಮವನ್ನು ಧ್ಯಾನ ಮಾಡುವವನ ಹೃದಯವು ಸ್ವಲ್ಪವೇ ಕಾಲದಲ್ಲಿ ಬಹಳ ಬೇಗ, ಶಿವತ್ವದ ಪ್ರಕಾಶಸ್ಥಾನವಾಗಿ ಬಿಡುವುದು.

ಆರ್ಯಾಶತೇನ ತದಿದಂ
ಸಂಕ್ಷಿಪ್ತಂ ಶಾಸ್ತ್ರಸಾರಮತಿಗೂಢಂ
ಅಭಿನವಗುಪ್ತೇನ ಮಯಾ
ಶಿವಚರಣ ಸ್ಮರಣ ದೀಪ್ತೇನ ೧೦೫

ಶಿವ ಚರಣ–ಸ್ಮರಣ-ದೀಪ್ತವಾದ ಚೇತಸ್ಸುಳ್ಳ ಅಭಿನವಗುಪ್ತನಾದ ನನ್ನಿಂದ ಈ ನೂರು ಆರ್ಯೆಗಳಲ್ಲಿ ಅತಿಗೂಢವಾದ ಶಾಸ್ತ್ರಸಾರವು ಸಂಗ್ರಹಿಸಲ್ಪಟ್ಟಿತು.

— ಇತಿ ಶಿವಂ —